ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 21
ಮೇ 20, 2012

ಪುಟ 16 ರೂ. 5/-

Blog: janashakthi.wordpress.com e-mail: js_weekly@yahoo.com






ಭೂಸುಧಾರಣೆ ಅಪ್ರಸ್ತುತವಲ್ಲ : ತುರ್ತು ಅಗತ್ಯ





ಅಂಗವಿಕಲ-ವಿಧವಾ-ವೃದ್ಧಾಪ್ಯ ವೇತನ 'ಕಡಿತ ಯೋಜನೆ'ಗೆ ಹಿನ್ನಡೆ

ಹಾಸನ : ಇಲ್ಲಿ ಹೋರಾಟವೇ ಮೇ ದಿನಾಚರಣೆ



ಯುರೋಪಿನಲ್ಲಿ ಅಧಿಕಾರಸ್ಥರ ಸೋಲುಗಳ ಅಲೆ

ಸಂಪುಟ ವಿಸ್ತರಣೆ ಮಾತು ಕದನದ ಕಹಳೆ

"ನಾವು ಗೆದ್ದೇ ಗೆಲ್ಲುತ್ತೇವೆ ಬಲಿಷ್ಠರಾಗಿ ಎದ್ದು ಬರುತ್ತೇವೆ"

ಪ್ರಕಾಶ್ ಕಾರಟ್

ಇದು ಸಿಪಿಐ(ಎಂ) 20ನೇ ಮಹಾಧಿವೇಶನದಲ್ಲಿ ಪ್ರಕಾಶ್ ಕಾರಟ್ ಮಂಡಿಸಿದ ಕರಡು ರಾಜಕೀಯ ನಿರ್ಣಯ ಮತ್ತು ಆ ಕುರಿತು ಮಹಾಧಿವೇಶನ ನಡೆಸಿದ ಚರ್ಚೆಯ ಸಾರವನ್ನು ನೀಡುವ ವರದಿ. ವರದಿಯ ಭಾಗ-2 ಈ ಸಂಚಿಕೆಯಲ್ಲಿ.


ರಾಜಕೀಯ ನಿರ್ಣಯದ ಕುರಿತು ಮಾತನಾಡುತ್ತಾ ಮೊದಲು ಅಂತರ್‌ರಾಷ್ಟ್ರೀಯ ವಿಷಯಗಳನ್ನು ಕಾರಟ್ ಪ್ರಸ್ತಾಪ ಮಾಡಿದರು. ಇತ್ತೀಚಿನ ಜಾಗತಿಕ ಆರ್ಥಿಕ ಬಿಕ್ಕಟ್ಟು 1930ರ ಮಹಾ ಕುಸಿತದ ನಂತರದ ತೀರ ಕೆಟ್ಟದ್ದು ಎಂದು ಹೇಳಿದ ಕಾರಟ್ ಮುಂದುವರಿದ ಬಂಡವಾಳಶಾಹಿ ದೇಶಗಳ ಮೇಲೆ ಈ ಬಿಕ್ಕಟ್ಟು ಹೆಚ್ಚು ಪರಿಣಾಮ ಬೀರಿದೆ ಎಂದರು. ಈ ದೇಶಗಳಲ್ಲಿ ಹೋರಾಟಗಳು ಮತ್ತು ಚಳುವಳಿಗಳು ನಡೆಯುತ್ತಿದ್ದಾಗ್ಯೂ, ಅಲ್ಲಿ ಎಡಪಂಥೀಯ ಪರ್ಯಾಯ ಶಕ್ತಿಗಳು ಇಲ್ಲದಿರುವುದರಿಂದ ಯಾರೂ ಇವುಗಳ ಬಗ್ಗೆ ಭ್ರಮೆಗಳನ್ನು ಇಟ್ಟುಕೊಳ್ಳುವ ಅಗತ್ಯವಿಲ್ಲ. ಬಹುತೇಕ ದೇಶಗಳಲ್ಲಿ ಬಲಪಂಥೀಯ ಸರ್ಕಾರಗಳು ಅಧಿಕಾರಕ್ಕೆ ಬರುತ್ತಿವೆ. ಹೀಗಿರುವಾಗ, ಲ್ಯಾಟಿನ್ ಅಮೆರಿಕಾ (ದಕ್ಷಿಣ ಅಮೆರಿಕಾ) ದೇಶಗಳಲ್ಲಿ ಜಗತ್ತಿನಲ್ಲೇ ಅತ್ಯಂತ ಧನಾತ್ಮಕ ಬೆಳವಣಿಗೆಗಳು ಘಟಿಸುತ್ತಿವೆ; ಅಲ್ಲಿ ಎಡಪಂಥೀಯರು ಮುನ್ನಡೆ ಸಾಧಿಸಿದ್ದಾರೆ, ರಾಜಕೀಯವಾಗಿ ಮನ್ನಣೆ ಗಳಿಸುತ್ತಿದ್ದಾರೆ ಮತ್ತು ಪ್ರಗತಿಯತ್ತ ದಾಪುಗಾಲು ಹಾಕುತ್ತಿದ್ದಾರೆ ಎಂದ ಕಾರಟ್ ವೆನಿಜೂವೆಲ, ಇಕ್ವೆಡಾರ್ ಹಾಗೂ ಬೊಲಿವಿಯಾ ದೇಶಗಳಲ್ಲಿನ ಬೆಳವಣಿಗೆಗಳ ಉದಾಹರಣೆಗಳನ್ನು ಕೊಟ್ಟರು.

ಅಮೆರಿಕಾವು ಅಲ್ಲಿಯ ಬಿಕ್ಕಟ್ಟಿನಿಂದಾಗಿ ಆರ್ಥಿಕವಾಗಿ ನಷ್ಟ ಅನುಭವಿಸುತ್ತಿದ್ದು ದೀರ್ಘ ಕಾಲದ ಹಿಂಜರಿತದ ಸುಳಿಯಲ್ಲಿ ಸಿಕ್ಕಿಕೊಂಡಿದ್ದರೂ ಅದು ತನ್ನ ಆಕ್ರಮಣಕಾರಿ ಬುದ್ಧಿಯನ್ನು ಬಿಟ್ಟಿಲ್ಲ. ಲಿಬಿಯಾದ ಮೇಲಿನ ಆಕ್ರಮಣದ ನಂತರ ಇರಾನ್ ಮೇಲೆ ಅಂತಿಮ ಗುರಿ ಇಟ್ಟು ಈಗ ಸಿರಿಯಾದ ಮೇಲೆ ತನ್ನ ಕಣ್ಣು ಹಾಕಿದೆ; ತನಗಾಗದ ದೇಶಗಳ ಮೇಲೆ ಗುರಿಯಿಡುವುದರ ಮೂಲಕ, ಅಮೆರಿಕಾವು ಪಶ್ಚಿಮ ಏಶಿಯಾದಲ್ಲಿನ ಬಂಡಾಯಗಳ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದೆ ಎಂದ ಕಾರಟ್‌ರವರು ಮತ್ತೊಂದು ಮುಖ್ಯವಾದ ವೈಶಿಷ್ಟ್ಯತೆಯನ್ನು ಟಿಪ್ಪಣಿ ಮಾಡುತ್ತಾ ಜಗತ್ತಿನಲ್ಲಿ ಬಹುಧ್ರುವೀಕರಣ (ಮಲ್ಟಿಪೋಲಾರಿಟಿ) ಬಲಗೊಳ್ಳುತ್ತಿರುವುದು ಸುಸ್ಪಷ್ಟವಾಗಿದೆ ಎಂದರು. ಈಗ ಸೊಲ್ಲಡಗಿದ್ದರೂ, ಮುಂದಿನ ದಿನಗಳಲ್ಲಿ ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯಗಳು ತೀವ್ರಗೊಳ್ಳಲಿವೆ. ಅದಲ್ಲದೆ, ಸಾಮ್ರಾಜ್ಯಶಾಹಿಗಳು ಹಾಗೂ ಮೂರನೇ ಜಗತ್ತಿನ ಜನರ ನಡುವಿನ ವೈರುಧ್ಯ ಮತ್ತು ಅಭಿವೃದ್ಧಿಶೀಲ ದೇಶಗಳ ಆಳುವವರು ಹಾಗೂ ಅಲ್ಲಿಯ ಜನರ ನಡುವಿನ ವೈರುಧ್ಯ ಕೂಡ ತೀವ್ರವಾಗಿಯೇ ಆಗುತ್ತವೆ.

ದಕ್ಷಿಣ ಏಶಿಯಾದ ಬೆಳವಣಿಗೆಗಳ ಬಗ್ಗೆ ಹೇಳುತ್ತಾ ಭಾರತ ಬಾಂಗ್ಲಾದೇಶ ನಡುವಿನ ಉತ್ತಮವಾದ ಬಾಂಧವ್ಯ ಮತ್ತು ನೇಪಾಳದಲ್ಲಿನ ಪರಿವರ್ತನೆಗಳ ಕುರಿತು ಕಾರಟ್‌ರವರು ಮಾತನಾಡಿದರು. ನೇಪಾಳದಲ್ಲೀಗ ಮುಂದುವರಿಯುವ ವಿಚಾರದಲ್ಲಿ ಇಕ್ಕಟ್ಟಿನ ಸ್ಥಿತಿ ಉಂಟಾಗಿದ್ದರೂ, ಅದಕ್ಕೆ ಪರಿಹಾರ ದೊರೆತು ಪರಿವರ್ತನೆ ಸಾಂಸ್ಥಿಕ ರೂಪ ಪಡೆಯುತ್ತದೆ ಎಂದು ಆಶಿಸಿದರು. ಪಾಕಿಸ್ತಾನದ ಬಗ್ಗೆ ಹೇಳುವುದಾದರೆ, ಅಲ್ಲಿ ಹುಟ್ಟಿಕೊಂಡಿರುವ ಮೂಲಭೂತವಾದಿ ಭಯೋತ್ಪಾದಕ ಶಕ್ತಿಗಳಿಂದಾಗಿ ಭವಿಷ್ಯ ಮಸುಕಾಗಿದೆ. ಪಾಕಿಸ್ತಾನ ಮತ್ತು ಅಮೆರಿಕಾ ನಡುವಿನ ಸಂಬಂಧ ಹಳಸುತ್ತಿದೆ. ಅಲ್ಲಿಯ ನಾಗರಿಕ ಸರ್ಕಾರ ಭಾರತದೊಂದಿಗಿನ ಸಂಬಂಧವನ್ನು ಉತ್ತಮಪಡಿಸಲು ಪ್ರಯತ್ನಿಸುತ್ತಿದೆ. ಶ್ರೀಲಂಕಾ ಸರ್ಕಾರವು ಶಾಶ್ವತವಾದ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಒಂದು ರಾಜಕೀಯ ಒಪ್ಪಂದ ಮಾಡಿಕೊಳ್ಳಲು ಗಂಭೀರ ಪ್ರಯತ್ನ ಮಾಡುತ್ತಿಲ್ಲ ಎಂದರು. ಎಲ್.ಟಿ.ಟಿ.ಇ. ವಿರುದ್ಧ ಸಾರಿದ ಯುದ್ಧದ ಸಂದರ್ಭದಲ್ಲಿ ನಡೆದ ಗಂಭೀರ ಮಾನವ ಹಕ್ಕುಗಳ ಉಲ್ಲಂಘನೆಗೆ ಒಳಗಾದ ಸಂತ್ರಸ್ತರಿಗೆ ಪುನರ್ವಸತಿಯಾಗಲೀ ಅಥವಾ ನ್ಯಾಯವಾಗಲೀ ಅಲ್ಲಿ ಇನ್ನೂ ಸಿಕ್ಕಿಲ್ಲ.

ರಾಷ್ಟ್ರೀಯ ಸನ್ನಿವೇಶ

ಕರಡು ರಾಜಕೀಯ ನಿರ್ಣಯದಲ್ಲಿ ಯುಪಿಎ ಸರ್ಕಾರದ ಆರ್ಥಿಕ ನೀತಿಗಳ ವಿರುದ್ಧ ಮತ್ತು ಅದು ವಿವಿಧ ಜನ ವಿಭಾಗಗಳ ಮೇಲೆ ಹಾಗೂ ಆರೋಗ್ಯ, ಶಿಕ್ಷಣ ಮುಂತಾದ ಸಾಮಾಜಿಕ ವಲಯದ ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ ಎಂಬುದರ ಬಗ್ಗೆ ಒತ್ತು ನೀಡಲಾಗಿದೆ ಎಂದು ಕಾರಟ್ ಹೇಳಿದರು.



ಹಿಂದಿನ ಎಲ್ಲಾ ಸ್ವರೂಪಕ್ಕಿಂತ ಭಿನ್ನವಾದ ರೀತಿಯಲ್ಲಿ ಭ್ರಷ್ಟಾಚಾರ ವ್ಯಾಪಕವಾಗಲು ಈ

ವರದಿ-ಎನ್.ಎಸ್.ಅರ್ಜುನ್
ಕನ್ನಡಕ್ಕೆ : ಟಿ. ಸುರೇಂದ್ರ ರಾವ್

ನೀತಿಗಳೇ ಕಾರಣ. ಯುಪಿಎ 2 ಸರ್ಕಾರದ ನೀತಿಗಳು ಭ್ರಷ್ಟಾಚಾರವು ಲೂಟಿ ಮತ್ತು ಕ್ರೋಢೀಕರಣದ ಅವಿಭಾಜ್ಯ ಅಂಗವಾಗುವ ರೀತಿಯಲ್ಲಿ ಇಂಬು ಕೊಡುತ್ತಿವೆ. ಮನಮೋಹನ್ ಸಿಂಗ್ ಸರ್ಕಾರವು ದಿಕ್ಕೇ ತೋಚದಂತಾಗಿ ಶಕ್ತಿಹೀನತೆಯಿಂದ ನರಳುತ್ತಿದ್ದು 2009ರ ಚುನಾವಣಾ ವಿಜಯದ ನಂತರ ಆ ಸರ್ಕಾರದ ಬಗೆಗಿನ ಜನಾಭಿಪ್ರಾಯ ಪಾತಾಳಕ್ಕಿಳಿದಿದೆ. ಯುಪಿಎ ಮೈತ್ರಿಕೂಟ ದುರ್ಬಲಗೊಂಡಿದ್ದರೂ ಮಧ್ಯಂತರ ಚುನಾವಣೆ ಎದುರಿಸಲು ಯಾರಿಗೂ ಧೈರ್ಯವಿಲ್ಲದಿರುವುದರಿಂದ ಸರ್ಕಾರ ಜೀವ ಹಿಡಿದುಕೊಂಡಿದೆಯಷ್ಟೆ.

2009ರ ಲೋಕಸಭಾ ಚುನಾವಣೆಯಲ್ಲಿ ಎರಡನೇ ಬಾರಿ ಸೋಲುಂಡಿರುವ ಬಿಜೆಪಿ ಇನ್ನೂ ಚೇತರಿಸಿಕೊಂಡಿಲ್ಲ; ಅದರ ದುರವಸ್ಥೆಯನ್ನು ಸರಿಪಡಿಸಲು ಆರ್‌ಎಸ್‌ಎಸ್ ಶತಾಯ ಗತಾಯ ನಡೆಸುತ್ತಿರುವ ಪ್ರಯತ್ನ ಏನೂ ಪ್ರಯೋಜನವಾಗುತ್ತಿಲ್ಲ. ಕಾಂಗ್ರೆಸ್ ವಿರೋಧಿ ಪಕ್ಷಗಳು ಬಿಜೆಪಿಯಿಂದ ದೂರ ಉಳಿಯಲು ಬಯಸುತ್ತಿರುವುದರಿಂದ ಒಂದು ರಾಜಕೀಯ ಮೈತ್ರಿಕೂಟವಾಗಿ ಎನ್‌ಡಿಎ ಬೆಳೆಯುತ್ತಿಲ್ಲ. ಹೀಗಿದ್ದಾಗ್ಯೂ, ಬಿಜೆಪಿಯು ಏಳು ರಾಜ್ಯಗಳಲ್ಲಿ ಬಲಶಾಲಿಯಾಗಿರುವುದರಿಂದ ಅದನ್ನು ಕೀಳಂದಾಜು ಮಾಡಲಾಗದು ಎಂದು ಕಾರಟ್ ಹೇಳಿದರು.

ಪ್ರಾದೇಶಿಕ ಬಂಡವಾಳಶಾಹಿಗಳನ್ನು ಪ್ರತಿನಿಧಿಸುವ ಪ್ರಾದೇಶಿಕ ಪಕ್ಷಗಳು ಅವು ಕಾರ್ಯನಿರ್ವಹಿಸುತ್ತಿರುವ ರಾಜ್ಯಗಳಲ್ಲಿ ಜನಬೆಂಬಲ ಹೊಂದಿವೆ. ಸಮಸ್ಯೆಗಳ ಆಧಾರದಲ್ಲಿ ಆ ಪಕ್ಷಗಳ ಜತೆ ಜಂಟೀ ಕಾರ್ಯಾಚರಣೆಗಳನ್ನು ನಡೆಸಬಹುದು ಎಂಬುದು ಸಿಪಿಐ(ಎಂ)ನ ಧೋರಣೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಗ್ಗೆ ಹೇಳುವುದಾದರೆ, ಕಳೆದ ಮಹಾಧಿವೇಶನದ ನಂತರದ ಅವಧಿಯಲ್ಲಿ ಅವುಗಳ ಸ್ಥಿತಿ ದುರ್ಬಲವಾಗಿದೆ. ತನ್ನ ಸ್ವತಂತ್ರ ಶಕ್ತಿಯನ್ನು ಉತ್ತಮಪಡಿಸಿಕೊಳ್ಳುವುದು ಹೇಗೆ ಎನ್ನುವುದೇ ಪಕ್ಷದ ಮುಂದಿರುವ ಮುಖ್ಯ ಪ್ರಶ್ನೆಯಾಗಿದೆ. ಬಂಗಾಳದಲ್ಲಿ ಕಳೆದುಕೊಂಡಿರುವ ನೆಲೆಯನ್ನು ಮತ್ತೆ ಪಡೆಯುವುದು ಹಾಗೂ ಜನಸಮುದಾಯವನ್ನು ಸಂಘಟಿಸಿ ನಮ್ಮ ಮೇಲೆ ಆಗುತ್ತಿರುವ ದಾಳಿಯನ್ನು ನಿವಾರಿಸಿಕೊಂಡು ಮುಂದೆ ಹೋಗುವುದು ಹೇಗೆ ಎನ್ನುವುದೂ ಕೂಡ ಪ್ರಮುಖವಾದ ಅಂಶ ಎಂದರು. ಕೇರಳದಲ್ಲಿ ಕೂಡ ನಮ್ಮಲ್ಲಿರುವ ದೌರ್ಬಲ್ಯವನ್ನು ಹೋಗಲಾಡಿಸಿಕೊಂಡು ಮತ್ತು ನಮ್ಮಿಂದ ದೂರವಿರುವವರನ್ನು ನಮ್ಮತ್ತ ಬರುವಂತೆ ಮಾಡುವುದು ತಕ್ಷಣದ ಅಗತ್ಯ. ತ್ರಿಪುರಾದಲ್ಲಿ ಎಡರಂಗ ಸರ್ಕಾರದ ಸದೃಢ ಸಾಧನೆಗಳು ಆಳುವ ವರ್ಗಗಳ ಕಣ್ಣು ಕೆಂಪುಮಾಡಿವೆ. ಬಂಗಾಳದ ಚುನಾವಣೆಯ ನಂತರ, ಕಾಂಗ್ರೆಸ್ ಹಾಗೂ ಪ್ರತಿಗಾಮಿ ಶಕ್ತಿಗಳು ತ್ರಿಪುರಾದ ಎಡರಂಗ ಸರ್ಕಾರವನ್ನು ಹೇಗಾದರೂ ಮಾಡಿ ಶಿಥಿಲಗೊಳಿಸುವ ಗಂಭೀರ ಪ್ರಯತ್ನಗಳನ್ನು ಮಾಡುತ್ತಿವೆ. ಈ ಎಲ್ಲಾ ಕುತಂತ್ರಗಳನ್ನು ವಿಫಲಗೊಳಿಸಿ ಮುಂದಿನ ವರ್ಷದ ವಿಧಾನ ಸಭಾ ಚುನಾವಣೆಯಲ್ಲಿ ಎಡರಂಗವು ಜಯಶಾಲಿಯಾಗುತ್ತದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಮುಂದಿನ ದಿನಗಳಲ್ಲಿ ಪಕ್ಷದ ರಾಜಕೀಯ ನಿಲುವು ಹೇಗಿರಬೇಕೆಂದರೆ, ಪಕ್ಷದ ಸ್ವತಂತ್ರ ಶಕ್ತಿಯನ್ನು ಹೆಚ್ಚಿಸುವ ನಿರ್ಣಾಯಕ ಸವಾಲನ್ನು ಯಶಸ್ವಿಯಾಗಿ ನಿರ್ವಹಿಸುವುದು ನಮಗೆ ಸಾಧ್ಯವಾಗಲೇಬೇಕು. ಪಕ್ಷವು ಹೋರಾಟ ನಡೆಸಬೇಕು, ಕಾಂಗ್ರೆಸ್ಸನ್ನು ಸೋಲಿಸಬೇಕು, ಬಿಜೆಪಿಯನ್ನು ಮೂಲೆಗುಂಪಾಗಿಸಬೇಕು ಮತ್ತು ಎಡ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟಲು ಶ್ರಮಿಸಬೇಕು. ಎಡ ಹಾಗೂ ಪ್ರಜಾಸತ್ತಾತ್ಮಕ ವೇದಿಕೆಯಡಿಯಲ್ಲಿ ಚಳುವಳಿಗಳನ್ನು ಕಟ್ಟುವ ಮೂಲಕ ಹೊರಹೊಮ್ಮ

-ಪುಟ 12ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಬೀಜ, ಗೊಬ್ಬರದ ಕೊರತೆ : ಸರಕಾರದ ವೈಫಲ್ಯ, ಖಂಡನೀಯ ವರ್ತನೆ

ಮುಂಗಾರು ಮಳೆಯಾದ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ. ಬಿತ್ತನೆಯ ಕಾರ್ಯಕ್ಕೂ ರೈತರು ಮುಂದಾಗುತ್ತಿದ್ದಾರೆ. ಹೀಗಾಗಿ ಬೀಜ, ಗೊಬ್ಬರಕ್ಕಾಗಿ ಬೇಡಿಕೆಯೂ ಹೆಚ್ಚಿದೆ. ಇವುಗಳನ್ನು ಪರಿಗಣಿಸಿ ಬೀಜ, ಗೊಬ್ಬರ ಹಾಗೂ ಇತರೆ ಕೃಷಿ ಸಂಬಂಧಿ ಪರಿಕರಗಳನ್ನು ಪೂರೈಸುವುದು ಸರಕಾರದ ಆದ್ಯ ಕರ್ತವ್ಯವಾಗಿದೆ.

ಆದರೆ ಇಂದು ರೈತರು ಬೀಜ, ಗೊಬ್ಬರಕ್ಕಾಗಿ ಪರದಾಡುವ ಸ್ಥಿತಿ ಸರಕಾರದ ನಿರ್ಲಕ್ಷ್ಯತನಕ್ಕೆ ಹಿಡಿದ ಕನ್ನಡಿಯಾಗಿದೆ. ಕಳೆದೊಂದು ವರುಷ ಬರಗಾಲ ಅನುಭವಿಸಿದ ಹಿನ್ನೆಲೆಯಲ್ಲೂ ಕೃಷಿಯ ತೀವ್ರತೆಯೂ ಇದೆ. ವಿಶೇಷವಾಗಿ ವಾಣಿಜ್ಯ ಬೆಳೆಯಾದ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಈ ಭಾರಿ ಕೆಲವೊಂದು ಕಂಪನಿಗಳ ವಿಶೇಷ ತಳಿ ಬೀಜಕ್ಕೆ ಅತೀ ಹೆಚ್ಚಿನ ಬೇಡಿಕೆ ಉಂಟಾಗಿದೆ. ಇದನ್ನು ಸರಿಯಾಗಿ ಅಂದಾಜಿಸಿ ಅಗತ್ಯ ಸಿದ್ಧತೆ ಮಾಡಿ ಸಮರ್ಪಕವಾಗಿ ಪೂರೈಸುವುದು ಕೃಷಿ ಇಲಾಖೆಯ ಆದ್ಯ ಕರ್ತವ್ಯ. ಆದರೆ ಉಂಟಾಗಿರುವ ಬೀಜದ ಕೊರತೆ ಗಮನಿಸಿದರೆ ಈ ದಿಶೆಯಲ್ಲಿ ಸರಕಾರದ, ಇಲಾಖೆಯ ವಿಫಲತೆ ಎದ್ದು ಕಾಣುತ್ತಿದೆ.

ಬೀಜಕ್ಕಾಗಿ ಹಲವು ದಿನಗಳಿಂದ ಕಾದಿದ್ದ ಹಾವೇರಿ ರೈತರ ಮೇಲೆ ಪೋಲೀಸರು ತೀವ್ರವಾಗಿ ಲಾಠಿ ಪ್ರಹಾರ ಮಾಡಿದ್ದು ಖಂಡನೀಯವಾಗಿದೆ. ಅಲ್ಲಿ 'ಕನಕ ' ಎಂಬ ಹತ್ತಿ ಬೀಜಕ್ಕೆ ಹಿಂದಿನ ದಿನವೇ ಸುಮಾರು ಹತ್ತು ಸಾವಿರಕ್ಕೂ ಅಧಿಕ ರೈತರು ಬಂದು ರಾತ್ರಿಯೆಲ್ಲಾ ನಿದ್ರೆಗೆಟ್ಟು ಕಾದಿದ್ದಾರೆ. ಕಳೆದ ಬಾರಿ ದೊರೆತ ಇಳುವರಿಯಿಂದಾಗಿ ಈ ಬಾರಿ ಈ ಬೀಜಕ್ಕೆ ಅತ್ಯಧಿಕ ಬೇಡಿಕೆ ಇದ್ದದ್ದು ಸರಕಾರಕ್ಕೆ ತಿಳಿಯದ ವಿಷಯವೇನಲ್ಲ. ಸರಕಾರವೇ ಅಂದಾಜಿಸಿದಂತೆ ಹಾವೇರಿ ಜಿಲ್ಲೆಯೊಂದರಲ್ಲಿಯೇ ಈ ವರುಷ 1 ಲಕ್ಷದ 7 ಸಾವಿರ ಎಕರೆಯಲ್ಲಿ ಹತ್ತಿ ಬೆಳೆಯುವ ಅಂದಾಜಿದೆ. ಇದಕ್ಕಾಗಿ ಈ ಸುತ್ತಿನಲ್ಲಿ 28,000 ಕೆ.ಜಿ. ಹತ್ತಿ ಬೀಜ ಬರಬೇಕಿತ್ತು . ಆದರೆ 18,051 ಪಾಕೀಟು ಮಾತ್ರ ಬಂದದ್ದು ತೀವ್ರ ಕೊರತೆಯನ್ನು ಉಂಟು ಮಾಡಿದೆ. ಸಮರ್ಪಕವಾಗಿ ಬೀಜ ಸಿಗದೇ ಇರುವಾಗ ಆತಂಕದಲ್ಲಿರುವ ರೈತರಲ್ಲಿ ಅತೃಪ್ತಿ ಸಹಜವೇ ಆಗಿದೆ. ಇಂತಹ ಸನ್ನಿವೇಶದಲ್ಲಿ ಸಮರ್ಪಕ ಬೀಜ ಪೂರೈಸುವ ಕ್ರಮವಹಿಸಿ ಸಮಾಧಾನ ಮಾಡಬೇಕಾಗಿದ್ದ ಸರಕಾರ ರೈತರನ್ನು ಶತೃಗಳಂತೆ ಬೆನ್ನಟ್ಟಿ ಹೊಡೆದದ್ದು ಅಮಾನವೀಯ.


ಕೃಷಿ ಸಚಿವರೇ ಉಸ್ತುವಾರಿಯಲ್ಲಿದ್ದ ಇದೇ ಹಾವೇರಿಯಲ್ಲಿ 2008 ರಲ್ಲಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದ ಸೋಗಲಾಡಿ ಬಿ.ಜೆ.ಪಿ. ಸರಕಾರ ಬೀಜ, ಗೊಬ್ಬರ ಕೇಳಿದ ರೈತರ ಮೇಲೆ ಲಾಠಿಗಳಿಂದ ಬಡಿದು ಬಂಧೂಕಿನಿಂದ ಗೋಲಿಬಾರ್ ನಡೆಸಿ ಇಬ್ಬರು ಅಮಾಯಕ ರೈತರನ್ನು ಬಲಿ ತೆಗೆದುಕೊಂಡಿತು. ಆಗಲೂ ಸರಕಾರದ ಕಾಳಜಿ ಇದ್ದದ್ದು ಬಿಜೆಪಿ ಪಕ್ಷದಲ್ಲಿದ್ದ ಕಾಳಸಂತೆಕೋರರು, ಸಚಿವರು, ಆಳುವ ಶಾಸಕರ ಹಿತಾಸಕ್ತಿಗಳ ಬಗ್ಗೆಯೇ ಹೊರತು ನೆಲದ ಮಕ್ಕಳ ಬಗೆಗಲ್ಲ ಎಂಬುದನ್ನು ಮುಂದೆ ತನಿಖೆಯ ಹೆಸರಿನಲ್ಲಿ 'ಸತ್ತವರು ರೈತರೇ ಅಲ್ಲ, ಗಲಭೆಯಾದದ್ದು ವಿರೋಧ ಪಕ್ಷಗಳ ಪಿತೂರಿಯಿಂದ' ಎಂಬ ಸರ್ಕಾರದ ನೀಚ ಹೇಳಿಕೆ ಸಾಬೀತುಗೊಳಿಸಿತು. ಈಗಲೂ ಇಂತಹ ಸನ್ನಿವೇಶ ಏರ್ಪಡುವಲ್ಲಿ ಅಂತಹುದೇ ಮಾಫಿಯಾಗಳ ಪಾತ್ರ ತಳ್ಳಿಹಾಕುವಂತಿಲ್ಲ .ಈ ಎಲ್ಲಾ ಘಟನೆಗಳಿಂದ ಪಾಠ ಕಲಿಯುವ ಬದಲು ಮತ್ತದೇ ಜನದ್ರೋಹಿ, ವಂಚಕ ನಾಟಕವನ್ನಾಡುತ್ತಿದೆ ಸರಕಾರ.

ಹಾಗಾಗಿಯೇ ಇಂದಿನ ಘಟನೆಗಳ ಕಾರಣಗಳನ್ನು ಪರಿಶೀಲಿಸದೇ ರೈತರ ಹತಾಶೆ, ಆಕ್ರೋಶಗಳ ಆಳ ಅರಿಯದೇ ಇದರ ಹಿಂದೆ ಪಿತೂರಿ ಇದೆ ಎಂಬಂತಹ ಮಾತನಾಡಿದ ಕೃಷಿ ಸಚಿವ ಉಮೇಶ್ ಕತ್ತಿಯವರ ಹೇಳಿಕೆ ಅತ್ಯಂತ ಹೊಣೆಗೇಡಿತನದ್ದೂ ಖಂಡನೀಯವೂ ಆಗಿದೆ. ನಿಜವಾದ ಪ್ರಶ್ನೆಗಳಿಗೆ ಪರಿಹಾರ ಒದಗಿಸುವ ಬದಲು ಇನ್ನೊಬ್ಬರ ಹೆಗಲಿಗೆ ವರ್ಗಾಯಿಸುವ, ಸ್ಥಾಪಿತ ಹಿತಾಸಕ್ತಿಗಳನ್ನು ಕಾಯುವ, ಸರಕಾರದ ವೈಫಲ್ಯಗಳನ್ನು ಮುಚ್ಚಿ ಹಾಕಿಕೊಳ್ಳುವ ಹುನ್ನಾರವಿದೆ. ರಾಜ್ಯದ ಜನತೆ ಇಷ್ಟೊಂದು ಗಂಭೀರ ಸಮಸ್ಯೆಗಳನ್ನು ಅನುಭವಿಸುತ್ತಿದ್ದರೂ ಮುಖ್ಯಮಂತ್ರಿಯನ್ನೂ ಒಳಗೊಂಡ ಇಡೀ ಸರಕಾರಕ್ಕೆ ಕಾಳಜಿ ಇಲ್ಲ. ಬದಲಾಗಿ ಖುರ್ಚಿ ಉಳಿಸಿಕೊಳ್ಳುವ, ಮಂತ್ರಿಗಳಾಗುವ ಅಧಿಕಾರದ ದಾಹವೇ ಪ್ರಧಾನವಾಗಿದೆ. ಸರಕಾರ ಆಡಳಿತ ಕುಸಿದು ಕಿತ್ತಾಟದಿಂದಾಗಿ ಅದು ತಲುಪಿರುವ ಅರಾಜಕ ಸ್ಥಿತಿಯ ದ್ಯೋತಕವಾಗಿದೆ. ಇದು ಇನ್ನಷ್ಟು ಗಂಭೀರವಾಗಲಿದೆ.

ಆದ್ದರಿಂದ ಈ ಕೂಡಲೇ ಸರಕಾರ ಬೀಜ ಮತ್ತು ಗೊಬ್ಬರದಂತಹ ಹಲವು ಜ್ವಲಂತ ಪ್ರಶ್ನೆಗಳಿಗೆ ಸಮರ್ಪಕ ಪರಿಹಾರ ಒದಗಿಸಲು ಸಮರೋಪಾದಿಯಲ್ಲಿ ತೊಡಗಬೇಕು. ಇಲ್ಲವಾದಲ್ಲಿ ಅಧಿಕಾರ ಬಿಟ್ಟು ತೊಲಗಬೇಕು.

ಸಂಪುಟದ ವಿಸ್ತರಣೆ ಮಾತು: ಕದನದ ಕಹಳೆ

'ನನ್ನ ಸಾಮರ್ಥ್ಯ ಏನೆಂದು ಯಾರೂ ಕೇಳುವ ಅಗತ್ಯ ಇಲ್ಲ. ಸಂದರ್ಭ ಬಂದಾಗ ತೋರಿಸುತ್ತೇನೆ'. ಮುಖ್ಯಮಂತ್ರಿ ಸದಾನಂದಗೌಡರು ಇಂತಹದ್ದೊಂದು ಮಾತನಾಡಿದ್ದು ಆತ್ಮ ವಿಶ್ವಾಸದಿಂದಲೋ ಅಥವಾ ಅಳುಕಿನಿಂದಲೋ ಹೇಳುವುದು ಕಷ್ಟ. ಆದರೆ ಈ ಮೊದಲಿದ್ದ ಹಾಗೆ ಗೌಡರು ಈಗಿಲ್ಲ. ಇದನ್ನು ಅವರೂ ಒಪ್ಪುತ್ತಾರೆ, ಯಡಿಯೂರಪ್ಪನವರೂ (ಡಾ.ವೈ) ಕೂಡ. ಅದರಲ್ಲೂ ಯಡಿಯೂರಪ್ಪ ಮತ್ತವರ ಕುಟುಂಬದ ಸದಸ್ಯರು ಎಸಗಿದ ಗಣಿ ಕಂಪನಿಗಳಿಂದ ಪಡೆದ ಕಪ್ಪ, ಡಿ-ನೋಟಿಫಿಕೇಷನ್ ಹಗರಣದಲ್ಲಿ ಸಿ.ಇ.ಸಿ. ಯು ಸಿ.ಬಿ.ಐ. ತನಿಖೆಗೊಪ್ಪಿಸಲು ಸುಪ್ರಿಂ ಕೋರ್ಟ್‌ಗೆ ಶಿಫಾರಸು ಮಾಡಿದ ನಂತರ ಯಡಿಯೂರಪ್ಪ ಕುಗ್ಗಿದ್ದಾರೆ, ಗೌಡರು ಹಿಗ್ಗಿದ್ದಾರೆ.! ಇದರ ಪರಿಣಾಮವಾಗಿ ರಾಜೀ ಯೂ ಆಗಿದ್ದಾರೆ. ಆದ್ದರಿಂದಲೇ ಇದೇ ಸಮಯವೆಂದು ತಮ್ಮ ಬೆಂಬಲಿಗರ ಶಕ್ತಿಯನ್ನು ಕ್ರೋಢೀಕರಿಸಲು ಮಂತ್ರಿಮಂಡಲ ವಿಸ್ತರಣೆಯ ಸಾಹಸಕ್ಕೆ ಕೈ ಹಾಕಿದ್ದು. ನಿಜಕ್ಕೂ ಇದನ್ನು ಮಾಡಬಹುದೇ ಎಂದು ಅನುಮಾನ ವ್ಯಕ್ತಪಡಿಸಿದವರಿಗೆ, ಛೇಡಿಸಿದವರಿಗೆ ಮೇಲಿನಂತೆ ಉತ್ತರ ಕೊಟ್ಟಿದ್ದು.



ಈ ಉತ್ಸಾಹವೇಕೆ?

ನಿರೀಕ್ಷೆಯಂತೆ ಈ ಕಸರತ್ತು ಬಿಜೆಪಿಯೊಳಗಿನ ಕಿತ್ತಾಟವನ್ನು ಹೆಚ್ಚಿಸಿದೆ, ಬಿರುಸೂಗೊಳಿಸಿದೆ. ವಿಸ್ತರಣೆ/ಪುನರ್ ರಚನೆ ಪ್ರಸ್ತಾಪ ತಿಳಿದು ಬರತೊಡಗಿದಂತೆ ಆಕಾಂಕ್ಷಿಗಳ ದಂಡು ಅಣಿ ನೆರೆಯತೊಡಗಿತಲ್ಲದೇ ಎರಡು ಬಿಟ್ಟಿರುವವರು ತಾವೆಂದೂ ಮೂರನೇ ಮೂಲ ನಿಷ್ಟ ಗುಂಪು ತಮ್ಮದೆಂದೂ ಮಂತ್ರಿಯಾಗಲು ಒಂಟಿ ಕಾಲಲ್ಲೇ ಕಾದು ನಿಂತಿರುವ ಸಿ.ಟಿ.ರವಿ ಅಂತಹವರು ಸಹಿಸಂಗ್ರಹಣಾ ಅಭಿಯಾನಕ್ಕೆ ಇಳಿದರು. ಈ ಗುಂಪು ಯಾವ ಮಟ್ಟಕ್ಕೆ ಮಾತನಾಡತೊಡಗಿತೆಂದರೆ ತಮ್ಮಲ್ಲಿ 80 ಶಾಸಕರ ಬಲವಿದೆಯೆಂದು ಹೇಳತೊಡಗಿದರು. ಅಂದರೆ 80 ರಷ್ಟು ಶಾಸಕರನ್ನು ರೆಸಾರ್ಟ್‌ನಲ್ಲಿ ಕೂಡಿಸಿಕೊಂಡದ್ದರಲ್ಲ ಅಷ್ಟು! . ಇದರಲ್ಲಿ ಸಚಿವ ಸಂಪುಟ ವಿಸ್ತರಣೆ ಈಗ ಬೇಡವೆನ್ನುತ್ತಿದ್ದ ಆರ್.ಎಸ್.ಎಸ್. ನ ಕುಮ್ಮಕ್ಕೂ ಇಲ್ಲದಿಲ್ಲ. ಇದು ಸದಾನಂದಗೌಡರಲ್ಲಿ ಉತ್ಸಾಹ ಹೆಚ್ಚಿಸಿದ್ದಷ್ಟೇ ಅಲ್ಲ ಈಶ್ವರಪ್ಪ ನವರು ಗರಿಗೆದರಿಸಿಕೊಂಡು ಎಲ್ಲವೂ ತನ್ನಿಂದಲೇ ನಡೆಯುತ್ತಿದೆ ಎಂಬಂತೆ ಫೋಜು ಹೊಡೆಯ ತೊಡಗಿದ್ದು . ಇದು ಯಡ್ಡಿ ಬಣಕ್ಕೆ ಸಿಟ್ಟು ಬರಿಸದೇ ಇದ್ದೀತೆ.


ಕಿತ್ತಾಟ,ಕೆಸರಾಟ

ಅಧಿಕಾರದ ಆಸೆ ಹುಟ್ಟಿಸಿ ಕೆಲವರನ್ನು ಸೆಳೆಯುವುದು, ಅಸಮರ್ಥರೆಂದು ಕೆಲವರನ್ನು ಕೈ ಬಿಡುವ ಮೂಲಕ ಯಡ್ಡಿಯ ಬಣದ ಶಕ್ತಿ ಕುಗ್ಗಿಸುವ ಲೆಕ್ಕಾಚಾರ ತಿಳಿಯದ್ದೇನಲ್ಲ. ಈ ಇಂಗಿತವಿರುವ ಪತ್ರವೊಂದನ್ನು ಗೌಡರು ಹೈಕಮಾಂಡ್ ಗೆ ಕಳುಹಿಸಿದ್ದಾರೆ. ಆರು ಸಚಿವರ ವಿರುದ್ಧ, ಯಡ್ಡಿ ಬಣ ಉಂಟು ಮಾಡಿದ ಅಧಿವೇಶನ ಬಹಿಷ್ಕಾರದಂತಹ ಇರುಸು ಮುರಿಸಿನ ಪ್ರಸಂಗಗಳನ್ನು ಉಲ್ಲೇಖಿಸಿದ್ದಾರೆ. ಈ ಪತ್ರ ಯಡಿಯೂರಪ್ಪನವರ ಕೈ ಸೇರುತ್ತಿದ್ದಂತೆ ಈಗ ಬೂದಿ ಮುಚ್ಚಿದ ಕೆಂಡವಾಗಿದ್ದ ಕಿತ್ತಾಟ ಮತ್ತೇ ಭುಗಿಲೇಳತೊಡಗಿದೆ. ಡಾ. ವೈ ಯ ಬಗೆಗಿನ ಸಿಇಸಿ ವರದಿ ಕುರಿತು ಸುಪ್ರಿಂ ತೀರ್ಪು ಹೊರ ಬೀಳುವುದನ್ನೇ ಆ ಬಣ ಕಾಯುತ್ತಿದೆ. ಒಂದು ವೇಳೆ ಸಿಬಿಐ ತನಿಖೆಗಾಗಿ ಡಾ. ವೈ ಜೈಲು ಸೇರಬೇಕಾಗಿ ಬಂದರೆ ಸಿ.ಎಂ. ಬದಲಾಯಿಸಬೇಕೆಂಬ ವರಾತವೂ ಇಲ್ಲವಾಗಿ , ಸಂಪುಟ ಪುನರಾರಚನೆ , ಹೊಸ ನೇಮಕಾತಿಯೂ ಸುಸೂತ್ರವಾಗಲಿದೆ ಎಂಬ

ಪುಟ 4ಕ್ಕೆ

ಕಾರ್ಟೂನ್ ಕಾರ್ನರ್

ರಾಜಾಸ್ತಾನ ಬಿಜೆಪಿ ಭಿನ್ನಮತ



‘ಜಾತಿ ವ್ಯವಸ್ಥೆ ದೈವ ನಿಯಾಮಕವಲ್ಲ; ಆಳುವವರು – ದುಡಿಯುವವರು ಎಂಬ ಭೇದದಿಂದ ಸೃಷ್ಟಿಯಾದದ್ದು’–

ಹಾಸನದಲ್ಲಿ ಸಿಪಿಐ(ಎಂ) ಪಕ್ಷವು ಸಂಘಟಿಸಿದ್ದ ಜಾತಿ ವ್ಯವಸ್ಥೆಯ ಮೂಲ ಬೇರುಗಳು ಎಂಬ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ವಿಚಾರ ಸರಣಿ ಹಾಗೂ ಕಾರ್ಯಕ್ರಮದ ವರದಿ.

ಜಿ.ಎನ್. ನಾಗರಾಜ್

ಜಾತಿ ವ್ಯವಸ್ಥೆಯು ದೈವ ನಿಯಾಮಕವೂ ಅಲ್ಲ, ದಶಾವತಾತರಗಳ ರೂಪಾಂತರಗಳ ವಿಷ್ಣುವಿನ ಪಾದತಳದಲ್ಲಿಯೂ ಹುಟ್ಟಿದ್ದಲ್ಲ. ಬದಲಾಗಿ ರಾಜ್ಯ-ಸಾಮ್ರಾಜ್ಯಗಳೆಂಬ ಪ್ರಭುತ್ವ ವ್ಯವಸ್ಥೆ ರೂಪುಗೊಂಡು ಆಳುವವರು-ದುಡಿಯುವವರು ಎಂಬ ಭೇದದೊಂದಿಗೆ ಸೃಷ್ಟಿಯಾದದ್ದು. ವೇದಗಳ ಕಾಲದಲ್ಲಿಯೇ ವರ್ಣಾಶ್ರಮದ ರೂಪದಲ್ಲಿ ಗಂಗಾ ನದಿ ಬಯಲಿನಲ್ಲಿ ಆರಂಭವಾಗಿ ಮುಂದೆ ವೈದಿಕ ಸಂಸ್ಕೃತಿ ಭಾರತದ ಎಲ್ಲೆಡೆ ಹಬ್ಬಿದಾಗ ಜಾತಿ ಪದ್ಧತಿಯಾಗಿ ಮಾರ್ಪಾಟಾಯಿತು. ಭೂಮಿ ಮತ್ತು ಇತರ ಸಂಪತ್ತಿನ ಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಣಗಳು ಹಿಡಿತ ಸಾಧಿಸಲು ಶೂದ್ರರಿಗೆ, ಇತರ ಎಲ್ಲರಿಗೆ ಭೂಮಿ ಮತ್ತಿತರ ಸಂಪತ್ತಿನ ವಂಚನೆ ಮಾಡಲು ಈ ವರ್ಣ-ಜಾತಿ ವ್ಯವಸ್ಥೆಯನ್ನು ನೆಲೆಗೊಳಿಸಲಾಯಿತು. ಇಂದಿಗೂ ಭೂಮಿ, ಸಂಪತ್ತು, ಶಿಕ್ಷಣಗಳ ವಂಚನೆಯ ಮೇಲೆ ಬೇರೂರಿ ಇಂದಿಗೂ ಅದು ಸುಭದ್ರಾವಸ್ಥೆಯಾಗಿಯೇ ಉಳಿದು ಭಾರತದ ಬೆಳವಣಿಗೆಗೆ ಅಡ್ಡಿಯಾಗಿದೆ ಎಂದು ಸಂಶೋಧಕ ಸಮಾಜ ವಿಜ್ಞಾನಿ ಹಾಗೂ ಸಿಪಿಐ(ಎಂ)ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಜಿ.ಎನ್.ನಾಗರಾಜ್ ರವರು ವಿವರಿಸಿದರು. ಅವರು ಏಪ್ರಿಲ್ 24ರಂದು ನಗರದ ಸಿಪಿಐ(ಎಂ) ಕಛೇರಿ ‘ಶ್ರಮ’ದಲ್ಲಿ ಸಿಪಿಐ(ಎಂ)ನ ಸ್ಥಳೀಯ ಸಮಿತಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಸವಣ್ಣ ಜಯಂತಿಯ ಅಂಗವಾಗಿ ನಡೆದ **ಜಾತಿವ್ಯವಸ್ಥೆಯ ಮೂಲ ಬೇರುಗಳು** ಎಂಬ ವಿಚಾರ ಸಂಕಿರಣದಲ್ಲಿ ವಿಚಾರ ಮಂಡಿಸಿ ಮಾತನಾಡುತ್ತಿದ್ದರು.

ವೇದಗಳ ಕಾಲದಲ್ಲಿಯೇ ಆರಂಭವಾದ ದೇಹದಿಂದ ಪ್ರತ್ಯೇಕವಾದ ಆತ್ಮನ ಕಲ್ಪನೆ, ಆತ್ಮ ಬೇರೆ ದೇಹಗಳನ್ನು ತಳೆಯುವ ಪುನರ್ಜನ್ಮ, ಇದಕ್ಕೆ ಆಧಾರವಾಗಿ ಕರ್ಮ ಸಿದ್ಧಾಂತಗಳ ವಿವರಣೆ ವರ್ಣ-ಜಾತಿ ವ್ಯವಸ್ಥೆಗೆ ಭದ್ರ ಅಡಿಪಾಯವನ್ನು ಹಾಕಿದವು. ಭಗವದ್ಗೀತೆ ಕೃಷ್ಣನ ಬಾಯಿಂದಲೇ ನಾನೇ ಚಾತುರ್ವರ್ಣ ವ್ಯವಸ್ಥೆಯನ್ನು ಸೃಷ್ಟಿಸಿದ್ದು ಎಂದು ಹೇಳಿಸಿತು. ಭಾರತದಲ್ಲಿ ಜಾತಿ ವ್ಯವಸ್ಥೆ ಮತ್ತು ದಾಸ್ಯದ ಸಂಕೋಲೆಯಲ್ಲಿ ಜನರನ್ನು ಭದ್ರವಾಗಿರಿಸುವಲ್ಲಿ ಮನು ಸ್ಮೃತಿ ದೊಡ್ಡ ಪಾತ್ರ ವಹಿಸಿದೆ. ರಾಮಾಯಣ ಮತ್ತು ಮಹಾಭಾರತಗಳು, ಪುರಾಣಗಳು, ಹಲವು ಜಾನಪದ ಪುರಾಣಗಳು ಆಳವಾದ ತಂತ್ರ ಮತ್ತು ಅಧಿಕಾರದ ಸಂವಿಧಾನವಾಗಿ ಆಳರಸರಿಗೆ ಒಸಗಿ ನಿಂತಿದೆ. ಹಾಗೂ ಈಗಲೂ ಬಳಕೆಯಾಗುತ್ತಿದೆ ಎಂದು ನಾಗರಾಜ್ ಮುಂದುವರಿದು ವಿವರಿಸಿದರು. ಈಗ ನಮ್ಮೆದುರಿಗಿರುವ ರಾಮಾಯಣ ತಾರತಮ್ಯ, ಜಾತಿ ಅವಹೇಳನೆ, ಪಿತೃವಾಕ್ಯ



ಪರಿಪಾಲನೆ, ಸ್ತ್ರೀ ಶೋಷಣೆ, ಅನುಜ ದಾಸ್ಯ, ಕಂದಾಚಾರಗಳನ್ನು ವೈಭವೀಕರಿಸುವ ವೈದಿಕಶಾಹಿ–ಕ್ಷತ್ರಿಯ ಕೋದಂಡರಾಮ ಕೇಂದ್ರಿತ ಸಾಹಿತ್ಯ ಎಂದರು.

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಮೂಡಿಬಂದ ಶರಣ ಚಳುವಳಿ ಜಾತಿ ಪದ್ಧತಿ ಧಿಕ್ಕರಿಸಿತು. ನೇಕಾರಿಕೆಯ ತಂತ್ರಜ್ಞಾನದಲ್ಲಿ ಆದ ತೀವ್ರ ಬದಲಾವಣೆಗಳಿಂದಾಗಿ ಬಟ್ಟೆಯ ವ್ಯಾಪಕ ಬಳಕೆ, ನಗರಗಳ ಬೆಳವಣಿಗೆ, ವ್ಯಾಪಾರದ ಹೆಚ್ಚಳ ಇವು ಶರಣರು ಜಾತಿ ಪದ್ಧತಿಯನ್ನು ಧಿಕ್ಕರಿಸಿದುದಕ್ಕೆ ಮೂಲ ಕಾರಣಗಳು. ಆದ್ದರಿಂದಲೇ ಮೊದಲ ವಚನಕಾರನಾದ ಜೇಡರ ದಾಸಿಮಯ್ಯನೇ ಜಾತಿ ವ್ಯವಸ್ಥೆಯ ವಿರುದ್ಧ ಮೊದಲು ಸಿಡಿದೆದ್ದ ಶರಣ. ಬಸವಣ್ಣ ಈ ತತ್ವಗಳನ್ನು ಸರಳ ಹಾಗೂ ಸ್ಪಷ್ಟ ರೂಪದಲ್ಲಿ ಜನಮಾನಸದಲ್ಲಿ ಕಟ್ಟಿ ಬೆಳೆಸಿದ ಎಂದರು. ಆದರೆ-ಶರಣಚಳುವಳಿ ನಂತರದಲ್ಲಿ ಕಾಯಕ ಸಿದ್ಧಾಂತಕ್ಕೆ ಬದಲಾಗಿ ಆಧ್ಯಾತ್ಮಿಕ ಸಿದ್ಧಾಂತಕ್ಕೆ ಹೆಚ್ಚಿನ ಒತ್ತು ನೀಡಿ ಸಂಪೂರ್ಣವಾಗಿ ಸಸ್ಯಾಹಾರಿ ಪದ್ಧತಿಯನ್ನು ಒಪ್ಪಿಕೊಂಡ ಪರಿಣಾಮ ಶರಣ ಚಳುವಳಿ ವ್ಯಾಪಕವಾಗಿ ಬೆಳೆಯಲು ಹಾಗೂ ಒಂದು ಗಟ್ಟಿ ಸಿದ್ಧಾಂತವಾಗಿ ಉಳಿಯಲು ಸಾಧ್ಯವಾಗದಾಯಿತು. ಏಕೆಂದರೆ ಶರಣ ಧರ್ಮ ಹುಟ್ಟಿದ ಸ್ಥಳದಲ್ಲಿ ಹೆಚ್ಚಿನ ಜನ ಕುರುಬ ಹಾಗೂ ವಾಲ್ಮೀಕಿ ಜನಾಂಗ ವಾಸವಾಗಿದ್ದು ಅವರ ಜೀವನವೇ ಮಾಂಸ ಸಂಬಂಧಿತ ವಸ್ತುಗಳ ಬಳಕೆ, ಅನುಭವಿಸುವಿಕೆ ಹಾಗೂ ಮಾರಾಟ ಗಳಲ್ಲಿ ನಿಂತದ್ದರಿಂದ ಶರಣ ಚಳುವಳಿಯ ಮಾಂಸಾಹಾರ ವಿರೋಧಿ ಸಿದ್ಧಾಂತ ಹೆಚ್ಚಿನ ಜನರಿಗೆ ತಲುಪದೆ ಒಂದು ಸಸ್ಯಾಹಾರಿ ಜಾತಿಯಾಗಿ ಉಳಿಯಿತು. ಜಾತಿ ವ್ಯವಸ್ಥೆಯನ್ನು ನಾಶಮಾಡಿ, ಅಸಮಾನತೆಯನ್ನು ತೊಡೆದುಹಾಕಿ ಸಮಾನತೆ ಸಾಧಿಸಿ ಆರ್ಥಿಕ ಸಂರಚನೆಯ ಆಧಾರದ ಸಾಮಾಜಿಕ ಚಳುವಳಿಯನ್ನು ಮಾನವ ಕುಲ ವಿರೋಧಿ ವೈದಿಕ ವ್ಯವಸ್ಥೆ ಅನುಭವ ಮಂಟಪವನ್ನು ನಾಶಮಾಡಿ ಶಿವಶರಣರನ್ನು ಹತ್ಯೆ ಮಾಡುವ ಮೂಲಕ ಬಸವಣ್ಣ ಮತ್ತು ದಾಸಿಮಯ್ಯರ ಧರ್ಮವನ್ನು ನಾಶ ಮಾಡಿದರು. ಅಳಿದುಳಿದ ಶರಣರು ಅಲ್ಲಿಂದ ಓಡಿಹೋಗಿ ಬದಲಾದ ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗಿ ಶರಣ ಚಳುವಳಿಯನ್ನು ಬೆಳೆಸಲು ಶ್ರಮಿಸಿದರು. ಎರಡು ಶತಮಾನಗಳ ನಂತರ ಆಧ್ಯಾತ್ಮಕ್ಕೆ ಶರಣಾದ ಶಿವಶರಣರು ಲಿಂಗಾಯಿತ ಜಾತಿ ಸ್ಥಾಪಿಸಿಕೊಂಡರು ಎಂದು ತಿಳಿಸಿದರು.

ಶರಣ ಚಳುವಳಿ, ಕಬೀರರ ಭಕ್ತಿ ಪಂಥ, ಸಿಖ್ ಧರ್ಮ ಇವೆಲ್ಲವೂ ಜಾತಿ ವ್ಯವಸ್ಥೆಯನ್ನು ಧಿಕ್ಕರಿಸಿದರೂ ಪುನರ್ಜನ್ಮ ಮತ್ತು ಕರ್ಮ ಸಿದ್ಧಾಂತವನ್ನು ಸಂಪೂರ್ಣವಾಗಿ ಅಲ್ಲಗಳೆಯ ಲಿಲ್ಲ. ಭೂಮಿ ಹಾಗೂ ಸಂಪತ್ತಿನ ವಿತರಣೆಗೂ ಜಾತಿ ಪದ್ಧತಿಗೂ ಇರುವ ಒಳ ಸಂಬಂಧವನ್ನು ಮನಗಾಣಲಿಲ್ಲ. ಆ ಕಾರಣದಿಂದ ಇಂದಿಗೂ ನಡೆದ ಚಳುವಳಿಗಳೆಲ್ಲವೂ ಹೊಸ ಜಾತಿಯನ್ನು ಸೃಷ್ಠಿಸಿ ಭಾರತದ ಮಣ್ಣಲ್ಲಿ ಜಾತಿ ಬಲವಾ… ಬೇರೂರಿಸಿದೆ ಎಂದು ತಿಳಿಸಿದ ಅವರು… ಕೇವಲ ಅಂತರ್ಜಾತಿಯ ಮದುವೆ, ಸಾಮಾಜಿಕ ಸುಧಾರಣೆ ಜಾತಿವ್ಯವಸ್ಥೆಯನು… ನಿರ್ಮೂಲನ ಗೊಳಿಸಲು ಸಾಧ್ಯವಿಲ್ಲ. ಬದಲಾಗಿ ಭೂ ಸಂಬಂಧಗಳ ಒಡೆತನದ ಹಕ್ಕನ್ನು ಸಾಮಾನ್ಯೀಕರಿಸಿ ಸಮಾನ ಆರ್ಥಿ… ತಳಹದಿಗಾಗಿ ನಡೆಯುವ ಚಳುವಳಿಗಳ ಜೊತೆಗೆ ಜಾತಿ ಬೇಧ, ಅಸ್ಪೃಶ್ಯತೆಗಳ ವಿರು… ರಾಜಿಯಿಲ್ಲದ ಹೋರಾಟ ನಡೆಸಿದಾಗ ಮಾತ್ರ ಜಾತಿ ಬದ್ಧ ಸಮಾಜವನ್ನು ಜಾತಿ ಇಲ್ಲದ ಸಮಾಜವಾಗಿ ಪರಿವರ್ತಿಸಲು ಸಾ… ಎಂದು ಪ್ರತಿಪಾದಿಸಿದರು. ಆದರೆ ಭಾರತದಲ್ಲಿ ಜಾತಿ ನಾಶಮಾಡಬೇಕು ಎಂ… ಚಿಂತಿಸುವ ಚಿಂತಕರು ಜಾತಿ-ವರ್ಗ ರಹಿ… ಸಮಾಜವನ್ನು ಪ್ರತಿಪಾದಿಸುವ ಹಾಗೂ ಪಾಳೆಯಗಾರಿ ಭೂ ಸಂಬಂಧಗಳು ಮತ್ತ… ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯ ನಡುವಣ ಸಂಬಂಧದ ಬಗ್ಗೆ ಸ್ಪಷ್ಟ ತಿಳುವಳಿಕೆ ಪಡೆದ… ಏಕೈಕ ಸಿದ್ಧಾಂತವಾದ ಮಾರ್ಕ್ಸ್ ಸಿದ್ಧಾಂತ… ಪ್ರಬಲ ವಿರೋಧಿಗಳಾಗಿರುವುದು ವಿಪರ್ಯಾಸ ಮತ್ತು ದುರಂತ ಎಂದರು.

ವಿಚಾರ ಸಂಕಿರಣದಲ್ಲಿ ಸಿಪಿಐ(ಎಂ) ಸ್ಥಳೀಯ ಸಮಿತಿ ಕಾರ್ಯದರ್ಶಿ ಧರ್ಮೇ… ಪ್ರಸ್ತಾವಿಸಿ ಸ್ವಾಗತಿಸಿದರು. ಪೃಥ್ವಿ ವಂದಿಸಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಫ್ರಾನ್ಸ್‌ನ ಅಧ್ಯಕ್ಷ ನಿಕೊಲಾಸ್ ಸರ್ಕೋಝಿ ಯುರೋಪಿನಲ್ಲಿ ಚುನಾವಣೆ ಸೋತ ಒಂಭತ್ತನೇ ಸರಕಾರೀ ಮುಖ್ಯಸ್ಥ. ಕಾರ್ಪೊರೇಟುಗಳ ದಿವಾಳಿಗಳನ್ನು ಸರಕಾರಗಳ ದಿವಾಳಿಗಳಾಗಿ ಪರಿವರ್ತಿಸಿ, ಸಾರ್ವಭೌಮ ದಿವಾಳಿಗಳ ಬೆದರಿಕೆ ಉಂಟಾದಾಗ, ಸರ್ಕಾರದ ಖರ್ಚುಗಳನ್ನು ತೀವ್ರವಾಗಿ ಇಳಿಸಲು ಸಾಮಾಜಿಕ ಖರ್ಚುಗಳಲ್ಲಿ ತೀವ್ರವಾದ ಕಡಿತಗಳನ್ನು ಹೇರುವ ಮೂಲಕ ದುಡಿಯುವ ಜನಗಳ ಮೇಲೆ ಹೇರಿದ ಅಸಹನೀಯ ಹೊರೆಗಳ ವಿರುದ್ಧ ಭುಗಿಲೆದ್ದಿರುವ ಆಕ್ರೋಶವೇ ಯುರೋಪಿನಲ್ಲಿ ಅಧಿಕಾರ ದಲ್ಲಿದ್ದವರ ಚುನಾವಣಾ ಸೋಲುಗಳ ಇತ್ತೀಚಿನ ಈ ಅಲೆಗೆ ಕಾರಣ. ಆದರೆ ಈಗ ಬೇಕಾಗಿರುವುದು ಬಂಡವಾಳಶಾಹಿ ವ್ಯವಸ್ಥೆಯ ಸ್ಥಾನದಲ್ಲಿ ಸಮಾಜವಾದವನ್ನು ಕ್ರಾಂತಿಕಾರಕವಾಗಿ ತರಬಲ್ಲ ಒಂದು ಬಲಿಷ್ಟ ರಾಜಕೀಯ ಶಕ್ತಿ. ಈ ಚುನಾವಣೆ ಗಳಲ್ಲಿ ಅಂತಹ ಒಂದು ರಾಜಕೀಯ ಪರ್ಯಾಯ ಹೊಮ್ಮಿ ಬಂದಿಲ್ಲ ಎಂಬುದನ್ನೂ ಗಮನಿಸಬೇಕು.

ಯುರೋಪಿನಲ್ಲಿ ಅಧಿಕಾರಸ್ಥರ ಸೋಲುಗಳ ಅಲೆ

'ಪೀಪಲ್ಸ್ ಡೆಮಾಕ್ರೆಸಿ' ವಾರಪತ್ರಿಕೆಯ ಸಂಪಾದಕೀಯ ಮೇ, 10– 2012



ಫ್ರಾನ್ಸ್ ಮತ್ತು ಇಟೆಲಿಯಲ್ಲಿ ನಡೆದ ಇತ್ತೀಚಿನ ಚುನಾವಣೆಗಳ ಫಲಿತಾಂಶಗಳಿಂದ ಯಾರಿಗೂ ಆಶ್ಚರ್ಯವಾಗಬೇಕಿಲ್ಲ. ತೀವ್ರ ಸ್ವರೂಪದ ಜಾಗತಿಕ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟು ಜನತೆಯ ಮೇಲೆ ವಿಪರೀತ ಸಂಕಷ್ಟಗಳನ್ನು ಹೇರಿವೆ. ಈ ಬಿಕ್ಕಟ್ಟಿನಿಂದ ಹೊರಬರಲು ಜಾಗತಿಕ ಬಂಡವಾಳಶಾಹಿ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ನಡೆಯುತ್ತಿರುವ ಮಾರ್ಗಗಳ, ವಿಧಾನಗಳ ವಿರುದ್ಧ ಕಳೆದ ಕೆಲವು ವರ್ಷಗಳಲ್ಲಿ ವ್ಯಾಪಕವಾದ ಪ್ರತಿಭಟನೆಗಳು ಕಾಣಬಂದಿವೆ. ಈ ದಿಕ್ಕಿನಲ್ಲಿ ಅವರು ಮಾಡಿದ ಪ್ರತಿಯೊಂದು ಪ್ರಯತ್ನವೂ ಒಂದು ಹೊಸ ಬಿಕ್ಕಟ್ಟಿನ ಬೀಜಗಳನ್ನು ಬಿತ್ತಿ, ಅವು ಜನತೆಯ ಬದುಕಿನ ಮೇಲೆ ಇನ್ನಷ್ಟು ಗಂಭೀರ ದುಷ್ಪರಿಣಾಮಗಳನ್ನು ತಂದಿವೆ. 'ಮಿತವ್ಯಯದ ಕ್ರಮಗಳನ್ನು' ಹೇರುವ ಅವರ ಇತ್ತೀಚಿನ ಪ್ರಯತ್ನಗಳಿಂದಾಗಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಈ ಚುನಾವಣಾ ಫಲಿತಾಂಶಗಳು ಜನತೆಯ ಜೀವನಾಧಾರಗಳಿಗೆ ಈ ರೀತಿ ಗಂಭೀರ ಧಕ್ಕೆ ಬರುತ್ತಿರುವುದರ ವಿರುದ್ಧ ಸಹಜವಾಗಿಯೇ ವ್ಯಕ್ತವಾಗಿರುವ ಆಕ್ರೋಶದ ಪ್ರತಿಕ್ರಿಯೆಗಳು.

ಯುರೋಪಿನ ಹತ್ತು ದೇಶಗಳು ಇಂದು ಅಧಿಕೃತವಾಗಿ ಆರ್ಥಿಕ ಹಿಂಜರಿತಕ್ಕೆ ಒಳಗಾಗಿವೆ. ಅವು ಸತತವಾಗಿ ಎರಡು ಅಥವ ಹೆಚ್ಚು ತ್ರೈಮಾಸಿಕ ಅವಧಿಗಳಲ್ಲಿ ನಕಾರಾತ್ಮಕ ಬೆಳವಣಿಗೆ ಕಂಡಿವೆ. ಅವೆಂದರೆ ಯುರೋವಲಯದ ದೇಶಗಳ ಪೈಕಿ ಏಳು ದೇಶಗಳಾದ ಇಟೆಲಿ, ಸ್ಪೇನ್, ಬೆಲ್ಜಿಯಂ, ಐರ್ಲೆಂಡ್, ಗ್ರೀಸ್, ಸ್ಲೊವೇನಿಯ ಮತ್ತು ನೆದರ್ಲೆಂಡ್, ಅಲ್ಲದೆ ಬ್ರಿಟನ್, ಡೆನ್ಮಾರ್ಕ್ ಮತ್ತು ಚೆಕ್ ಗಣತಂತ್ರ, ಇದರ ಪರಿಣಾಮವಾಗಿ ಭಯಭೀತಗೊಳಿಸುವ ನಿರುದ್ಯೋಗ ಮಾಹಿತಿಗಳು ಹೊಮ್ಮುತ್ತಿವೆ. ಗ್ರೀಸ್ ಮತ್ತು ಸ್ಪೇನಿನಲ್ಲಿ 15ರಿಂದ 25 ವರ್ಷ ವಯಸ್ಸಿನ ಯುವಜನರಲ್ಲಿ ನಿರುದ್ಯೋಗದ ಪ್ರಮಾಣ 51ಶೇ., ಇಟೆಲಿ ಮತ್ತು ಪೋರ್ಚುಗಾಲ್‌ನಲ್ಲಿ 36 ಶೇ., ಐರ್ಲೆಂಡಿನಲ್ಲಿ 30ಶೇ., ಫ್ರಾನ್ಸ್‌ನಲ್ಲಿ 30ಶೇ.ಕ್ಕೂ ಹೆಚ್ಚು ಇತ್ಯಾದಿ, ಇತ್ಯಾದಿ. ಇತರ ದೇಶಗಳಲ್ಲೂ ಅಂತಹುದೇ ಪರಿಸ್ಥಿತಿಯಿದೆ.

ಫ್ರಾನ್ಸ್‌ನ ಅಧ್ಯಕ್ಷ ನಿಕೊಲಾಸ್ ಸರ್ಕೋಝಿ ಯುರೋಪಿನಲ್ಲಿ ಚುನಾವಣೆ ಸೋತ ಒಂಭತ್ತನೇ ಸರಕಾರೀ ಮುಖ್ಯಸ್ಥ. ಅಧ್ಯಕ್ಷ/ಪ್ರಧಾನ ಮಂತ್ರಿ ಚುನಾವಣೆಗಳಲ್ಲಿ ಸೋತಿರುವ ಇತರ ದೇಶಗಳೆಂದರೆ ಬ್ರಿಟನ್, ಇಟೆಲಿ, ಗ್ರೀಸ್, ಸ್ಪೇನ್, ಡೆನ್ಮಾರ್ಕ್, ಲ್ಯಾಟ್ವಿಯ, ಐರ್ಲೆಂಡ್ ಮತ್ತು ಸ್ವಿಝರ್ಲೆಂಡ್. ಯುರೋವಲಯಕ್ಕೆ ನೇತೃತ್ವ ನೀಡುತ್ತಿರುವ ಫ್ರಾಂಕೊ–ಜರ್ಮನ್ ಕೂಟದ ಇತರ ಅರ್ಧಭಾಗದ ದೇಶಗಳು ಇನ್ನೂ ರಾಷ್ಟ್ರೀಯ ಚುನಾವಣೆಗಳಿಗೆ ಹೋಗಿಲ್ಲ. ಜರ್ಮನಿಯ ಚಾನ್ಸೆಲರ್ ಎಂಜೆಲಾ ಮೆರ್ಕೆಲ್‌ರ ಪಕ್ಷ ಇತ್ತೀಚೆಗೆ ಒಂದು ಜರ್ಮನ್ ಪ್ರಾಂತ (ಶ್ಲೆಸ್ವಿಗ್–ಹೊಲ್‌ಸ್ಟೈನ್)ದಲ್ಲಿ ನಡೆದ ಚುನಾವಣೆಯಲ್ಲಿ ಪಡೆದ ಮತಗಳ ಪಾಲು 1950ರ ನಂತರ ಎಂದೂ ಈ ಸಲದಷ್ಟು ಕೆಳಮಟ್ಟಕ್ಕೆ ಹೋಗಿರಲಿಲ್ಲ.

ಜನತೆಯ ಆಕ್ರೋಶದ ಅಭಿವ್ಯಕ್ತಿ

ಸಿಪಿಐ(ಎಂ)ನ 20ನೇ ಮಹಾಧಿವೇಶನ ವಿಶ್ಲೇಷಿಸಿದಂತೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ತಾಳಿಕೆಯ ಶಕ್ತಿಯಿಲ್ಲವಾದ್ದರಿಂದ ಅದು ಜಾಗತಿಕ ಬಂಡವಾಳಶಾಹಿಯನ್ನು ಗಂಭೀರ ಬಿಕ್ಕಟ್ಟುಗಳ ಒಂದು ವರ್ತುಲದೊಳಕ್ಕೆ ತಳ್ಳುತ್ತದೆ. ಸಾಮ್ರಾಜ್ಯಶಾಹಿ ಜಾಗತೀಕರಣ ಬಂಡವಾಳಿಗರ ಲಾಭಗಳನ್ನು ಗರಿಷ್ಟ ಗೊಳಿಸುವಲ್ಲಿ, ಪ್ರಾಥಮಿಕ ಶೇಖರಣೆಯ ವಿಧಾನಗಳ ಮೂಲಕ ಆಕ್ರಾಮಕವಾದ ಬಂಡವಾಳ ಶೇಖರಣೆಗೆ ತೊಡಗುವುದರಿಂದಾಗಿ ಜಗತ್ತಿನ ಬಹುಪಾಲು ಜನಗಳ ಕೊಳ್ಳುವ ಶಕ್ತಿ ತೀವ್ರವಾಗಿ ಕುಂಠಿತಗೊಂಡಿತು. ಇದರಿಂದ ಉಂಟಾಗುವ ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು, ಕುಂಠಿತಗೊಂಡ ಬೇಡಿಕೆಗೆ ಬಲ ತುಂಬಲು ಅಗ್ಗದ ಸಾಲಗಳನ್ನು ಕೊಡಲಾಯಿತು. ಇದರಿಂದ ತಾತ್ಕಾಲಿಕವಾಗಿಯೇನೋ ಲಾಭಗಳು ಗರಿಷ್ಟಗೊಂಡವು.

ಆದರೆ, ಇದರ ಫಲಿತಾಂಶವಾಗಿ ಉಂಟಾದ 'ಅಪಾತ್ರ'(ಸಬ್ ಪ್ರೈಮ್) ಸಾಲಗಳ ಬಿಕ್ಕಟ್ಟು ಜಾಗತಿಕ ಹಣಕಾಸು ಕುಸಿತಕ್ಕೆ ಕಾರಣವಾಯಿತು. ಇಂತಹ ಹಣಕಾಸು ಕುಸಿತವನ್ನು ತಂದ ಅದೇ ಹಣಕಾಸು ಕಾರ್ಪೊರೇಟುಗಳಿಗೇ 'ಪಾರು ಯೋಜನೆಗಳ' (ಬೇಲೌಟ್ ಪ್ಯಾಕೇಜುಗಳ) ಹೆಸರಿನಲ್ಲಿ ಅಗಾಧ ಹಣವನ್ನು ಕೊಡಮಾಡಿ ಈ ಬಿಕ್ಕಟ್ಟನ್ನು ಪರಿಹರಿಸಲು ಪ್ರಯತ್ನಿಸ ಲಾಯಿತು. ಸರಕಾರಗಳು ಸಾಲಗಳನ್ನೆತ್ತಿ ಸಂಗ್ರಹಿಸಿದ ಮೊತ್ತಗಳಿಂದ ಕೊಟ್ಟ ಈ ಬೇಲೌಟುಗಳಿಂದಾಗಿ ಹಲವಾರು ದೇಶಗಳಲ್ಲಿ ಸರಕಾರಗಳು ನಿಭಾಯಿಸಲಾಗದಂತಹ ಹಣಕಾಸು ಕೊರತೆಗಳಲ್ಲಿ ಸಿಲುಕಿ ಕೊಂಡವು. ಹೀಗೆ ಕಾರ್ಪೊರೇಟುಗಳ ದಿವಾಳಿಗಳನ್ನು ಸರಕಾರಗಳ ಸಾರ್ವಭೌಮ ದಿವಾಳಿಗಳಾಗಿ ಪರಿವರ್ತಿಸಲಾಯಿತು. ಹೀಗೆ ಸಾರ್ವಭೌಮ ದಿವಾಳಿಗಳ ಬೆದರಿಕೆ ಉಂಟಾದಾಗ, ಸರಕಾರದ ಖರ್ಚುಗಳನ್ನು ತೀವ್ರವಾಗಿ ಇಳಿಸಬೇಕಾದ ಪ್ರಮೇಯ ಉಂಟಾಯಿತು. ಇದನ್ನು ಮಾಡುವುದು ಸರಕಾರ ಮಾಡುವ ಸಾಮಾಜಿಕ ಖರ್ಚುಗಳಲ್ಲಿ ತೀವ್ರವಾದ ಕಡಿತಗಳನ್ನು ಹೇರುವ ಮೂಲಕ ಮತ್ತು ದುಡಿಯುವ ಜನಗಳ ಮೇಲೆ ಇನ್ನಷ್ಟು ಭಾರವಾದ ಹೊರೆಗಳನ್ನು ಹಾಕುವ ಮೂಲಕ ಮಾತ್ರವೇ ಸಾಧ್ಯವಿತ್ತು. ಆದ್ದರಿಂದಲೇ ದುಡಿಯುವ ಜನಗಳ ಸಂಬಳಗಳ ಸ್ತಂಭನ, ಕೆಲಸದ ಗಂಟೆಗಳ ಹೆಚ್ಚಳ, ನಿವೃತ್ತಿ ಸೌಲಭ್ಯಗಳನ್ನು ಅರ್ಧಕ್ಕಿಳಿಸುವುದು ಮುಂತಾದ 'ಮಿತವ್ಯಯದ' ಕ್ರಮಗಳನ್ನು ತರಲಾಯಿತು. ಈ ಅಸಹನೀಯ ಹೊರೆಗಳ ವಿರುದ್ಧ ಭುಗಿಲೆದ್ದಿರುವ ಆಕ್ರೋಶವೇ ಅಧಿಕಾರದಲ್ಲಿದ್ದವರ ಚುನಾವಣಾ ಸೋಲುಗಳ ಇತ್ತೀಚಿನ ಅಲೆಗೆ ಕಾರಣ.

ಇಂತಹ 'ಮಿತವ್ಯಯದ ಕ್ರಮಗಳು' ಜನಗಳ ಕೊಳ್ಳುವ ಶಕ್ತಿಯನ್ನು ಮತ್ತಷ್ಟು ಕುಂಠಿತಗೊಳಿಸುತ್ತವೆ, ಆಮೂಲಕ, ಇನ್ನೊಂದು ಬಿಕ್ಕಟ್ಟಿಗೆ ಬುನಾದಿ ಹಾಕುತ್ತದೆ, ಈಗಿರುವ ಹಿಂಜರಿತದ ಪ್ರವೃತ್ತಿಯನ್ನು ಮತ್ತಷ್ಟು ಆಳಗೊಳಿಸುತ್ತದೆ. ಇದರಿಂದ ಆರ್ಥಿಕ ಬೆಳವಣಿಗೆಯ ದರ ಕೆಳಗಿಳಿದು, ಅದರಿಂದಾಗಿ ಸರಕಾರದ ಆದಾಯಗಳೂ ಇಳಿಯುತ್ತವೆ. ಈ ಬಿಕ್ಕಟ್ಟು, 2014ರಲ್ಲಿ ಯುರೋಪಿಯನ್ ಕೇಂದ್ರೀಯ ಬ್ಯಾಂಕಿನಿಂದ ಸದ್ಯಕ್ಕೆ ಸಾಲ ಪ್ಯಾಕೇಜುಗಳನ್ನು ಪಡೆದು ಪಾರಾದ ದೇಶಗಳು ಸಾಲ ಮರುಪಾವತಿಯನ್ನು ಆರಂಭಿಸಬೇಕಾಗಿ ಬರುವಾಗ ಇನ್ನಷ್ಟು ಉಲ್ಬಣಗೊಳ್ಳುವುದು ಖಂಡಿತ. ಒಟ್ಟು 1.3 ಟ್ರಿಲಿಯನ್(1.3 ಲಕ್ಷ ಕೋಟಿ) ಡಾಲರುಗಳ ಸಾಲಗಳನ್ನು ಪಡೆದ ಈ ಎಲ್ಲಾ ದೇಶಗಳು, ಅಥವ ಹೆಚ್ಚಿನ ದೇಶಗಳು, ಮುಂದುವರೆಯುವ ಆರ್ಥಿಕ ಹಿಂಜರಿತದಿಂದಾಗಿ ಸಾಲ ಮರುಪಾವತಿ ಮಾಡುವ ಸ್ಥಿತಿಯಲ್ಲಿಯೇ ಇರಲಿಕ್ಕಿಲ್ಲ.

'ವ್ಯವಸ್ಥೆಯೇ ದೋಷಯುಕ್ತ'

ಇದು ಬಂಡವಾಳಶಾಹಿಯ ಒಂದು ವ್ಯವಸ್ಥಾಗತ ಬಿಕ್ಕಟ್ಟು ಎಂಬುದು ಸ್ಪಷ್ಟ. ಇದಕ್ಕೆ ಆ ವ್ಯವಸ್ಥೆಯೊಳಗೆ ಶಾಶ್ವತ ಪರಿಹಾರ ಸಿಗದು. ವಿಶ್ವಾದ್ಯಂತ ನಡೆಯುತ್ತಿರುವ ವಾಲ್‌ಸ್ಟ್ರೀಟ್–ವಿರೋಧಿ ಚಳುವಳಿಗಳು ಈ ವ್ಯವಸ್ಥೆಯನ್ನೇ ಪ್ರಶ್ನಿಸಿವೆ. 'ಇವು ವ್ಯವಸ್ಥೆಯೊಳಗಿನ ದೋಷಗಳಲ್ಲ, ಈ ವ್ಯವಸ್ಥೆಯೇ ದೋಷಯುಕ್ತ' ಎಂದು ಈ ಚಳುವಳಿಯ ಬ್ಯಾನರುಗಳು ಹೇಳುತ್ತವೆ. ಈಗ ಬೇಕಾಗಿರುವುದು ಬಂಡವಾಳಶಾಹಿ ವ್ಯವಸ್ಥೆಯ ಸ್ಥಾನದಲ್ಲಿ ಸಮಾಜವಾದವನ್ನು ಕ್ರಾಂತಿಕಾರಕವಾಗಿ ತರಬಲ್ಲ ಒಂದು ಬಲಿಷ್ಟ ರಾಜಕೀಯ ಶಕ್ತಿ.

ಆದರೆ ಈ ಚುನಾವಣೆಗಳಲ್ಲಿ ಅಂತಹ ಒಂದು ರಾಜಕೀಯ ಪರ್ಯಾಯ ಹೊಮ್ಮಿ ಬಂದಿಲ್ಲ.

ಪುಟ 6 ಕ್ಕೆ

ಅಂಗವಿಕಲರ, ವೃದ್ಧರ ವಿಧವೆಯರ ವೇತನ ಕಡಿತಗೊಳಿಸುವ ಬಿಜೆಪಿ ಸರ್ಕಾರದ ಯತ್ನಕ್ಕೆ ಸೋಲು

ಕರ್ನಾಟಕ ರಾಜ್ಯ ಅಂಗವಿಕಲರ, ವೃದ್ಧರ ಹಾಗೂ ವಿಧವೆಯರ ಸಂಘಟನೆಗಳ ಐಕ್ಯತಾ ವೇದಿಕೆಯ ನೇತೃತ್ವದಲ್ಲಿ ಅಂಗವಿಕಲರ-ವೃದ್ಧರ-ವಿಧವೆಯರ ಮಾಸಾಶನ ನೀಡುವಿಕೆಗೆ ಸಂಬಂಧಿಸಿ ಸಂಖ್ಯಾ ಮಿತಿಯನ್ನು ವಿಧಿಸಿ ಮಾಶಾಸನ ವಂಚಿಸುವ ರಾಜ್ಯ ಬಿಜೆಪಿ ಸರ್ಕಾರದ ಧೋರಣೆ ಖಂಡಿಸಿ ಮೇ 10 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ಧರಣಿಯನ್ನು ಸಂಘಟಿಸಲಾಗಿತ್ತು. ಮುಖ್ಯ ಮಂತ್ರಿಗಳ ನಿವಾಸದ ಎದುರು ಈ ಪ್ರತಿಭಟನೆಯನ್ನು ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಅಂಗವಿಕಲರು, ವೃದ್ಧರು, ಮುಂತಾದವರನ್ನು ಪೋಲಿಸರು ಮುಖ್ಯಂತ್ರಿಗಳ ಮನೆಯ ಬಳಿ ಪ್ರತಿಭಟನೆ ಮಾಡಲು ಎಲ್ಲಿ ಬಿಡುತ್ತಾರೆ. ಆನಂದ ರಾವ್ ವೃತ್ತದ ಬಳಿಯ ಕುಳಿತ ಗಾಂಧಿ ಪ್ರತಿಮೆ ಬಳಿಯಲ್ಲಿ ನೂರಾರು ಅಂಗವಿಕಲರು, ವೃದ್ಧರು, ಬುದ್ಧಿ ಮಾಂದ್ಯ ಮಕ್ಕಳು ಮತ್ತು ಅವರ ಪೋಷಕರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರ ಕ್ರೂರ ನೀತಿಗಳ ವಿರುದ್ಧ ಕಿಡಿಕಾರಿದರು. ಧಿಕ್ಕಾರದ ದನಿ ಮೊಳಗಿಸಿದರು. ವಿವಿಧ ಸಂಘಟನೆಗಳ ಮುಖಂಡರು ಪದಾಧಿಕಾರಿಗಳು ಈ ಸಂದರ್ಭದಲ್ಲಿ ಮಾತನಾಡಿದರು.

2011 ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಪಿಂಚಣಿಗಳಲ್ಲಿ ತುಂಬಾ ನಕಲಿ ಆಗುತ್ತಿದೆ ಎಂದು ಅದನ್ನು ತಡೆಗಟ್ಟುವ ನೆಪದಲ್ಲಿ ಯಾವುದೇ ಸೂಚನೆಯನ್ನೇ ನೀಡದೆ ಪಿಂಚಣಿದಾರರ ಪರಿಶೀಲನೆ ಹೆಸರಿನಲ್ಲಿ ಎಲ್ಲಾ ಪಿಂಚಣಿಗಳನ್ನು



ನಿಲ್ಲಿಸಲಾಯಿತು. ನಂತರದಲ್ಲಿ ಪರಿಶೀಲನೆ ಹೆಸರಿನಲ್ಲಿ ರೆವಿನ್ಯೂ ಅಧಿಕಾರಿಗಳು ತಮಗೆ ಅನುಕೂಲವಾದ ಸ್ಥಳದಲ್ಲಿ ಕುಳಿತು ಮನಸ್ಸಿಗೆ ಬಂದ ರೀತಿಯಲ್ಲಿ ಪಿಂಚಣಿದಾರರ ಬಗ್ಗೆ ಮಾಹಿತಿಯನ್ನು ಭರ್ತಿ ಮಾಡಿದರು. ಪರಿಶೀಲನೆಯ ಹೆಸರಿನಲ್ಲಿ ಬಹುತೇಕ ವರ್ಷದ ಉದ್ದಕ್ಕೂ ಹಲವಾರು ತಿಂಗಳುಗಳ ಕಾಲ ಎಲ್ಲಾ ಮಾಸಾಶನ ಪಡೆಯುವರಿಗೂ ಮಾಸಾಶನ ತಡೆಹಿಡಿಯಲಾಯಿತು. ಅನೇಕ ಅತ್ಯಂತ ಅರ್ಹ ಮತ್ತು ಬಡವರ ಮಾಸಾಶನವನ್ನು ಕಿತ್ತು ಹಾಕಲಾಯಿತು. ಅದರಿಂದಾಗಿ ಅನೇಕ ಅಂಗವಿಕಲರು, ವೃದ್ಧರು ಹಾಗೂ ವಿಧವೆಯರು ಹಸಿವಿನ ದವಡೆಗೆ ನೂಕಲ್ಪಟ್ಟಿದ್ದಾರೆ ಎಂದು ವಿವಿಧ ಮುಖಂಡರು ಖಂಡಿಸಿದರು.

2001ರ ಜನಗಣತಿಯ ಪ್ರಕಾರ 9,40,643 ಅಂಗವಿಕಲರು ಹಾಗೂ ಒಟ್ಟು ಜನಸಂಖ್ಯೆಯಶೆ.7%ರಷ್ಟು ಹಿರಿಯ ನಾಗರೀಕರು ಇದ್ದಾರೆ, ಪ್ರಸ್ತುತ 6,05,976 ಅಂಗವಿಕಲರು ಪಿಂಚಣಿಯನ್ನು ಪಡೆಯುತ್ತಿದ್ದಾರೆ. ಅಂದರೆ ಇನ್ನೂ 3,34,667 ಅಂಗವಿಕಲರು ಪಿಂಚಣಿ ಪಡೆದಿಲ್ಲ. ಇಂತಹದರಲ್ಲಿ ಈ ವರ್ಷ ಕೇವಲ 19,150 ಅಂಗವಿಕಲರಿಗೆ ಮಾತ್ರ ಹೊಸದಾಗಿ ಪಿಂಚಣಿ ಎಂಬ ಮಿತಿ ವಿಧಿಸಲಾಗಿದೆ. ಈ ಮಿತಿ ಇನ್ನೂ ಪಿಂಚಣಿ ಪಡೆಯದ ಶೇಕಡ 95% ಅಂಗವಿಕಲರಿಗೆ ಪಿಂಚಣಿ ಅವಕಾಶವನ್ನು ನಿರಾಕರಿಸುತ್ತದೆ. ಹೀಗೆ ಪಿಂಚಣಿದಾರರ ಸಂಖ್ಯೆಯ ಮೇಲೆ ಮಿತಿ ವಿಧಿಸುವುದರ ಹಿಂದೆ ಯಾವ ತರ್ಕವಾಗಲಿ, ಆಧಾರವಾಗಲಿ ಇಲ್ಲ. ಇನ್ನು ವಿವಿಧ ಜಿಲ್ಲೆಗಳಿಗೆ ಅದನ್ನು ವಿಂಗಡಿಸುವಾಗಲೂ ಮನಸೊ ಇಚ್ಚೆಯಂತೆ ಹಂಚಿಕೆ ಮಾಡಿರುವುದನ್ನು ಕಾಣಬಹುದು. ಜೊತೆಗೆ ಶೇಕಡ 7% ಹಿರಿಯನಾಗರಿಕರೆಂದರೆ ಸುಮಾರು 48 ಲಕ್ಷ ಇದ್ದಾರೆ, ಅದರಲ್ಲಿ ಬಿ.ಪಿ.ಎಲ್. ವ್ಯಾಪ್ತಿಗೆ ಬರುವವರು ಸುಮಾರು 15 ಲಕ್ಷ ಇದ್ದು, ಸರ್ಕಾರ ಈ ವರ್ಷ ಕೇವಲ 59,550 ಜನರಿಗೆ ಮಾತ್ರ ಹೊಸ ಪಿಂಚಣಿ ಎಂದರೆ ಅರ್ಹ, ಬಡವೃದ್ಧರಲ್ಲಿ ಕೇವಲ ಶೇಕಡ 4% ಜನರಿಗೆ ಮಾತ್ರ ಪಿಂಚಣಿ ಸೌಲಭ್ಯ ಎಂಬ ಅಮಾನವೀಯ ಮಿತಿ ವಿಧಿಸಲಾಗಿದೆ. ಇದು ಈಗಾಗಲೇ ಮಾಸಾಶನಕ್ಕೆ ಅರ್ಜಿ ಸಲ್ಲಿಸಿರುವವರು ಮತ್ತು ಈ ವರ್ಷದಲ್ಲಿ ನಿಗದಿತ ವಯೋಮಿತಿಯನ್ನು ಮೀರಲಿರುವವರು ಅಥವಾ ವಿಧವೆಯಾಗಬಹುದಾದವರು ಅವರುಗಳಿಗೆ ದಾಟಲಾಗದ ಅಡೆ-ತಡೆಗಳನ್ನು ಉಂಟು ಮಾಡಲಿದೆ ಎಂದು ಮುಖಂಡರು ತಮ್ಮ ಆತಂಕ ತೋಡಿಕೊಂಡರು.

ಈಗ ನೀಡಲಾಗುತ್ತಿರುವ ಮಾಸಾಶನವು ಅತಿ ಕನಿಷ್ಠ ಪ್ರಮಾಣದ್ದಾಗಿದೆ. ವೃದ್ಧರಿಗೆ, ವಿಧವೆಯರಿಗೆ ರೂ.400/- ಹಾಗೂ ಶೇಕಡ 40%ರಿಂದ 75%ರ ಒಳಗೆ ಅಂಗವಿಕಲತೆ ಇರುವವರಿಗೆ ರೂ.400/- ಮತ್ತು ಶೇಕಡ 75%ರ ಮೇಲ್ಪಟ್ಟ ಅಂಗವಿಕಲತೆ ಇರುವವರಿಗೆ ರೂ. 1,000/- ಸಿಗುತ್ತಿದೆ. ಇದು ಈಗಾಗಲೇ 4-5 ವರ್ಷಗಳ ಹಿಂದೆ ನಿಗದಿಪಡಿಸ್ಪಾ ಮಾಸಾಶನ. ಈ 4-5 ವರ್ಷಗಳಲ್ಲಿ ಬೆಲೆ ಏರಿಕೆ ಅದರಲ್ಲಿಯೂ ಆಹಾರ ವಸ್ತುಗಳ ಬೆಲೆ ಏರಿಕೆ ಗಗನಕ್ಕೇರಿದೆ. ಈ ಹಿನ್ನೆಲೆಯಲ್ಲಿಯೂ ಕೇಂದ್ರ ಸರ್ಕಾರ ಕೇವಲ ರೂ.200/- ಮತ್ತು ರಾಜ್ಯ ಸರ್ಕಾರ ರೂ.200/- ನೀಡುತ್ತಿದ್ದಾರೆ ಇಷ್ಟೊಂದು ಕಡಿಮೆ ಮೊತ್ತವನ್ನು ಮಾಸಾಶನವನ್ನಾಗಿ ನೀಡಲು ಎರಡು ಸರ್ಕಾರಗಳಿಗೂ ನಾಚಿಕೆಯಾದರೂ ಆಗುವುದಿಲ್ಲವೆ ಎಂದು ಮುಖಂಡರು ಸರ್ಕಾರ

ಪುಟ 12 ಕ್ಕೆ

....ಅಧಿಕಾರಸ್ಥರ ಸೋಲುಗಳ ಅಲೆ

ಪುಟ 5 ರಿಂದ

17 ವರ್ಷಗಳ ಬಲಪಂಥೀಯ ಪ್ರಾಬಲ್ಯದ ನಂತರ ಫ್ರಾನ್ಸ್‌ಗೆ ಈಗ ಒಬ್ಬ ಸಮಾಜವಾದಿ ಅಧ್ಯಕ್ಷರು ಇರುತ್ತಾರೆ. ಆದರೆ ಆತ ಫ್ರಾನ್ಸ್‌ನ ಜನತೆಗೆ ಸಮಾಜವಾದಿ ಪರ್ಯಾಯವನ್ನೇನೂ ಕೊಡುತ್ತಿಲ್ಲ. ಫ್ರಾನ್ಸ್‌ನ, ಇವರ ಹಿಂದಿನ ಸಮಾಜವಾದಿ ಅಧ್ಯಕ್ಷ ಫ್ರಾಂಕೊಯಿ ಮಿತ್ತೆರಾಂ ಯುರೋಪಿಯನ್ ಒಕ್ಕೂಟ ಮತ್ತು ಯುರೋ ಉದಯಕ್ಕೆ ಹಾದಿ ಮಾಡಿಕೊಟ್ಟ ಮ್ಯಾಸ್ಟ್ರಿಕ್ಟ್ ಸಂಧಿಗೆ ಸಹಿ ಮಾಡಿದ ಮೊದಲಿಗರಲ್ಲಿ ಒಬ್ಬರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ.

ಗ್ರೀಸಿನಲ್ಲಿ ಯಾವುದೇ ಒಂದು ಪಕ್ಷ ಅಥವ ಒಂದು ಕೂಟ ಸರಕಾರ ರಚಿಸಬಹುದಾದ ಬಹುಮತವನ್ನು ಗೆದ್ದಿಲ್ಲ. ವಿವಿಧ ಪಕ್ಷಗಳ ನಡುವೆ ಚುನಾವಣೋತ್ತರ ಮೈತ್ರಿಕೂಟಗಳನ್ನು ರಚಿಸಿ ಬಹುಮತ ಗಿಟ್ಟಿಸಿಕೊಳ್ಳಲು ತರಾತುರಿಯ ಓಡ್ಡಾಟಗಳು ನಡೆಯುತ್ತಿವೆ. ಜನಗಳ ಮೇಲೆ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳ ವಿರುದ್ಧ ಬೃಹತ್ ಪ್ರತಿಭಟನೆಗಳಿಗೆ ನೇತೃತ್ವ ನೀಡಿದ್ದ ಗ್ರೀಸಿನ ಕಮ್ಯುನಿಸ್ಟ್ ಪಕ್ಷದ ಮತಗಳಿಕೆಯ ಪಾಲು ಕೇವಲ ಒಂದು ಶೇಕಡಾ ಹೆಚ್ಚಿದೆ(8.5ಶೇ.).ಆದರೆ ಅದು ಒಂದು ಸಮ್ಮಿಶ್ರ ಸರಕಾರವನ್ನು ರಚಿಸೋಣ ಎಂದು ಸಿರಿಝಾ(ಇದು 16.8ಶೇ. ಮತಗಳನ್ನು ಗಳಿಸಿದೆ) ನೀಡಿರುವ ಆಹ್ವಾನವನ್ನು ತಿರಸ್ಕರಿಸಿದೆ. ತಾನು ಯಾವುದೇ ಸರಕಾರವನ್ನು ಸೇರುವುದಿಲ್ಲ ಅಥವ ಬೆಂಬಲಿಸುವುದಿಲ್ಲ, ಏಕೆಂದರೆ ಈ ಎಲ್ಲ ಪಕ್ಷಗಳು ಒಂದಿಲ್ಲೊಂದು ರೀತಿಯಲ್ಲಿ ನವ-ಉದಾರವಾದಿ ಅಜೆಂಡಾವನ್ನು ಮತ್ತು ಹಣಕಾಸು ಬಂಡವಾಳದ ಹಿತಗಳನ್ನು ಈಡೇರಿಸಲು ಬದ್ಧವಾಗಿರುವಂತವು ಎಂದು ಅದು ಸಾರಿದೆ.

ರಾಜಕೀಯ ಪರ್ಯಾಯದ ಅಗತ್ಯ

ಯುರೋಪಿನ ಈ ಚುನಾವಣೆಗಳಲ್ಲಿ ಬಲಪಂಥೀಯ ರಾಷ್ಟ್ರವಾದಿ ಪಕ್ಷಗಳ ಮತಗಳಿಕೆಯ ಪಾಲು ಹೆಚ್ಚಿರುವುದು ಮಾತ್ರ ಆತಂಕದ ಸಂಗತಿ. ಯುರೋಪಿನಲ್ಲಿ ಸೋವಿಯೆತ್ ಒಕ್ಕೂಟದ ಪತನದ ನಂತರ ಕಳೆದೆರಡು ದಶಕಗಳಲ್ಲಿ ಕಮ್ಯುನಿಸ್ಟ್-ವಿರೋಧಿ ಸೈದ್ಧಾಂತಿಕ ದಾಳಿ ಉನ್ಮತ್ತ ರೀತಿಗಳಲ್ಲಿ ನಡೆದಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಿದೆ. ಫ್ಯಾಸಿಸಂ ಮತ್ತು ಕಮ್ಯುನಿಸಂ ಎರಡೂ ಒಂದೇ ಎಂಬ ನಿರ್ಣಯಗಳನ್ನು ಯುರೋಪಿಯನ್ ಒಕ್ಕೂಟ ಮತ್ತು ಅದರ ಎಲ್ಲ ಸದಸ್ಯ ರಾಷ್ಟ್ರಗಳು ಪ್ರತ್ಯೇಕವಾಗಿ ಅಂಗೀಕರಿಸಿವೆ. ಹೀಗೆ ಅವರು ಫ್ಯಾಸಿಸಂ ವಿರುದ್ಧ ಕಮ್ಯುನಿಸ್ಟ್ ಪ್ರತಿರೋಧದ ಮತ್ತು ಫ್ಯಾಸಿಸಂನ್ನು ಸೋಲಿಸುವಲ್ಲಿ ಸೋವಿಯೆತ್ ಒಕ್ಕೂಟ ವಹಿಸಿದ ನಿರ್ಣಾಯಕ ಪಾತ್ರದ ಭವ್ಯ ಇತಿಹಾಸವನ್ನು ತಿದ್ದುವ ಪ್ರಯತ್ನ ನಡೆಸಿದ್ದಾರೆ. ಫ್ಯಾಸಿಸಂ ಮೇಲೆ ವಿಜಯವನ್ನು ವಿಶ್ವಕ್ಕೆ ಸಾರಿದ್ದು ಹಿಟ್ಲರನ ರೈಖ್‌ಸ್ಟಾಗ್ ಮೇಲೆ ಹಾರಾಡಿದ ಸೋವಿಯೆತ್ ಬಾವುಟ ಎಂಬ ಸಂಗತಿಯನ್ನು ಅವರು ಜನತೆಯ ನೆನಪಿನಿಂದ ಅಳಿಸಲು ಪ್ರಯತ್ನಿಸುತ್ತಿದ್ದಾರೆ.

1930ರ ದಶಕದ ಮಹಾಕುಸಿತದ ಅವಧಿಯಲ್ಲಿ ಮೇಲೆದ್ದು ಬಂದ ರಾಜಕೀಯ ಪ್ರತಿಕ್ರಿಯೆಗಳಲ್ಲಿ ಫ್ಯಾಸಿಸಂ ತಲೆಯೆತ್ತಿದ್ದು ಕೂಡ ಒಂದು ಎಂಬುದನ್ನೂ ನಾವು ನೆನಪಿಸಿಕೊಳ್ಳಬೇಕಾಗಿದೆ. ಇಂದು ಇಂತಹ ಕಮ್ಯುನಿಸ್ಟ್-ವಿರೋಧಿ ಅಪಪ್ರಚಾರ, ಜತೆಗೆ ಮುಂದುವರೆಯುತ್ತಿರುವ ಬಿಕ್ಕಟ್ಟು ಮತ್ತು ಹೆಚ್ಚುತ್ತಿರುವ ನಿರುದ್ಯೋಗ ಫ್ಯಾಸಿಸ್ಟ್ ಮಾದರಿಯ ಅಗ್ಗದ ಜನಪ್ರಿಯತೆಯ ಪುಡಾರಿತನಕ್ಕೆ ಆಹಾರ ಒದಗಿಸುತ್ತದೆ. ಈ ಬಗ್ಗೆ ಜನತೆಗೆ ಮುನ್ನೆಚ್ಚರಿಕೆ ನೀಡುವುದು ಅಗತ್ಯ.

ಆದ್ದರಿಂದ, ಅಂತಿಮವಾಗಿ ಹೇಳುವುದಾದರೆ ಜನತೆಯನ್ನು ಇನ್ನಷ್ಟು ಆರ್ಥಿಕ ದಾಳಿಗಳಿಂದ ರಕ್ಷಿಸುವುದು ಮತ್ತು ರಾಕ್ಷಸೀ ಫ್ಯಾಸಿಸ್ಟ್ ಶಕ್ತಿಗಳು ತಲೆಯೆತ್ತದಂತೆ ತಡೆಯುವುದು ಒಂದು ರಾಜಕೀಯ ಪರ್ಯಾಯದ ಬಲದಿಂದ ಮಾತ್ರ ಸಾಧ್ಯ. ಜನತೆಯ ಜೀವನಾಧಾರಗಳ ಮೇಲೆ ಬಂಡವಾಳ ಈ ರೀತಿಯ ದಾಳಿಗಳನ್ನು ನಡೆಸುತ್ತದೆ ಎಂದು ಮುಂಗಂಡಿದ್ದರಿಂದಲೇ ಯುರೋಪಿನ ಕಮ್ಯುನಿಸ್ಟ್ ಪಕ್ಷಗಳು ಯುರೋಪಿಯನ್ ಒಕ್ಕೂಟದ ರಚನೆಯನ್ನು ಮತ್ತು ಸಾಮಾನ್ಯ ಕರೆನ್ಸಿಯಾಗಿ ಯುರೋವನ್ನು ಎಡಬಿಡದೆ ವಿರೋಧಿಸಿಕೊಂಡು ಬಂದಿವೆ, ಅವುಗಳ ವಿರುದ್ಧ ಹೋರಾಟಗಳನ್ನು ನಡೆಸಿವೆ. ಮುಂದೆಯೂ, ಅವು ಸಮಾಜವಾದಿ ರಾಜಕೀಯ ಪರ್ಯಾಯವನ್ನು ಬಲಪಡಿಸುವಲ್ಲಿ ಖಂಡಿತಾ ನೇತೃತ್ವ ವಹಿಸುತ್ತವೆ.

‘ಹರಿಯಾಣ ಸ್ಟೀಲ್’ ಮಾಲೀಕನ ಹಠಮಾರಿತನ

ಬೀದಿಗೆ ಬಿದ್ದ ಕಾರ್ಮಿಕರು

ಹೋರಾಟವಾಗಿ ಪರಿವರ್ತನೆಗೊಂಡ ಮೇ ದಿನಾಚರಣೆ

ಹಾಸನದಲ್ಲಿ ಈ ಬಾರಿಯ ಮೇ ದಿನಚರಣೆಯನ್ನು ಹೋತಾಟದ ದಿನವನ್ನಾಗಿ ಆಚರಿಸಲಾಯಿತು. ಹಾಸನದ ‘ಹರಿಯಾಣ ಸ್ಟೀಲ್ ಅಂಡ್ ಪವರ್ ಕಂಪನಿ’ಯ ಆಡಳಿತ ಮಂಡಳಿಯ ದೌರ್ಜನ್ಯ, ದಬ್ಬಾಳಿಕೆಯನ್ನು ವಿರೋಧಿಸಿ ನಡೆಯುತ್ತಿರುವ ಕಾರ್ಮಿಕರ ಮುಷ್ಕರಕ್ಕೆ ಬೆಂಬಲವನ್ನು ವ್ಯಕ್ತಪಡಿಸುವ ಮೂಲಕ ಜಿಲ್ಲೆಯ ಎಲ್ಲಾ ಕಾರ್ಮಿಕರು ಸಿಐಟಿಯು. ನೇತೃತ್ವದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆಯನ್ನು ಆಚರಿಸಿದರು.

ಎಚ್.ಆರ್.ನವೀನ್‌ಕುಮಾರ್.

ಹಾಸನದ ಹೊರ ವಲಯದಲ್ಲಿರುವ ಹರಿಯಾಣ ಸ್ಟೀಲ್ ಅಂಡ್ ಪವರ್ ಕಂಪನಿಯಲ್ಲಿ ಸುಮಾರು 150 ಕಾರ್ಮಿಕರು ಕೆಲಸ ಮಾಡುತ್ತಿದ್ದು ಬಹುತೇಕ ಎಲ್ಲ ಕಾರ್ಮಿಕರು ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದಾರೆ. ಅಧರಲ್ಲಿ ಸುಮಾರು 50 ಜನ ಕಾರ್ಮಿಕರು ಹೊರ ರಾಜ್ಯಗಳಾದ ಬಿಹಾರ್, ಒರಿಸ್ಸಗಳಿಂದ ಇಲ್ಲಿಗೆ ವಲಸೆ ಬಂದು ದುಡಿಯುತ್ತಿದ್ದಾರೆ. ಈ ಕಾರ್ಖಾನೆ ಪ್ರಾರಂಭವಾಗಿ 10 ವರ್ಷಗಳಾದರೂ ಅಲ್ಲಿ ಕೆಸಲ ಮಾಡುತ್ತಿರುವ ಕಾರ್ಮಿಕರಿಗೆ ಆಡಳಿತ ಮಂಡಳಿ ಯಾವುದೇ ಅಗತ್ಯ ಸೌಲಭ್ಯಗಳನ್ನು ಒದಗಿಸದೇ, ಸೂಕ್ತ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸದೆ ಹಲವು ಕಾರ್ಮಿಕರು ಕೆಲಸದ ಸಂದರ್ಭದಲ್ಲಿ ಕೈ+ಕಾಲುಗಳ ಬೆರಳುಗಳನ್ನು ಕಳೆದುಕೊಂಡಿದ್ದಾರೆ. ಈ ರೀತಿ ಬೆರಳು ಕಳೆದುಕೊಂಡ ಯಾವುದೇ ಕಾರ್ಮಿಕರಿಗೂ ಇದುವರೆಗೂ ಚಿಕಿತ್ಸಾ ವೆಚ್ಚವಾಗಲಿ, ಪರಿಹಾರವಾಗಲಿ ದೊರತಿಲ್ಲ. ಇದು ಮಾತ್ರವಲ್ಲದೆ ಕೆಲಸ ಮಾಡುವ ಕಾರ್ಮಿಕರಿಗೆ ಶುದ್ಧ ಕುಡಿಯುವ ನೀರಾಗಲಿ, ಕ್ಯಾಂಟಿನ್ ವ್ಯವಸ್ಥೆಯಾಗಲಿ ಇಲ್ಲ. ಇವೆಲ್ಲವುಗಳ ಜೊತೆಗೆ ಅತ್ಯಂತ ಕಡಿಮೆ ಕೂಲಿಯನ್ನು ಕೊಟ್ಟು ಕಾನೂನು ಬದ್ಧವಾಗಿ ಸಿಗಬೇಕಾದ ಕನಿಷ್ಟ ಕೂಲಿಯಾಗಲಿ, ಇಎಸ್ಐ, ಪಿಎಫ್ ಸೌಲಭ್ಯಗಳಿಂದಲೂ ಕಾರ್ಮಿಕರನ್ನು ವಂಚಿಸಲಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಹೆಚ್ಚು ದಿನ ಕೆಲಸ ಮಾಡಲಾಗದ ಕಾರ್ಮಿಕರು ಒಟ್ಟಿಗೆ ಸೇರಿ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಸಿಐಟಿಯುಗೆ ಸೇರ್ಪಡೆಗೊಂಡರು. ಆ ನಂತರ ಪ್ರತಿಭಟನೆ ಪ್ರಾರಂಭಿಸಿ ತಮ್ಮ ಬೇಡಿಕೆಗಳನ್ನು ಆಡಳಿತ ಮಂಡಳಿಗೆ ಮತ್ತು ಕಾರ್ಮಿಕ ಇಲಾಖೆಗೆ ಸಲ್ಲಿಸಲಾಯಿತು. ಇದರಿಂದ ಆಕ್ರೋಶಗೊಂಡ ಆಡಳಿತ ಮಂಡಳಿ ಸಂಘಟಿತರಾದ ಕಾರ್ಮಿಕರಿಗೆ ಕಿರುಕುಳ, ದೌರ್ಜನ್ಯ, ದಬ್ಬಾಳಿಕೆಗಳನ್ನು ನಡೆಸುತ್ತ ಗೂಂಡಾಗಳನ್ನು ಬಿಟ್ಟು ಕಾರ್ಮಿಕರ ಮೇಲೆ ಮಾರಣಾಂತಿಕ ಹಲ್ಲೆಗಳನ್ನು ನಡೆಸಿತು. ಜೊತೆಗೆ ಅಲ್ಲಿರುವ ದಲಿತ ಕಾರ್ಮಿಕರ ಮೇಲೆ ಜಾತಿ ದೌರ್ಜನ್ಯಗಳನ್ನು ನಡೆಸಲಾಯಿತು. ಈ ಮಧ್ಯೆ ಕಾರ್ಮಿಕ ಇಲಾಖೆಯ ಸಹಾಯಕ ಕಾರ್ಮಿಕ ಆಯುಕ್ತರವರ ಮುಂದೆ 3–4 ಬಾರಿ ಸಂಧಾನ ಸಭೆ ನಡೆದರೂ ಆಡಳಿತ ಮಂಡಳಿ ಸೂಕ್ತ ರೀತಿಯಲ್ಲಿ ಸ್ಪಂದಿಸಲಿಲ್ಲ.

ಇದರಿಂದ ಬೇಸರಗೊಂಡ ಕಾರ್ಮಿಕರು ತಮ್ಮ ಐಕ್ಯಕ ಅಸ್ತ್ರವಾದ ಹಾರಾಟವನ್ನು ಅನಿರ್ಧಿಷ್ಟಾವಧಿ ನಡೆಸಲು ನಿರ್ಧರಿಸಿದರು. ಇದನ್ನು ಅರಿತ ಆಡಳಿತ ಮಂಡಳಿ ಕೂಡಲೆ 100 ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿತು. ಅಂತಿಮವಾಗಿ



ಕಾರ್ಮಿಕರು ತಮ್ಮ ನಿರ್ಧಾರದಂತೆ ಮುಷ್ಕರ ನಡೆಸಲು ಮುಂದಾದರು. ಅದಕ್ಕಾಗಿ ಅವರು ಕಾರ್ಮಿಕರ ಹೋರಾಟದ ಪರಂಪರೆಯನ್ನು ಪ್ರತಿನಿಧಿಸುವ ವಿಶ್ವ ಕಾರ್ಮಿಕರ ದಿನಾಚರಣೆ ಮೇ ದಿನದಂದು ಹೋರಾಟವನ್ನು ಆರಂಭಿಸಿದರು.

ಅಂದು ಬೆಳಿಗ್ಗೆ ಕಾರ್ಖಾನೆಯ ಬಳಿಯಿಂದ ಪಾದಯಾತ್ರೆ ಹೊರಟ ಹರಿಯಾಣ ಕಾರ್ಮಿಕೆರು ನಗರದ ಹೇಮಾವತಿ ಪ್ರತಿಮೆಯ ಬಳಿ ಬಂದಾಗ ಜಿಲ್ಲೆಯ ವಿವಿಧ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಈ ಪಾದಯಾತ್ರೆಯನ್ನು ಅಭೂತಪೂರ್ವವಾಗಿ ಸ್ವಾಗತಿಸಿದರು. ನಂತರ ಅಲ್ಲಿಂದ ಎಲ್ಲರೂ ಒಟ್ಟಿಗೆ ಸೇರಿ



ಕಸ್ತೂರ ಬಾ ರಸ್ತೆಯ ಮೂಲಕ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿ ತಲುಪಿ ಅಲ್ಲೇ ಮೇ ದಿನಾಚರಣೆಯನ್ನು ಆಚರಿಸಲಾಯಿತು.

ಪ್ರತಿಭಟನೆ ಮತ್ತು ಮೇ ದಿನಾಚರಣೆಯನ್ನು ಉಧ್ಘಾಟಿಸಿ ಮಾತನಾಡಿದ ಹಾಸನ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷರಾದ ಪರಮಶಿವಯ್ಯ ಕಾರ್ಮಿಕ ವರ್ಗದ ವಿಜಯದ ಸಂಕೇತವಾಗಿ ನೂರಾರು ವರ್ಷಗಳಿಂದ ಮೇ ದಿನಾಚರಣೆಯನ್ನು ಆಚರಿಲಾಗುತ್ತಿದ್ದು ಅದನ್ನು ಇಂದು ಹಾಸನದಲ್ಲಿ ಹೋರಾಟದ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದರು.

ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಐಟಿಯುವಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮೇಶ್ ಜಗತ್ತಿನಾದ್ಯಂತ ಆಚರಿಸುವ ಐಕ್ಯಕ ಹಬ್ಬ ದುಡಿಯುವ ಜನರ ಹೋರಾಟದ ಸಂಕೇತ ಈ ಮೇ ದಿನಾಚರಣೆ. ವಿಶ್ವ ಕಾರ್ಮಿಕರ ದಿನಾಚರಣೆಯ ಹಿಂದೆ ಶ್ರಮಜೀವಿಗಳ ತ್ಯಾಗ ಬಲಿದಾನ ಅಡಗಿದ್ದು ದಿನಕ್ಕೆ 8 ಗಂಟೆಯ ಕೆಲಸಕ್ಕಾಗಿ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಚಿಕಾಗೋ ನಗರದಲ್ಲಿ ನಡೆಯುತ್ತಿದ್ದ ಕಾರ್ಮಿಕರ ಹೋರಾಟವನ್ನು ಆಳುವ ವರ್ಗ ಬಗ್ಗು ಬಡಿಯಲು ನಡೆಸಿದ ಗೋಲಿಬಾರ್‌ನಲ್ಲಿ ಹುತಾತ್ಮರಾದ ಕಾರ್ಮಿಕರ ಸಂಕೇತವೇ ಈ ಮೇ ದಿನ ಮತ್ತು ಅಂದು ಕಾರ್ಮಿಕರ ದೇಹಗಳಿಂದ ಹರಿದ ರಕ್ತದಿಂದ ಒದ್ದೆಯಾದ ಬಟ್ಟೆಯೇ ಈ ಕೆಂಬಾವುಟ ಎಂದರು. ಮನುಷ್ಯನ ‘ಶ್ರಮ’ ಶಕ್ತಿಯೇ ಜಗತ್ತಿನ ನಿಜವಾದ ಚಾಲಕ ಶಕ್ತಿ ಎಂದರು. ಶ್ರಮ ಶಕ್ತಿಯ ಕಡೆಗಣನೆಯೇ ಜಗತ್ತಿನ ಬದಲಾವಣೆಗೆ ನಾಂದಿಯಾಗಲಿದೆ ಎಂದರು. ಕಾರ್ಮಿಕರ ಹಕ್ಕುಗಳ ಸಲುವಾಗಿ ಹಲವು ಹೋರಾಟಗಳ ನಂತರ ಕಾರ್ಮಿಕರ ಕಾನೂನುಗಳನ್ನು ಜಾರಿಗೊಳಿಸಿದ್ದರೂ ಅವುಗಳನ್ನು ಗಾಳಿಗೆ ತೂರಿ ಕಾರ್ಮಿಕರ ಮೇಲೆ ನಿರಂತರ ದಬ್ಬಾಳಿಕೆ ಮತ್ತು ದೌರ್ಜನ್ಯ ನಡೆಸುತ್ತಿರುವ ಹರಿಯಾಣ ಸ್ಟೀಲ್ ಅಂಡ್ ಪವರ್ ಕಂಪನಿಯ ಆಡಳಿತ ಮಂಡಳಿಯ ವಿರುದ್ದ ಅಲ್ಲಿಯ ಕಾರ್ಮಿಕರು ಇಂದಿನಿಂದ ಆರಂಭಿಸಿರುವ ಅನಿರ್ಧಿಷ್ಟಾವಧಿ ಹೋರಾಟಕ್ಕೆ ಉತ್ತಮ ಬೆಂಬಲ ವ್ಯಕ್ತವಾಗಿದೆ ಎಂದರು.

ಹರಿಯಾಣ ಸ್ಟೀಲ್ ಅಂಡ್ ಪವರ್ ಕಂಪನಿಯ ಕಾರ್ಮಿಕ ಮುಖಿಂಡರಾದ ವಸಂತ್ ಕುಮಾರ್ ಮಾತನಾಡಿ ನಾವು ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟವನ್ನು ಪ್ರಾರಂಭಿಸಿದ್ದು ಆಡಳಿತ ಮಂಡಳಿಯ ಯಾವುದೇ ಬೆದರಿಕೆಗಳಿಗೂ ನಾವು ಮಣಿಯುವುದಿಲ್ಲ. ಸಂಘಟಿತರಾಗುವುದು ನಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ನಡೆಸುವುದು ಸಂವಿಧಾನ ನಮಗೆ ಕಲ್ಪಿಸಿಕೊಟ್ಟಿರುವ ಮೂಲಭೂತ ಹಕ್ಕು ಅದನ್ನು ಮೊಟಕುಗೊಳಿಸಲು ಆಡಳಿತ ಮಂಡಳಿ ಪ್ರಯತ್ನಿಸಿದರೆ ಕಾರ್ಮಿಕರು ಸಹಿಸುವುದಿಲ್ಲ. ನಮ್ಮ ಬೇಡಿಕೆಗಳ ಕುರಿತು ಜಿಲ್ಲಾಧಿಕಾರಿಗಳು ಕೂಡಲೇ ಮಧ್ಯಪ್ರವೇಶ ಮಾಡಬೇಕೆಂದು ಆಗ್ರಹಿಸಿದರು.

ಈ ಮೇ ದಿನಾಚರಣೆ ಮತ್ತು ಪ್ರತಿಭಟನೆಯಲ್ಲಿ ಜಿಲ್ಲೆಯ ಬ್ಯಾಂಕ್ ನೌಕರರು, ಅಂಗನವಾಡಿ ನೌಕರರು, ಗ್ರಾಮ ಪಂಚಾಯ್ತಿ ನೌಕರರು, ಪೌರ ಕಾರ್ಮಿಕರು, ಬಿಸಿಯೂಟ ನೌಕರರು, ದ್ವಿಚಕ್ರ ವರ್ಕಶಾಪ್ ಕಾರ್ಮಿಕರು, ಕಾಫಿಕ್ಯೂರಿಂಗ್ ಕಾರ್ಮಿಕರು, ರಾಜ್ಯ ಸರ್ಕಾರಿ ನೌಕರರ ಸಂಘದ ಸದಸ್ಯರು, ಬಿಜಿವಿಎಸ್ ಪದಾಧಿಕಾರಿಗಳು, ಎಸ್ಎಫ್ಐ ಮತ್ತು ಡಿವೈಎಫ್ಐ ಕಾರ್ಯಕರ್ತರು ಭಾಗವಹಿಸಿ ಬೆಂಬಲ ಸೂಚಿಸಿದರು.

ಈಗಾಗಲೇ 11 ನೇ ದಿನಕ್ಕೆ ಕಾಲಿಟ್ಟಿರುವ ಪ್ರತಿಭಟನೆಯಲ್ಲಿ ಕೆಲಸ ಕಳೆದುಕೊಂಡ ಎಲ್ಲ ಕಾರ್ಮಿಕರು ಹಾಸನದ ಜಿಲ್ಲಾಧಿಕಾರಿ ಕಛೇರಿ ಎದುರು ಆಹೋ ರಾತ್ರಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇವರ ಹೋರಾಟಕ್ಕೆ ಜಿಲ್ಲೆಯ ಎಲ್ಲ ಜನಪರ ಸಂಘಟನೆಗಳು ಬೆಂಬಲವನ್ನು ಸೂಚಿಸಿವೆ.

ಭೂ ಸುಧಾರಣೆ ಅಪ್ರಸ್ತುತವಲ್ಲ; ತುರ್ತು ಅಗತ್ಯ

ಹೊಲ ಗದ್ದೆಗಳಲ್ಲಿ ಮೈ ಮುರಿದು, ಬೆವರು ಸುರಿಸಿ, ರಕ್ತ ಬಸಿದು ದುಡಿಯುವ ರೈತರು, ಶ್ರಮಿಕರು ಆ ಭೂಮಿಯ ಮಾಲಿಕರಾಗಬೇಕು. ಕೈಯಲ್ಲಿ ಎಂದೂ ಮಣ್ಣನ್ನೇ ಮುಟ್ಟದೆ ಕುಳಿತು ಉಣ್ಣುವ ಭೂಮಾಲಿಕರಿಗೆ ನೂರಾರು, ಸಾವಿರಾರು ಎಕರೆ ಭೂಮಿಯ ಒಡೆತನ ಏಕಿರಬೇಕು ? ಭೂ ಸಂಪತ್ತು ಎಂಬುದು ಕೇಂದ್ರೀಕರಣಗೊಳ್ಳದೇ ಭೂ ಹೀನರಿಗೆ ಹಂಚಿಕೆಯಾಗಬೇಕು. ಇದೇ ಭೂ ಸುಧಾರಣೆಯ ಅರ್ಥ. ಅದು ನಮ್ಮಲ್ಲಿ ತುರ್ತಾಗಿ ಜಾರಿಗೆ ಬರಬೇಕು.

ನಿತ್ಯಾನಂದ ಸ್ವಾಮಿ

ಭೂಮಿಯ ಪ್ರಶ್ನೆ ನಮ್ಮ ದೇಶದ ನೈಜ ಅಭಿವೃದ್ಧಿಯ ಮೂಲ ಪ್ರಶ್ನೆಯಾಗಿದೆ. ಲಭ್ಯವಿರುವ ಭೂಮಿಯ ಸರಿಯಾದ ಬಳಕೆ ಸಾಧ್ಯವಾದರೆ ಇಂದು ದೇಶದಲ್ಲಿ ಹೆಚ್ಚುತ್ತಿರುವ ಬಡತನ, ನಿರುದ್ಯೋಗ ಹಾಗೂ ಒಟ್ಟಾರೆ ಹಿಂದುಳಿಯುವಿಕೆಯಂತಹ ಮೂಲಭೂತ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಿದೆ ಎಂಬ ತಿಳುವಳಿಕೆ ಇಂದಿಗೂ ಪ್ರಸ್ತುತವಾಗಿದೆ.

ಭೂಮಿ ಒಂದು ನೈಸರ್ಗಿಕ ಸಂಪತ್ತು. ಅದು ಎಲ್ಲರಿಗೂ ಸೇರಿದ್ದು, ಹೇಗೆ ಗಾಳಿ, ಬೆಳಕು, ನೀರು ಮೊದಲಾದವುಗಳು ಎಲ್ಲರಿಗೂ ಸೇರಿರುವವೋ ಹಾಗೆಯೇ ಭೂಮಿಯೂ ಸಹ. ಆದರೆ ಭೂಮಿ ಎಂಬುದು ಇಂದು ಖಾಸಗೀ ಒಡೆತನಕ್ಕೆ ಸೇರಿದ ಆಸ್ತಿಯಾಗಿ ಪರಿವರ್ತನೆಯಾಗಿದೆ. ಕೆಲವರಿಗೆ ಮಾತ್ರ ಭೂಮಿ ಇದೆ. ಬಹುಸಂಖ್ಯಾತರು ಭೂಹೀನರಾಗಿರುತ್ತಾರೆ. ಭೂಮಿ ಇದ್ದವರಲ್ಲಿಯೂ ಚಿಕ್ಕ ಹಿಡುವಳಿದಾರರೇ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಶ್ರೀಮಂತ ಜಮೀನ್ದಾರರ ವಶದಲ್ಲಿ ನೂರಾರು, ಸಾವಿರಾರು ಎಕರೆ ಭೂಮಿ ಇದೆ.

ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬ ವಂಶಪರಂಪರಾಗತವಾಗಿ ನೂರಾರು, ಸಾವಿರಾರು ಎಕರೆ ಭೂಮಿಯ ಒಡೆತನವನ್ನು ಹೊಂದಿರಲು ಅವಕಾಶವಿರುವ ಸಮಾಜ ವ್ಯವಸ್ಥೆಗೆ ಪಾಳೆಗಾರಿ ಪದ್ಧತಿ ಅಥವಾ ಭೂ ಮಾಲಕ ಪದ್ಧತಿ ಎನ್ನಲಾಗುತ್ತಿದೆ. ಭೂಮಾಲೀಕ ಪದ್ಧತಿಯಲ್ಲಿ ಕೆಲವೇ ಕೆಲವು ಶ್ರೀಮಂತ ಜಮೀನ್ದಾರರು ಇರುತ್ತಾರೆ. ಬಹುಸಂಖ್ಯಾತರು ಅವರ ಭೂಮಿಯನ್ನು ಗೇಣಿದಾರರಾಗಿ, ಕೃಷಿ ಕೂಲಿಕಾರರಾಗಿ ಅಥವಾ ಜೀತದಾಳುಗಳಾಗಿ ದುಡಿಯುತ್ತಿರುತ್ತಾರೆ. ಭೂ ರಹಿತ ಗೇಣಿದಾರರು ಮತ್ತು ಕೃಷಿ ಕೂಲಿಕಾರರು ಜೀವನ ನಿರ್ವಹಣೆಗಾಗಿ ಜಮೀನ್ದಾರರನ್ನೇ ಅವಲಂಬಿಸಿರಬೇಕಾಗಿರುತ್ತಿತ್ತು. ಜಮೀನ್ದಾರರು ಏಕಪಕ್ಷೀಯವಾಗಿ ನಿಗದಿಪಡಿಸುವ ಗೇಣಿಯನ್ನು ಕೊಡಬೇಕಾಗುತ್ತಿತ್ತು. ಮಳೆ ಬರಲಿ, ಬಾರದಿರಲಿ, ಬೆಳೆ ಬೆಳೆಯಲಿ, ಬೆಳೆಯದಿರಲಿ, ನಿಗದಿತ ಗೇಣಿಯನ್ನು ಬಲವಂತವಾಗಿ ವಸೂಲಿ ಮಾಡಲಾಗುತ್ತಿತ್ತು. ಜಮೀನ್ದಾರರ ಪ್ರತ್ಯೇಕ ಭೂಮಿಯಲ್ಲಿ ಹಾಗೂ ಅವರ ಮನೆಗಳಲ್ಲಿ ಗೇಣಿದಾರರು ಬಿಟ್ಟಿ ಕೆಲಸ ಮಾಡಬೇಕಾಗುತ್ತಿತ್ತು. ಹಬ್ಬ ಹರಿದಿನಗಳ ಸಂದರ್ಭದಲ್ಲಿ ಗೇಣಿದಾರರು ಜಮೀನ್ದಾರರಿಗೆ ಕಾಣಿಕೆಗಳನ್ನು ಸಲ್ಲಿಸಬೇಕಾಗಿತ್ತು. ಗೇಣಿದಾರ ಕುಟುಂಬಗಳ ಮಹಿಳೆಯರನ್ನು ಜಮೀನ್ದಾರ ಕುಟುಂಬಗಳ ಪುರುಷರು ಲೈಂಗಿಕವಾಗಿ



ದುರ್ಬಳಕೆ ಮಾಡಿದರೂ ಸುಮ್ಮನೆ ಇರಬೇಕಾಗುತ್ತಿತ್ತು. ಇಷ್ಟೆಲ್ಲಾ ಮಾಡಿದ ಬಳಿಕ ಜಮೀನ್ದಾರರು ಮನಸ್ಸಿಗೆ ಬಂದಂತೆ ಗೇಣಿದಾರರನ್ನು ಒಕ್ಕಲೆಬ್ಬಿಸಬಹುದಾಗಿತ್ತು. ಗೇಣಿದಾರರಾಗಿ, ಕೃಷಿ ಕೂಲಿಕಾರರಾಗಿ, ಜೀತದಾಳುಗಳಾಗಿ, ದುಡಿಯುತ್ತಿರುವವರು ಬಹುತೇಕವಾಗಿ ಹಿಂದುಳಿದ, ಅಸ್ಪೃಶ್ಯ ಜಾತಿಗಳಿಗೆ ಸೇರಿದವರಾಗಿರುತ್ತಿದ್ದು ಹಲವು ರೀತಿಯ ದಮನ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದರು.

ಕೃಷಿಯಲ್ಲಿ ಗರಿಷ್ಠ ಮಟ್ಟದ ಉತ್ಪಾದನೆಯನ್ನು ಹಾಗೂ ಉತ್ಪಾದತೆಯನ್ನು ಸಾಧಿಸಲಿಕ್ಕೂ, ಭೂ ಮಾಲಕ ಪದ್ಧತಿಯು ಪೂರಕವಾಗಿರಲಿಲ್ಲ. ಜಮೀನ್ದಾರರು ತಮ್ಮ ಒಡೆತನಕ್ಕೆ ಸೇರಿದ ಅಪಾರ ಪ್ರಮಾಣದ ಎಲ್ಲ ಭೂಮಿಯನ್ನು ಕೃಷಿಗೆ ಒಳಪಡಿಸುತ್ತಿರಲಿಲ್ಲ. ತಮಗೆ ಎಷ್ಟು ಬೇಕೋ ಅಷ್ಟು ಭೂಮಿಯಲ್ಲಿ ಮಾತ್ರ ಗೇಣಿದಾರರ ಮೂಲಕ, ಕೃಷಿ ಕೂಲಿಕಾರರ ಮೂಲಕ ಬೇಸಾಯ ಮಾಡಿಸುತ್ತಿದ್ದರು. ಉಳಿದ ಭೂಮಿಯನ್ನು ಹಾಗೆಯೇ ಬೀಳು ಬಿಡುತ್ತಿದ್ದರು. ಇದರಿಂದಾಗಿ ಕೃಷಿ ಭೂಮಿಯ ಪೂರ್ಣ ಪ್ರಮಾಣದ ಬಳಕೆ ಆಗುತ್ತಿರಲಿಲ್ಲ. ಜಮೀನ್ದಾರಿ ಪದ್ಧತಿಯಲ್ಲಿ ದುಡಿಯುತ್ತಿದ್ದ ಗೇಣಿದಾರರಿಗೆ ಮತ್ತು ಕೃಷಿ ಕೂಲಿಕಾರರಿಗೆ ತಮ್ಮ ಶ್ರಮದ ಪೂರ್ಣಲಾಭ ತಮಗೆ ಸಿಗುವುದಿಲ್ಲ ಎಂಬುದು ಖಚಿತವಾಗಿರುತ್ತಿದ್ದುದರಿಂದ ಉತ್ಪಾದಕತೆಯ ಮೇಲೂ ನಕಾರಾತ್ಮಕ ಪರಿಣಾಮ ಬೀರುತ್ತಿರುತ್ತಿತ್ತು. ಹೀಗಾಗಿ ಜಮೀನ್ದಾರಿ ಪದ್ಧತಿಯು ಸಮಾಜದ ಒಟ್ಟು ಹಿಂದುಳಿಯುವಿಕೆಗೆ ಕಾರಣವಾಗುತ್ತಿತ್ತು. ಅದರ ಬದಲಾಗಿ ಜಮೀನ್ದಾರರ ಹೆಚ್ಚುವರಿ ಭೂಮಿಯನ್ನೆಲ್ಲಾ ಭೂರಹಿತ ಗೇಣಿದಾರರಿಗೆ, ಕೃಷಿ ಕೂಲಿಕಾರರಿಗೆ ಹಂಚಿಕೊಟ್ಟರೆ, ಎಲ್ಲಾ ಕೃಷಿ ಭೂಮಿಯನ್ನು ವ್ಯವಸಾಯಕ್ಕೆ ಒಳಪಡಿಸಲು ಸಾಧ್ಯವಾಗುತ್ತದೆ ಮಾತ್ರವಲ್ಲ ಭೂಹಿಡುವಳಿಯ ಹಕ್ಕನ್ನು ಪಡೆದ ಗೇಣಿದಾರರು ಹೆಚ್ಚು ಶ್ರಮಪಟ್ಟು ದುಡಿಯುವಂತವರಾಗುತ್ತಾರೆ. ಇದರಿಂದಾಗಿ ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆ ಗಣನೀಯ ಪ್ರಮಾಣದಲ್ಲಿ ವೃದ್ಧಿಸಲು ಸಾಧ್ಯವಾಗುತ್ತದೆ.

ಬ್ರೀಟೀಷರು ಬಂದ ಮೇಲೆ

ಬ್ರಿಟಿಷರ ಆಗಮನದ ಪೂರ್ವದಲ್ಲಿ ನಮ್ಮ ದೇಶದ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ಜಮೀನ್ದಾರಿ ಪದ್ಧತಿ ಅಸ್ತಿತ್ವದಲ್ಲಿತ್ತು. ಬ್ರಿಟಿಷರು ಭೂಕಂದಾಯ ವಸೂಲಿಗೆ ಅನುಕೂಲವಾಗಲೆಂದು ಇನ್ನೊಂದು ಬಗೆಯ ಜಮೀನ್ದಾರಿ ಪದ್ಧತಿಯನ್ನು ಹುಟ್ಟುಹಾಕಿದರು. ಬ್ರಿಟಿಷ್ ಆಡಳಿತದ ಕಾಲದಲ್ಲಿ ನಮ್ಮ ದೇಶದ ದೊಡ್ಡ ದೊಡ್ಡ ಜಮೀನ್ದಾರರು ಬ್ರಿಟಿಷರ ಬೆಂಬಲಿಗರಾಗಿದ್ದರು. ಬ್ರಿಟಿಷ್ ಆಡಳಿತದ ಬೆಂಬಲದಿಂದ ಜಮೀನ್ದಾರರು ಬಡ ಗೇಣಿದಾರರನ್ನು ಮನಬಂದಂತೆ ಸುಲಿಯುತ್ತಿದ್ದರು. ಸಹಿಸಲಾಗದ ಈ ದೌರ್ಜನ್ಯದ ವಿರುದ್ಧ ಆ ದಿನಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ ಅನೇಕ ಪ್ರತಿಭಟನೆಗಳು, ದಂಗೆಗಳು ಸಹ ನಡೆದವು.

ಜಮೀನ್ದಾರಿ ಪದ್ಧತಿಯ ನಾಶದ ಘೋಷಣೆ ಹಾಗೂ ನಂತರದ ಚಾರಿತ್ರಿಕ ಹೋರಾಟಗಳು

1920 ರಲ್ಲಿ ಸ್ಥಾಪನೆಯಾದ ಭಾರತ ಕಮ್ಯೂನಿಸ್ಟ್ ಪಕ್ಷವು ಪ್ರಪ್ರಥಮವಾಗಿ ಜಮೀನ್ದಾರಿ ಪದ್ಧತಿಯ ರದ್ದತಿಯ ಘೋಷಣೆಯನ್ನು ಮೊಳಗಿಸಿತು. 1936 ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕಿಸಾನ್ ಸಭೆಯು 'ಗೇಣಿದಾರರ ಹಕ್ಕುಗಳನ್ನು ರಕ್ಷಿಸಬೇಕು, ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಬೇಕು, ಭೂ ಮಿತಿ ಕಾಯ್ದೆಯನ್ನು ಜಾರಿಗೆ ತರಬೇಕು, ಉಳುವವನೇ ಭೂಮಿಯ ಒಡೆಯನಾಗಬೇಕು' ಎಂಬ ಬೇಡಿಕೆಗಳನ್ನು ಮುಂದಿಟ್ಟು ಹೋರಾಟಗಳನ್ನು ಆರಂಭಿಸಿತು. ಆದರೆ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಮಾತ್ರ ಜಮೀನ್ದಾರರ ವಿರುದ್ಧದ ಹೋರಾಟಕ್ಕೆ ಸಹಮತವಿರಲಿಲ್ಲ. ಗೇಣಿದಾರರು ಜಮೀನ್ದಾರರಿಗೆ ನಿಗದಿತ ಗೇಣಿಯನ್ನು ಕೊಡಬೇಕು ಎಂದು ಅದು ಪ್ರತಿಪಾದಿಸುತ್ತಿತ್ತು. ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ನಡೆದ ರೈತ ಚಳುವಳಿಗಳು ಭಾರತದ ಸ್ವತಂತ್ರ ಹೋರಾಟವನ್ನು ಹರಿತಗೊಳಿಸಿದವು. ಗೇಣಿ ಕಡಿತಕ್ಕೆ ಒತ್ತಾಯಿಸಿ ಆಸ್ಸಾಂನ ಸುರ್ಮಾ ಕಣಿವೆಯ ಹೋರಾಟ, ಜಮೀನ್ದಾರರ ದೌರ್ಜನ್ಯದ ವಿರುದ್ಧ ಕೇರಳದ ಕಯ್ಯೂರು ರೈತರ ಹೋರಾಟ, ಬೆಳೆದ ಫಸಲಿನ 3 ಭಾಗ ಮಾಡಿ 2 ಭಾಗಗಳನ್ನು ಗೇಣಿದಾರರಿಗೆ ಕೊಡಬೇಕು ಎಂಬ ಬಂಗಾಳದ ತೇಭಾಗ ಚಳುವಳಿ, ಬಿಟ್ಟಿ ದುಡಿಮೆಯ ವಿರುದ್ಧ, ಜೀತ ಪದ್ಧತಿಯ ವಿರುದ್ಧ, ಕೂಲಿ ಹೆಚ್ಚಳ ಮುಂತಾದ ಬೇಡಿಕೆಗಳಿಗಾಗಿ ಮಹಾರಾಷ್ಟ್ರದ ವಾರ್ಲಿಯ ಆದಿವಾಸಿಗಳ ಹೋರಾಟ, ಮತ್ತು ಎಲ್ಲಕ್ಕೂ ಮುಖ್ಯವಾಗಿ ಒಕ್ಕಲೆಬ್ಬಿಸುತ್ತಿರುವುದರ ವಿರುದ್ಧ, ಪಾಳೆಗಾರಿ ಭೂ ಮಾಲಕ ಪದ್ಧತಿಯ ವಿರುದ್ಧ, ನಿಜಾಮರ ದುರಾಡಳಿತದ ವಿರುದ್ಧ, ಆಂಧ್ರ ಪ್ರದೇಶದ ತೆಲಂಗಾಣದಲ್ಲಿ ನಡೆದ ರೈತರ ಸಶಸ್ತ್ರ ಹೋರಾಟ ಮೊದಲಾದವುಗಳು ಮುಖ್ಯ ಮೈಲುಗಲ್ಲುಗಳು.

ಸ್ವಾತಂತ್ರ್ಯ ನಂತರವೂ ಮುಂದುವರಿದ ಜಮೀನ್ದಾರಿ ಪದ್ಧತಿ

ಸ್ವಾತಂತ್ರ್ಯ ನಂತರ ಭಾರತದ ರಾಜ್ಯಾಧಿಕಾರವನ್ನು ವಹಿಸಿಕೊಂಡ ಬಂಡವಾಳಗಾರರು ಜಮೀನ್ದಾರ ವರ್ಗಗಳೊಂದಿಗೆ ಅಧಿಕಾರವನ್ನು

ಹಂಚಿಕೊಂಡರು. ಈ ಎರಡು ವರ್ಗಗಳ ಪರವಾಗಿ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಅಧಿಕಾರವಹಿಸಿಕೊಂಡ ಕಾಂಗ್ರೆಸ್ ಸರ್ಕಾರಗಳು ಭೂ ಸುಧಾರಣೆಗಳನ್ನು ಜಾರಿಗೆ ತಂದು ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಲು ಮುಂದಾಗಲಿಲ್ಲ.

ಭೂಸುಧಾರಣೆಗಳೆಂದರೆ- ಭೂ ಹಿಡುವಳಿಗೆ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು. ಕಾನೂನು ಮಿತಿಯನ್ನು ಮೀರಿ ಜಮೀನ್ದಾರರು ಹೊಂದಿರುವ ಭೂಮಿಯನ್ನು ಹೆಚ್ಚುವರಿ ಭೂಮಿ ಎಂದು ಘೋಷಿಸಿ, ಅದನ್ನು ಸರ್ಕಾರ ವಶಪಡಿಸಿಕೊಂಡು ಗೇಣಿದಾರರಿಗೆ ಹಾಗೂ ಭೂ ರಹಿತ ಕೃಷಿ ಕೂಲಿಕಾರರಿಗೆ ವಿತರಣೆ ಮಾಡುವುದು. ಈ ರೀತಿಯ ಭೂಸುಧಾರಣೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಗ್ರಾಮೀಣ ಬಡವರು ಸಶಕ್ತರಾಗುತ್ತಾರೆ. ಅವರ ಆದಾಯ ಹೆಚ್ಚಾಗುವುದರೊಂದಿಗೆ ಅವರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ. ಆಂತರಿಕ ಮಾರುಕಟ್ಟೆ ವಿಸ್ತಾರವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳು ಚುರುಕುಗೊಂಡು ನಮ್ಮ ಹಳ್ಳಿಗಳು ಅಭಿವೃದ್ಧಿಯತ್ತ ಮುಖಮಾಡಲು ಸಾಧ್ಯವಾಗುತ್ತದೆ.

ಇನ್ನೊಂದೆಡೆ, ಭೂರಹಿತರಿಗೆ ಭೂಮಿಯ



ವಿತರಣೆ ಆಗುವುದರಿಂದ ಕೃಷಿ ಉತ್ಪಾದನೆ ಹೆಚ್ಚಾಗುತ್ತದೆ. ಕೃಷಿ ಮೂಲಕ ಕಚ್ಚಾ ವಸ್ತುಗಳ ಅಧಿಕ ಉತ್ಪಾದನೆಯಿಂದಾಗಿ ಕೃಷಿ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹ ದೊರೆಯುತ್ತದೆ. ಇದು ಸಹಜವಾಗಿ ಮತ್ತು ಸಹಜವಾದ ಕೈಗಾರೀಕರಣಕ್ಕೆ ನಾಂದಿಯಾಗುತ್ತದೆ. ಕೈಗಾರಿಕೆಗಳ ವಿಸ್ತರಣೆಯಿಂದಾಗಿ ಉದ್ಯೋಗದ ಅವಕಾಶಗಳು ಹೆಚ್ಚೆಚ್ಚು ಸೃಷ್ಟಿಯಾಗುತ್ತವೆ. ಇದರ ಪರಿಣಾಮವಾಗಿ ಕೃಷಿಯ ಮೇಲಿನ ಅಹಿತಕರ ಅವಲಂಬನೆ ಕಡಿಮೆಯಾಗುತ್ತದೆ. ನಿರುದ್ಯೋಗ ಹತೋಟಿಗೆ ಬರುತ್ತದೆ. ಕುಟುಂಬಗಳ ಆದಾಯ ಹೆಚ್ಚಾಗುತ್ತದೆ. ಅತ್ತ ಗ್ರಾಮೀಣ ಪ್ರದೇಶಗಳಲ್ಲಿಯೂ ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಇದರಿಂದಾಗಿಯೂ ಕೈಗಾರಿಕೆಗಳ ಬೆಳವಣಿಗೆಗೆ ಮತ್ತಷ್ಟು ಪ್ರೋತ್ಸಾಹ ದೊರೆಯುತ್ತದೆ. ಹೀಗೆ ಭೂಸುಧಾರಣೆಗಳೊಂದಿಗೆ ದೇಶದ ಅಭಿವೃದ್ಧಿಯ ಚಕ್ರಕ್ಕೆ ಚಾಲನೆ ದೊರೆಯುತ್ತದೆ.

ಆದರೆ ಕಾಂಗ್ರೆಸ್ ಸರ್ಕಾರಗಳು ದೇಶದ ಸಮಗ್ರ ಅಭಿವೃದ್ಧಿಯ ದಾರಿಯನ್ನು ಅನುಸರಿಸುವ ಬದಲಾಗಿ ಬಂಡವಾಳಶಾಹಿ ಅಭಿವೃದ್ಧಿಯ ದಾರಿಯನ್ನು ಅನುಸರಿಸಿದವು. ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸುವ ಬದಲು ಪಾಳೇಗಾರಿ ಭೂಮಾಲಕರನ್ನು ಬಂಡವಾಳಶಾಹಿ ಭೂಮಾಲಿಕರನ್ನಾಗಿ ಪರಿವರ್ತಿಸುವ ಪ್ರಶ್ನೆಯೆ ಆರಂಭವಾಯಿತು. ಇದರಿಂದಾಗಿ ಗ್ರಾಮೀಣ ಜನತೆಯ ಮೇಲೆ 'ಪಾಳೆಗಾರಿ ಹಿಡಿತ ಮುಂದುವರೆಯಿತು ಮಾತ್ರವಲ್ಲ ಪಾಳೆಗಾರಿ ಭೂಮಾಲಕ ಪದ್ಧತಿಯೊಂದಿಗೆ ನಿಕಟವಾದ ಸಂಬಂಧ ಹೊಂದಿರುವ ಜಾತಿ ಪದ್ಧತಿ, ಅಸ್ಪ್ರಶ್ಯತೆ, ಲಿಂಗತಾರತಮ್ಯದಂತಹ ಸಾಮಾಜಿಕ ಅನಿಷ್ಠಗಳು ಜೀವಂತವಾಗಿ ಉಳಿಯುವಂತಾಯಿತು.

ಮಹಲನೊಬಿಸ್ ಸಮಿತಿ ಕಂಡು ಕೊಂಡದ್ದು

ಎಡಪಕ್ಷಗಳು, ಮುಖ್ಯವಾಗಿ, ಪಾಳೆಗಾರಿ, ಅರೆಪಾಳೆಗಾರಿ ಭೂಸಂಬಂಧಗಳನ್ನು ನಾಶಮಾಡುವುದನ್ನೇ ತನ್ನ ತಕ್ಷಣದ ಗುರಿಯೆಂದು ಗುರುತಿಸಿಕೊಂಡಿರುವ ಸಿಪಿಐ(ಎಂ) ಬಡರೈತರನ್ನು ಮತ್ತು ಕೃಷಿ ಕೂಲಿಕಾರರನ್ನು ಸಂಘಟಿಸುತ್ತಾ ಭೂಸುಧಾರಣೆಗಳಿಗಾಗಿ ಒತ್ತಾಯಿಸಿ ಚಳುವಳಿಯನ್ನು ಮುಂದುವರೆಸಿತು. ಇದರ ಪರಿಣಾಮವಾಗಿ 1967ರಲ್ಲಿ, ವಿತರಣೆಗಾಗಿ ದೇಶದಲ್ಲಿ ಎಷ್ಟು ಭೂಮಿ ಲಭ್ಯವಿದೆ ಎಂಬುದನ್ನು ಕಂಡುಹಿಡಿಯಲು ಕೇಂದ್ರ ಸರ್ಕಾರ ಮಹಾಲ್ ನೊಬಿಸ್ ಸಮಿತಿಯನ್ನು ರಚಿಸಿತು. ಕುಟುಂಬಕ್ಕೆ 20 ಎಕರೆಯಂತೆ ಭೂಮಿತಿಯನ್ನು ನಿಗದಿಪಡಿಸಿದರೆ ಒಟ್ಟು 6 ಕೋಟಿ 30 ಲಕ್ಷ ಎಕರೆ ಹೆಚ್ಚುವರಿ ಭೂಮಿ ವಿತರಣೆಗೆ ಲಭ್ಯವಾಗಲಿದೆ ಎಂದು ಸಮಿತಿಯು ತನ್ನ ವರದಿಯನ್ನು ನೀಡಿತು. 1970 ರಲ್ಲಿ ಕೇಂದ್ರ ಸರ್ಕಾರ 4 ಕೋಟಿ ಎಕರೆ ಭೂಮಿ ವಿತರಣೆಗೆ ಲಭ್ಯವಿದೆ ಎಂದು ಪರಿಷ್ಕರಿಸಿದ ಅಂಕಿಅಂಶಗಳನ್ನು ಸಂಸತ್ತಿಗೆ ನೀಡಿತು. 1972ರಲ್ಲಿ ಈ ಅಂದಾಜುಗಳನ್ನು 1 ಕೋಟಿ 2ಲಕ್ಷ ಎಕರೆಗೆ ಇಳಿಸಲಾಯಿತು. ರೈತ ಚಳುವಳಿಗಳ ಒತ್ತಡದಿಂದಾಗಿ ಎಲ್ಲಾ ರಾಜ್ಯ ಸರ್ಕಾರಗಳು ಭೂಮಿತಿ ಕಾಯ್ದೆಗಳನ್ನು ರಚಿಸಿ ಜಾರಿಗೊಳಿಸಬೇಕು' ಎಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿತು. ಈ ಅವಧಿಯಲ್ಲಿ ಅನೇಕ ರಾಜ್ಯಗಳಲ್ಲಿ ಭೂಸುಧಾರಣಾ ಕಾಯ್ದೆಗಳನ್ನು ಅಂಗೀಕರಿಸಲಾಯಿತಾದರೂ, ಭೂಮಾಲಕ ಶಕ್ತಿಗಳ ಒತ್ತಡದಿಂದಾಗಿ ಕಾಯ್ದೆಗಳು ಜಾರಿಯಾಗದೆ ಕೇವಲ ಕಾಗದದಲ್ಲಿಯೇ ಉಳಿದವು. ಗೇಣಿದಾರರಿಗೆ ಭೂಮಿಯ ಹಕ್ಕನ್ನು ನೀಡುವ ಬದಲು ದೊಡ್ಡ ಸಂಖ್ಯೆಯಲ್ಲಿ ಅವರನ್ನು ಒಕ್ಕಲೆಬ್ಬಿಸಲಾಯಿತು. ಭೂಮಿತಿ ಕಾಯ್ದೆಯನ್ನು ಜಾರಿಮಾಡುವ ಹೆಸರಿನಲ್ಲಿ ಭೂಮಾಲೀಕರಿಗೆ ದೊಡ್ಡ ಮೊತ್ತದ ಪರಿಹಾರವನ್ನು ಬಳಸಿಕೊಂಡು, ಭೂಮಾಲೀಕರು, ಸ್ವಂತ ಸಾಗುವಳಿ ಹೆಸರಿನಲ್ಲಿ ಹಾಗೂ ಬೇನಾಮಿಯಾಗಿ ದೊಡ್ಡ ಪ್ರಮಾಣದ ಭೂಮಿಯನ್ನು ತಮ್ಮ ಸ್ವಾಧೀನದಲ್ಲಿ ಉಳಿಸಿಕೊಂಡರು. ಹೆಚ್ಚುವರಿ ಎಂದು ಘೋಷಿಸಿ ದಲಿತ ಹಾಗೂ ಇತರ ದುರ್ಬಲ ವರ್ಗದ ಕುಟುಂಬಗಳಿಗೆ ವಿತರಣೆ ಮಾಡಲಾದ ಭೂಮಿಯನ್ನು ಸಹ ಭೂಮಾಲಕರು ತಮ್ಮ ವಶದಲ್ಲೇ ಉಳಿಸಿಕೊಂಡು ಫಲಾನುಭವಿಗಳನ್ನು ಬೆದರಿಸಿ ಓಡಿಸಿದರು. ಹೀಗೆ ದೇಶದಲ್ಲಿ ಭೂಕೇಂದ್ರೀಕರಣ ಮುಂದುವರೆಯಿತು. ಗ್ರಾಮೀಣ ಭಾರತದ ಚಿತ್ರ ಬದಲಾಗಲಿಲ್ಲ.

ಎಡರಂಗ ಸರ್ಕಾರಗಳ ಭಿನ್ನ ಜನಪರ ಧೋರಣೆ

ಇದೇ ಸಮಯದಲ್ಲಿ, ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಅಸ್ತಿತ್ವಕ್ಕೆ ಬಂದ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಮಾತ್ರ ಇಡೀ ದೇಶಕ್ಕೆ ಮಾದರಿಯಾಗಬಲ್ಲ ಪ್ರಗತಿಪರ ಭೂಸುಧಾರಣೆಗಳನ್ನು ಜಾರಿಗೆ ತರಲಾಯಿತು. ಪಶ್ಚಿಮ ಬಂಗಾಲ ಒಂದರಲ್ಲೇ 13,94,180 ಎಕರೆ ಭೂಮಿಯನ್ನು ಹೆಚ್ಚುವರಿ ಎಂದು ಘೋಷಿಸಲಾಯಿತು ಮತ್ತು ಅದರಲ್ಲಿ 10,88,445 ಎಕರೆ ಭೂಮಿಯನ್ನು ವಿತರಣೆ ಮಾಡಲಾಯಿತು. ಇಡೀ ದೇಶದಲ್ಲಿ ಇದುವರೆಗೆ ವಿತರಣೆಯಾದ ಒಟ್ಟು ಭೂಮಿಯಲ್ಲಿ ಶೇ.21 ರಷ್ಟು ಭೂಮಿ ಪಶ್ಚಿಮ ಬಂಗಾಳ ಒಂದರಲ್ಲೇ ವಿತರಣೆಯಾಗಿದೆ. 28 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಇಲ್ಲಿ ಭೂಮಿ ವಿತರಣೆಯಾಗಿದ್ದು ಇದು ಇಡೀ ದೇಶದಲ್ಲಿ ಭೂಮಿ ಪಡೆದುಕೊಂಡ ಒಟ್ಟು ಫಲಾನುಭವಿಗಳ ಶೇ.50 ರಷ್ಟಾಗುತ್ತದೆ. ಇದರ ಜೊತೆಯಲ್ಲಿ ಪಶ್ಚಿಮ ಬಂಗಾಳದಲ್ಲಿ 15 ಲಕ್ಷಕ್ಕೂ ಹೆಚ್ಚು ಗೇಣಿದಾರರನ್ನು (ಬರ್ಗಾದಾರರು) ನೊಂದಾಯಿಸಲಾಗಿದೆ. 11 ಲಕ್ಷ ಎಕರೆಗೂ ಹೆಚ್ಚು ಭೂಮಿಯನ್ನು ಅವರ ವಶಕ್ಕೆ ನೀಡಲಾಗಿದೆ. ಅವರನ್ನು ಭೂಮಾಲಿಕರು ಮನಬಂದಂತೆ ಒಕ್ಕಲೆಬ್ಬಿಸದಂತೆ ರಕ್ಷಣೆ ಒದಗಿಸಲಾಗಿದೆ.


ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಅಸ್ತಿತ್ವದಲ್ಲಿ ಇರುವವರೆಗೂ ಭೂಸುಧಾರಣೆ ಒಂದು ನಿರಂತರ ಪ್ರಕ್ರಿಯೆ ಆಗಿತ್ತು. 1990ರ ದಶಕದಲ್ಲಿ ಉದಾರೀಕರಣದ ನೀತಿಗಳ ಅನುಷ್ಠಾನದ ಭಾಗವಾಗಿ ದೇಶದ ಹಲವೆಡೆ ಭೂಸುಧಾರಣಾ ಕ್ರಮಗಳನ್ನು ಬುಡಮೇಲು ಮಾಡುವುದು ನಡೆಯುತ್ತಿದ್ದಾಗ, ಪಶ್ಚಿಮ ಬಂಗಾಳದಲ್ಲಿ ಮತ್ತೆ 95,000 ಎಕರೆ ಭೂಮಿಯನ್ನು ವಶಪಡಿಸಿ 94,000 ಎಕರೆ ಭೂಮಿಯನ್ನು ವಿತರಣೆ ಮಾಡಲಾಯಿತು. ಮತ್ತೆ 2006–07 ರ ಅವಧಿಯಲ್ಲಿ 30,000 ಎಕರೆ ಭೂಮಿಯನ್ನು ಭೂರಹಿತ ಕುಟುಂಬಗಳಿಗೆ ವಿತರಣೆ ಮಾಡಲಾಯಿತು. ಹೀಗೆ ಕಳೆದ 30 ವರ್ಷಗಳ ಎಡರಂಗ ಸರ್ಕಾರದ ಆಡಳಿತದಲ್ಲಿ ಪಶ್ಚಿಮ ಬಂಗಾಳದಲ್ಲಿ 84% ರಷ್ಟು ಕೃಷಿ ಭೂಮಿ ಸಣ್ಣ ಮತ್ತು ಅತಿ ಸಣ್ಣ ರೈತರ ವಶಕ್ಕೆ ಬರುವಂತಾಯಿತು. ದೇಶಮಟ್ಟದಲ್ಲಿ ಕೇವಲ 43% ರಷ್ಟು ಭೂಮಿ ಮಾತ್ರ ಸಣ್ಣ ಮತ್ತು ಅತಿ ಸಣ್ಣ ರೈತರ ಕೈಯಲ್ಲಿದೆ.

ಇದುವರೆಗೆ ದೇಶದಲ್ಲಿ ಭೂಸುಧಾರಣೆಗಳ ಕಾಯ್ದೆಗಳ ಅಡಿಯಲ್ಲಿ ವಿತರಿಸಲಾದ ಭೂಮಿಯ ವಿವರಗಳನ್ನು 2004 ರಲ್ಲಿ ಪಾರ್ಲಿಮೆಂಟಿಗೆ ನೀಡಲಾಗಿತ್ತು. ಆ ವಿವರಗಳು ಹೀಗಿವೆ :

ಘೋಷಿತ ಹೆಚ್ಚುವರಿ ಭೂಮಿ:73,35,937 ಎಕರೆ
ಸ್ವಾಧೀನಪಡಿಸಿದ ಭೂಮಿ:64,96,471 ಎಕರೆ
ವಿತರಣೆ ಮಾಡಲಾದ ಭೂಮಿ: 54,02,101 ಎಕರೆ

ಮಹಾಲ್ ನೊಬಿಸ್ ವರದಿಯ ಪ್ರಕಾರ ವಿತರಣೆಗೆ ಲಭ್ಯವಿದ್ದ 6 ಕೋಟಿ ಎಕರೆಗೂ ಹೆಚ್ಚು ಭೂಮಿಯಲ್ಲಿ ಹೆಚ್ಚುವರಿ ಎಂದು ಘೋಷಿಸಲು ಸಾಧ್ಯವಾದದ್ದು ಕೇವಲ 73 ಲಕ್ಷ ಎಕರೆ ಮತ್ತು ಅದರಲ್ಲಿ ವಿತರಣೆ ಮಾಡಿದ್ದು ಕೇವಲ 54 ಲಕ್ಷ ಎಕರೆ ಮಾತ್ರ. 54 ಲಕ್ಷ ಎಕರೆ ಭೂಮಿಯಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ವಿತರಣೆ ಮಾಡಿದ್ದು 11 ಲಕ್ಷ ಎಕರೆಗೂ ಹೆಚ್ಚು.

ಸಂಗಾತಿ ಎಲ್.ಜಗನ್ನಾಥ್‌ಗೆ ಹೃದಯ ಸ್ಪರ್ಶಿ ಅಭಿನಂದನೆ



ವರದಿ – ಕೃಷ್ಣವೇಣಿ

ಮೈಸೂರಿನ ವರ್ಧಮಾನಯ್ಯ ಕಲ್ಯಾಣ ಮಂಟಪದಲ್ಲಿ 1ನೇ ಮೇ 2012ರಂದು ಭಾರತೀಯ ಜೀವ ವಿಮಾ ನಿಗಮದಿಂದ ನಿವೃತ್ತಿ ಹೊಂದಿದ ವಿಮಾ ನಿಗಮ ನೌಕರರ ಸಂಘ, ಮೈಸೂರು ವಿಭಾಗದ ಹಿರಿಯ ನಾಯಕ ಸಂಗಾತಿ ಎಲ್.ಜಗನ್ನಾಥ್‌ರವರಿಗೆ ಸಂಘದ ವತಿಯಿಂದ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು. ರಾಷ್ಟ್ರೀಯ ಮಟ್ಟದ, ವಲಯ ಮಟ್ಟದ ನಾಯಕರು, ಹಲವಾರು ವಿಭಾಗಗಳ, ಶಾಖೆಗಳ ಸಂಗಾತಿಗಳಲ್ಲದೆ ವಿವಿಧ ಸಂಘಟನೆಗಳ ಸದಸ್ಯರು, ಮೈಸೂರಿನ ಗಣ್ಯರು ಭಾಗವಹಿಸಿ ಸಂಗಾತಿ ಜಗನ್ನಾಥ್‌ರವರನ್ನು ಸನ್ಮಾನಿಸಿದ್ದು ಹೃದಯಸ್ಪರ್ಶಿಯಾಗಿತ್ತು.

ಐ.ಸಿ.ಇ.ಯು., ಮೈಸೂರು ವಿಭಾಗದ ಖಜಾಂಚಿ ಎಸ್.ಶ್ರೀಧರ ಸ್ವಾಗತ ಭಾಷಣ ಮಾಡಿದರು. ವಿಮಾ ನಿಗಮ ನೌಕರರ ಸಂಘ, ಮೈಸೂರು ವಿಭಾಗದ ಅಧ್ಯಕ್ಷರಾದ ಎನ್. ವಿಜಯಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎಸ್.ಎಸ್.ನಾಗೇಶ್ ಮಾತನಾಡುತ್ತಾ ಸಂಘಟನೆಯೊಡನೆ ಬೆಳೆದು, ತ್ಯಾಗ ಮಾಡಿ ಅತ್ಯಂತ ಕಷ್ಟಕರವಾದ ಸಂದರ್ಭದಲ್ಲಿ ಸಂಘಟನೆಯನ್ನು ಕಟ್ಟಿ ಬೆಳೆಸಿದ ನಾಯಕರನ್ನು ನಿವೃತ್ತಿ ಹೊಂದಿದ ಸಮಯದಲ್ಲಿ ಸನ್ಮಾನಿಸುವ ಸಮಾರಂಭಗಳು ಸಂಘಟನೆಯನ್ನು ಮುನ್ನಡೆಸಿಕೊಂಡು ಹೋಗುವುದಕ್ಕೆ ಸ್ಫೂರ್ತಿಯನ್ನು ನೀಡುತ್ತದೆ ಎಂದರು.



ಸಂಘಟನೆ 1988ರಲ್ಲಿ ಮೈಸೂರು ವಿಭಾಗ ಪ್ರಾರಂಭವಾದಾಗ ಅತ್ಯಂತ ಕಡಿಮೆ ಇದ್ದ ಸದಸ್ಯರ ಸಂಖ್ಯೆ ಏರಿಸಲು ಕಾರಣಕರ್ತರಲ್ಲಿ ಒಬ್ಬರಾದ ಸಂಗಾತಿ ಎಲ್.ಜಗನ್ನಾಥ್‌ರವರ ಸರಳತೆ, ಹೋರಾಟದ ಕಿಚ್ಚು, ಪರಿಸರ ಪ್ರಜ್ಞೆ, ವಿನಮ್ರ ವ್ಯಕ್ತಿತ್ವ ಎಲ್ಲರಿಗೂ ಆದರ್ಶಪ್ರಾಯವೆಂದರು. ಅವರದು ವಿವಿಧ ಆಸಕ್ತಿಗಳ ಒಟ್ಟು ಮೊತ್ತದ ವ್ಯಕ್ತಿತ್ವ. ಸಾಹಿತ್ಯ, ಸಂಗೀತ, ಚಿತ್ರಕಲೆ, ಹೀಗೆ ವಿವಿಧ ಪ್ರಾಕಾರಗಳ ಕುರಿತಾದ ಅವರ ಆಸಕ್ತಿ ಅನನ್ಯವಾದುದು, ಅನುಕರಣೀಯವಾದುದು.

ಅಖಿಲ ಭಾರತ ವಿಮಾ ನೌಕರರ ಸಂಘದ ಅಧ್ಯಕ್ಷರಾದ ಸಂಗಾತಿ ಅಮಾನುಲ್ಲಾ ಖಾನ್ ಸಭೆಗೆ ಕಾರ್ಮಿಕರ ದಿನಾಚರಣೆಯ ಮತ್ತು ವಿಮಾ ನಿಗಮ ನೌಕರರ ಸಂಘ, ಮೈಸೂರು ವಿಭಾಗದ ಜನ್ಮ ದಿನಾಚರಣೆಯ ಕ್ರಾಂತಿಕಾರಿ ಶುಭಾಶಯ ಕೋರಿದರು. ಮೈಸೂರು ವಿಭಾಗ ಪ್ರಾರಂಭವಾದ ಸಂದರ್ಭದಲ್ಲಿ ಸಂಗಾತಿ ಎನ್.ಎಂ.ಸುಂದರರರವರು ಜಗನ್ನಾಥ್‌ರವರನ್ನು ಕುರಿತು ಕತ್ತಲನ್ನು ಹೊಡೆದೋಡಿಸುವ ತಾರೆಯೊಂದು ಸೃಷ್ಟಿಯಾಗಿದೆ ಎಂದ ಮಾತನ್ನು ನೆನೆಯುತ್ತಾ ಈ 25 ವರ್ಷಗಳಲ್ಲಿ ಮೈಸೂರು ವಿಭಾಗವನ್ನು ಅಖಿಲ ಭಾರತ ವಿಮಾ ನಿಗಮ ನೌಕರರ ಸಂಘದ ಅತ್ಯಂತ ಬಲಿಷ್ಠ ಘಟಕವನ್ನಾಗಿ ಮಾಡಲು ಶ್ರಮಿಸಿದ ಅವರನ್ನು ಅಭಿನಂದಿಸಿದರು. ಜಗನ್ನಾಥರವರೊಡನೆ ತಮ್ಮ ಸಾಂಗತ್ಯವನ್ನು ನೆನಪಿಸಿಕೊಳ್ಳುತ್ತಾ 1974ರಲ್ಲಿ ಎಲ್.ಐ.ಸಿ. ಲಾಕ್-ಔಟ್ ಆದ ಸಂದರ್ಭದಲ್ಲಿ ವೇತನ ಪರಿಷ್ಕರಣೆಯಾಗಿದ್ದು, ಪ್ರಜಾಪ್ರಭುತ್ವದ ಹಕ್ಕನ್ನು ದಮನ ಮಾಡಲು ತುರ್ತು ಪರಿಸ್ಥಿತಿ ಹೇರಿದ್ದ ಸಂದರ್ಭದಲ್ಲಿ ನಡೆದ ಹೋರಾಟದ ಯಶಸ್ಸು ನೀಡಿದ ಭರವಸೆ, ಎಲ್ಲವನ್ನೂ ಮೆಲುಕು ಹಾಕುತ್ತಾ ಸಂಘಟನೆಯ ಒಳಗಷ್ಟೇ ಅಲ್ಲದೆ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರಾಗಿ ಸಮಾಜದ ಒಳಿತಿಗಾಗಿ ದುಡಿಯುತ್ತಿರುವ ಸಂಗಾತಿ ಜಗನ್ನಾಥ್, ತಮ್ಮ ಹೋರಾಟವನ್ನು ಮುಂದುವರೆಸಬೇಕೆಂದರು.

ಅಖಿಲ ಭಾರತ ವಿಮಾ ನೌಕರರ ಸಂಘದ ಅಧ್ಯಕ್ಷರಾದ ಸಂಗಾತಿ ಕೆ.ವೇಣುಗೋಪಾಲ್ ಮಾತನಾಡುತ್ತಾ ಜಗನ್ನಾಥ್, ಎ.ಐ.ಐ.ಇ.ಎ. ಕಂಡ ಅತ್ಯಂತ ಉತ್ತಮ ನಾಯಕರಲ್ಲಿ ಒಬ್ಬರು ಎಂದರು. ವಿಮಾ ನಿಗಮ ನೌಕರರ ಸಂಘ, ಮೈಸೂರು ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ 1997ರಲ್ಲಿ ಮೈಸೂರಿನಲ್ಲಿ ನಡೆದ ದಕ್ಷಿಣ ಮಧ್ಯ ವಲಯ ಸಮ್ಮೇಳನವನ್ನು ಯಶಸ್ವಿಗೊಳಿಸಿದ್ದು, 1998–99ರಲ್ಲಿ ಸಹಿ ಸಂಗ್ರಹಣಾ ಆಂದೋಲನವನ್ನು ಮುನ್ನಡೆಸಿ ಒಂದು ಲಕ್ಷ ಸಹಿ ಸಂಗ್ರಹಣೆ ಮಾಡಿದ್ದು, ತಮ್ಮ ವಿಭಾಗದಲ್ಲಿ ಗುಣಮಟ್ಟದ ನಾಯಕತ್ವ ಸೃಷ್ಟಿಮಾಡಿದ್ದು ಎಲ್ಲವನ್ನೂ ಶ್ಲಾಘಿಸುತ್ತಾ ಮುಂದೆಯೂ ವಿಮಾ ನೌಕರರಿಗೆ ಮಾರ್ಗದರ್ಶನ ನೀಡಬೇಕೆಂದರು.

ಸಂಗಾತಿ ಜಗನ್ನಾಥ್ ಕೇವಲ ವಿಮಾ ರಂಗದ ಕಾರ್ಮಿಕ ವಲಯಕ್ಕೆ ಮಾತ್ರ ಸೀಮಿತಗೊಳ್ಳದೆ, ಸಮಾಜ ಬದಲಾವಣೆಯ ತಮ್ಮ ತುಡಿತಕ್ಕೆ ಅನುಗುಣವಾಗಿ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುತ್ತಾ ಹೋದರು. ಹೀಗಾಗಿ ಇಂದು ಮೈಸೂರು ಜಿಲ್ಲೆಯ ದುಡಿಯುವ ವರ್ಗದ ಚಳುವಳಿಯ ನಾಯಕರಾಗಿದ್ದಾರೆ ಎಂದರು.

ಎ.ಐ.ಐ.ಪಿ.ಎ.ಯ ಕಾಂ.ಕೆ.ನಟರಾಜನ್, ಎಸ್.ಸಿ.ಜೆಡ್.ಐ.ಇ.ಎಫ್.ನ ಕಾಂ.ಭಾಸ್ಕರ್ ಸೋಮಯಾಜಿ, ಕಾಂ.ಕ್ಲೆಮೆಂಟ್ ಕ್ಸೇವಿಯರ್ ದಾಸ್, ಕಾಂ.ರತ್ನಾಕರ ಶೆಣೈ, ಕಾಂ.ಎಸ್.ವೈ.ಗುರುಶಾಂತ್, ಕಾಂ.ಎ.ಎಸ್.ಆಚಾರ್ಯ, ಕಾಂ.ಕೆ.ಗೋಪಾಲ್, ಕಾಂ.ಗುರುದತ್ತ, ಕಾಂ.ಜೋಸೆಫ್, ಕಾಂ.ಜನಾರ್ಧನ್ ನಾಯಕ್, ಕಾಂ.ರವಿ, ಕಾಂ.ಸಿ.ವಿ.ಕುಮಾರ್, ಅಭಿನಂದಿಸಿದರು. ಅವರ ಸಹೋದರರು ಬಾಲ್ಯದ ಒಡನಾಟ ಮೆಲುಕು ಹಾಕಿದರಲ್ಲದೇ ಸಂಘಟನೆಯು ಸಹೋದರನಲ್ಲಿ ತಂದ ಬದಲಾವಣೆಗಳನ್ನು ಗುರುತಿಸಿ ಇನ್ನಷ್ಟು ಶ್ರಮಿಸಲೆಂದರು.

ಜನಶಕ್ತಿಗೆ ಕೊಡುಗೆ

ಈ ಸಂದರ್ಭದಲ್ಲಿ ಕಾಂ. ಲ. ಜಗನ್ನಾಥ್ ರವರು ತಮಗೆ ದೊರೆತ ನಿವೃತ್ತಿ ನಿಧಿಯಲ್ಲಿ 15,000 ರೂಪಾಯಿಗಳನ್ನು ಕೊಡುಗೆಯಾಗಿ ನೀಡಿದರು. ದುಡಿವ ಜನರ ಪ್ರಾಣ ಮಿತ್ರ ಪತ್ರಿಕೆಯ ಬಗೆಗಿನ ಪ್ರೀತಿ ಮತ್ತು ಕಾಳಜಿಗಳನ್ನು ಸ್ಮರಿಸಿದ ಸಂಪಾದಕರಾದ ಗುರುಶಾಂತವರು ಜಗನಾಥ್‌ರವರ ಹಾಗೂ ಕುಟುಂಬದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಹಾಗೆಯೇ ಇನ್ಸುರೆನ್ಸ್ ವರ್ಕರ್ಸ್ ಮಾಸಿಕಕ್ಕೆ ರೂ 10,000 ಗಳನ್ನು ಕೊಡುಗೆಯಾಗಿ ನೀಡಲಾಯಿತು.

'ಜನಶಕ್ತಿ'ಗೆ ಕೊಡುಗೆ ಹರಿದು ಬರಲಿ

'ಜನಶಕ್ತಿ ಕನ್ನಡ ವಾರಪತ್ರಿಕೆ' ದುಡಿಯುವ ಜನರ ಧ್ವನಿಯಾಗಲು ಶ್ರಮಿಸುತ್ತಿರುವ ಪತ್ರಿಕೆ. ದುಬಾರಿ ಖರ್ಚು ವೆಚ್ಚಗಳ ಹಾಗೂ ತೀವ್ರ ಬೆಲೆ ಏರಿಕೆಯ ಈ ಕಾಲಘಟ್ಟದಲ್ಲಿಯೂ ಎಲ್ಲ ವಿಭಾಗದ ದುಡಿಯುವ ಜನರ ಕೈಗೆಟುಕಲಿ ಎಂದು ಬೆಲೆಯನ್ನು ಕೇವಲ 5.00 ರೂ ಇರಿಸಿಕೊಂಡಿರುವ ಪತ್ರಿಕೆ. ಪತ್ರಿಕೆ ಸಾಕಷ್ಟು ಹಣಕಾಸಿನ ತೊಂದರೆಗಳ ನಡುವೆ ನಡೆಯುತ್ತಿರುವಾಗ ಸಂಗಾತಿ ಲ. ಜಗನ್ನಾಥರಂತೆ ಪತ್ರಿಕೆಯ ಮೇಲೆ ಅಭಿಮಾನವಿಟ್ಟು ಸಂಗಾತಿಗಳು ನೀಡುವ ಕೊಡುಗೆ ಪತ್ರಿಕೆಯನ್ನು ನಡೆಸಲು ಸಾಕಷ್ಟು ಸಹಾಯ ಮಾಡುತ್ತದೆ. ಇತ್ತೀಚೆಗೆ ಸಿಪಿಐ(ಎಂ) ಮೈಸೂರು ನಗರ ಸ್ಥಳೀಯ ಸಮಿತಿಯು ಪತ್ರಿಕೆಗೆ 5,000 ರೂಪಾಯಿಗಳ ಕೊಡುಗೆ ನೀಡಿದೆ.

ಇಂತಹ ಸಹಾಯಗಳು ಇತರೆಡೆಗಳಿಂದ ಪತ್ರಿಕೆಯ ಕಡೆಗೆ ಇನ್ನಷ್ಟು ಹರಿದು ಬರಲಿ ಎಂದು ವಿನಂತಿ. ಸಹೃದಯ ಸಂಗಾತಿಗಳಿಗೆ, ಸಮಿತಿಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

ಸಂ:

ಅಂಗವಿಕಲರ, ವೃದ್ಧರ ವಿಧವೆಯರ ವೇತನ ಕಡಿತ....

ಪುಟ 6 ರಿಂದ

ಛೀಮಾರಿ ಹಾಕಿದರು.

ಚಳುವಳಿಗಾರರ ನಿಯೋಗವು ನಂತರ ಮುಖ್ಯಂತ್ರಿಗಳನ್ನು ಕಂಡು ಮನವಿ ಪತ್ರ ಸಲ್ಲಿಸಿತು ಮತ್ತು ಈ ವೇತನ ಹೆಚ್ಚಳಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಆಗ್ರಹಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸದಾನಂದಗೌಡ ಅವರು ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ಮುಂತಾದವುಗಳ ಫಲಾನುಭವಿಗಳ ಸಂಖ್ಯೆಗೆ ಮಿತಿಯನ್ನು ವಿಧಿಸುವ ಸರ್ಕಾರದ ನಿರ್ಧಾರವನ್ನು ವಾಪಸ್ಸು ಪಡೆದಿರುವುದಾಗಿ ಘೋಷಿಸಿದರು. ಉಳಿದ ಬೇಡಿಕೆಗಳಿಗೆ ಸಂಬಂಧಿಸಿ ಪರಿಶಿಲಿಸುವ ಭರವಸೆ ನೀಡಿದರು. ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಮುಖಂಡರಾದ ಜಿ.ಎನ್. ನಾಗರಾಜ್ ಸೇರಿದಂತೆ ಈ ಕೆಳಕಂಡ ವಿವಿಧ ಸಂಘಟನೆಗಳ ಮುಖಂಡರು ಹೋರಾಟದ ನೇತೃತ್ವ ವಹಿಸಿದ್ದರು.

ಈ ಹೋರಾಟದ ವಿವಿಧ ಭಾಗಿದಾರ ಸಂಘಟನೆಗಳು ಹೋರಾಟದಲ್ಲಿ ಪಾಲ್ಗೊಂಡಿದ್ದವು.

ರಾಜ್ಯ ಬಿಜೆಪಿ ಸರ್ಕಾರದ ಅದ್ಭುತ ಬರ ನಿರ್ವಹಣೆ

ಮೊನ್ನೆ ಮೊನ್ನೆ ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಮಧ್ಯಂತರ ಬರ ಪರಿಹಾರವನ್ನು ಕೋರಲು ರಾಜ್ಯದ ಸರ್ವ ಪಕ್ಷಗಳ ನಿಯೋಗವನ್ನು ಕೊಂಡೊಯ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಬರ ಪರಿಸ್ಥಿತಿಯನ್ನು ನಿರ್ವಹಿಸುತ್ತಿರುವ 'ಅದ್ಭುತ ಕಾರ್ಯ ದಕ್ಷತೆ' ಮತ್ತೊಮ್ಮೆ ಬಯಲಿಗೆ ಬಂದಿದೆ.

ಮೇ 3 ರಂದು ಕರ್ನಾಟಕದ ಸರ್ವ ಪಕ್ಷಗಳ ನಿಯೋಗವು ದೆಹಲಿಗೆ ತೆರಳಿ ಕೇಂದ್ರ ಹಣಕಾಸು ಸಚಿವ ಪ್ರಣವ್ ಮುಖರ್ಜಿಯವರನ್ನು ಕಂಡು ಬರದಿಂದಾಗಿ 5,865 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದ್ದು ಕೇಂದ್ರದ ಬರ ಪರಿಹಾರದ ನಿಧಿಯಿಂದ ಅರ್ಧದಷ್ಟು ಪರಿಹಾರವನ್ನು ನೀಡಿ ಎಂದು ಮನವಿ ಮಾಡಿದೆ.

ಕೇಂದ್ರ ಸಚಿವರು ಈ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ರಾಜ್ಯ ಸರ್ಕಾರದ ವಿರುದ್ಧ ಮಾತಿನ ಚಾಟಿಯನ್ನೂ ಬೀಸಿದ್ದಾರೆ. ರಾಜ್ಯದಲ್ಲಿ ಬರ ಕಾಣಿಸಿಕೊಂಡಿದ್ದು ಯಾವಾಗ ಎಂಬುದು ಅವರು ಕೇಳಿರುವ ಪ್ರಶ್ನೆಗಳಲ್ಲಿ ಒಂದು ಪ್ರಮುಖ ಪ್ರಶ್ನೆ. ಅದೇ ರೀತಿ ಬರ ಪರಿಹಾರ ಕೋರಲು ಬರಿಗೈಯಲ್ಲಿ ಬಂದರೆ ಹೇಗೆ ? ಬೆಳೆ ಹಾನಿ, ಸಮಸ್ಯೆಯ ತೀವ್ರತೆ ಬಗೆಗೆ ಸೂಕ್ತ ಆಧಾರ, ದಾಖಲೆ, ಮಾಹಿತಿಗಳಿಲ್ಲವಲ್ಲ !! ಎಂಬುದು ಇನ್ನೊಂದು ಪ್ರಶ್ನೆ. ಮತ್ತು ಪರಿಹಾರಕ್ಕೆ ಬರ ಸಂಬಂಧಿಸಿದ ಸ್ಪಷ್ಟ ಸೂಚನೆ ಪ್ರಸ್ತಾವನೆಗಳಿರುವ ಮನವಿಯೇ ಬಂದಿಲ್ಲವಲ್ಲ ಎಂಬುದು ಮಗದೊಂದು ಪ್ರಶ್ನೆ.

ಉದಾರೀಕರಣ ಧೋರಣೆಗಳನ್ನು ಅಪ್ಪಿಕೊಂಡಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಪ್ರಾಕೃತಿಕ ವಿಕೋಪ ಪರಿಹರ ನಿಧಿಯನ್ನೇ ಕಡಿತಗೊಳಿಸಿದೆ. ಬರದ ವಿಚಾರದಲ್ಲಿ ಅಧ್ಯಯನ, ಪರಿಶೀಲನೆ ಎನ್ನುತ್ತಾ ಕಾಲ ತಳ್ಳುವ ತಂತ್ರಗಾರಿಕೆ ಮಾಡುತ್ತಿದೆ ಎನ್ನುವ ವಾಸ್ತವ ಪರಿಸ್ಥಿತಿ ಇದೆ. ಆದರೂ ಕೇಂದ್ರ ಸಚಿವರಿಂದ ಇಂತಹ ಇಂಥ ಟೀಕೆ, ಗೇಲಿಗೆ ಗುರಿಯಾಗುವ ಪರಿಸ್ಥಿತಿಗೆ ಧಾರಾಳ ಅವಕಾಶ ನೀಡುವ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಆಡಳಿತ ಇದೆ ಎಂಬುದನ್ನು ಯಾರೂ ತಳ್ಳಿ ಹಾಕಲು ಸಾಧ್ಯವಿಲ್ಲ. ಕರ್ನಾಟಕ ರಾಜ್ಯದ ಜನರ ಪಾಲಿಗೆ ನಿಜಕ್ಕೂ ಇದೊಂದು ದುರಂತದ ಸ್ಥಿತಿ. ರಾಜ್ಯ-ಕೇಂದ್ರ ಎರಡೂ ಸರ್ಕಾರಗಳಿಂದ ಬರ ಪರಿಸ್ಥಿತಿ ಗಂಭೀರ ನಿರ್ಲಕ್ಷ್ಯ.

ಆಗ ಪ್ರವಾಹ ಪರಿಸ್ಥಿತಿ ನಿರ್ವಹಣೆ

ಈಗ ಬರ ಪರಿಸ್ಥಿತಿ ನಿರ್ವಹಣೆ

2008 ರಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯದ ಉತ್ತರ ಭಾಗದಲ್ಲಿ ಸುರಿದ ಬಾರಿ ಮಳೆ ಮತ್ತು ಅದರಿಂದ ಉಂಟಾದ ಪ್ರವಾಹ ಪರಿಸ್ಥಿತಿಯು ಒಂದೆರಡು ದಿನಗಳಲ್ಲೇ ದಿಢೀರೆಂದು ಎದುರಾದದ್ದು. ಆದರೆ ಬರದ ವಿಚಾರ ಹಾಗಲ್ಲ. ರಾಜ್ಯದಲ್ಲಿ ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲೇ ರಾಜ್ಯದಲ್ಲಿ ವ್ಯಾಪಕ ಬರದ ಛಾಯೆ ಸ್ಪಷ್ಟವಾಗಿ ಹೋಯಿತು. ಸರ್ಕಾರ ಬರಪೀಡಿತ ತಾಲ್ಲೂಕುಗಳ ಪಟ್ಟಿ ಘೋಷಣೆ ಮಾಡಿದ್ದು ಬಿಟ್ಟರೆ ಬೇರೇನನ್ನೂ ಮಾಡಲಿಲ್ಲ.



ಪ್ರವಾಹದ ವಿಷಯದಲ್ಲಿ ಬಾರಿ ಮಳೆ, ಹಾನಿ ಆತಂಕಗಳ ನಿರಂತರ ವರದಿ, ಇದ್ದಾಗಲೂ ಸರ್ಕಾರಿ ಯಂತ್ರ ನಿದ್ರೆಯಿಂದ ಏಳಲಿಲ್ಲ. ರಾಜ್ಯ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಯಡಿಯೂರಪ್ಪ ಸೇರಿದಂತೆ, ಬಿಜೆಪಿ ಸಚಿವರು, ಶಾಸಕರು ಮೈಸೂರಿನ ಸುತ್ತೂರು ಮಠದಲ್ಲಿ ನರೇಂದ್ರ ಮೋದಿಯ 'ಮೋದಿ ಮಾದರಿ ಆಡಳಿತ' ಕುರಿತ ಪಾಠಗಳನ್ನು ಕೇಳಲು ಶಿಬಿರದಲ್ಲಿ ಸೇರಿದ್ದರು. ರಾಜ್ಯದಲ್ಲಿ ಆಗ ನಡೆದ ಅನಾಹುತಗಳ ಸರಣಿ, ಆದ ಸಾವು ನೋವುಗಳ ವಿಚಾರ ರಾಜ್ಯದ ಜನರಿಗೆ ಗೊತ್ತಿರುವುದೇ.

ಈಗ ಡಿಸೆಂಬರ್ ಜನವರಿಗಳಲ್ಲೇ ಬರ ಪರಿಸ್ಥಿತಿಯ ಘೋಷಣೆ ಆದರೂ ರಾಜ್ಯ ಸರ್ಕಾರ ನಾಲ್ಕೈದು ತಿಂಗಳಲ್ಲಿ ತಾನು ಮಾಡಬೇಕಾದುದನ್ನೂ ಸರಿಯಾಗಿ ಮಾಡಲಿಲ್ಲ. ಕೇಂದ್ರ ಸರ್ಕಾರದಿಂದ ಅಗತ್ಯ ಪರಿಹಾರ ಪಡೆಯುವ ಬಗೆಗೂ ಅಗತ್ಯ ಕ್ರಮವಹಿಸಿಲ್ಲ.

ಮುಖ್ಯಮಂತ್ರಿಗಳು ನಾವು ಮನವಿಯನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ ಎಂದಿದ್ದಾರೆ. ಕೇಂದ್ರ ಸಚಿವರು ನಮಗೆ ಮನವಿ ಬಂದಿಲ್ಲ ಎಂದಿದ್ದಾರೆ. ಆಮೇಲೆ ಅಧಿಕಾರಿಗಳು ಇದೀಗ ವರದಿ ಬಂದಿದೆ ಎಂದು ಹೇಳಿ ವರದಿ ನೀಡಿದ್ದಾರೆ. ಈ ಅತ್ಯಾಧುನಿಕ ಸಾಧನ, ತಂತ್ರಜ್ಞಾನಗಳ ಕಾಲದಲ್ಲಿ ಈ ಬಗೆಯ ಗೊಂದಲಕ್ಕೆ ಅವಕಾಶವುಂಟೆ.

ಒಂದು ರಾಜ್ಯದ ಮುಖ್ಯ ಮಂತ್ರಿಯ ಓಡಾಟಕ್ಕೆ ಹೆಲಿಕಾಪ್ಟರುಗಳು, ವಿಶೇಷ ವಿಮಾನಗಳು, ಸ್ವದೇಶಿ, ವಿದೇಶಿ ಕಾರುಗಳು ಯಾವಾಗ ಬೇಕೆಂದರೂ ಸಿದ್ಧವಿರುತ್ತವೆ. ರಾಜ್ಯದಲ್ಲಿ ಬೃಹತ್ ಆಡಳಿತ ಯಂತ್ರ ಇದೆ. ಕೇಂದ್ರ ಸರ್ಕಾರದಲ್ಲಿ ರಾಜ್ಯದ ಪರವಾಗಿ ಆಗಬೇಕಾದ ಕೆಲಸಗಳ ಬೆನ್ನು ಹತ್ತಿ ಮಾಡಿಸುವುದಕ್ಕಾಗಿಯೇ ದೇಶದ ರಾಜಧಾನಿ ದೆಹಲಿಯಲ್ಲಿ ಒಬ್ಬರು ವಿಶೇಷಾಧಿಕಾರಿ, ಅವರಿಗೆ ಕಛೇರಿ, ಸಿಬ್ಬಂದಿ, ವಾಹನ ಎಲ್ಲ ವ್ಯವಸ್ಥೆಯೂ ಇದೆ. ಕೇಂದ್ರ ಸರ್ಕಾರವೂ ಇಂತಹ ಆಧುನಿಕ ಸೌಲಭ್ಯಗಳ ಪ್ರಯೋಜನ ಪಡೆದು ತ್ವರಿತವಾಗಿ ಸ್ಪಂದಿಸಲು ಸಾಧ್ಯವಿದೆ. ಅಗತ್ಯಬಿದ್ದರೆ ಉಪಗ್ರಹಗಳ ಸೇವೆ ಪಡೆಯುವ ಅವಕಾಶವು ಲಭ್ಯವಿದೆ. ಆದರೆ ಅದಕ್ಕೆ ಮನಸ್ಸಿಲ್ಲ.

ರಾಜ್ಯದ ಬರಸ್ಥಿತಿ ಅಧ್ಯಯನ ಮಾಡಿ ತಳ್ಳಿ ಹಾಕಲಾಗದಂತಹ ನಿಖರ ದಾಖಲೆ, ಸಾಕ್ಷಿ ವರದಿ ನೀಡಿ ಕೇಂದ್ರದ ಮೇಲೆ ಒತ್ತಡ ಹೇರಲು ಏನು ದಾಡಿಯಾಗಿತ್ತು ಈ ಸದಾನಂದಗೌಡರ ಈ ಬಿಜೆಪಿ ಸರ್ಕಾರಕ್ಕೆ ?

ಏನು ಮಾಡುತ್ತಿದ್ದರು ?

ಬರದ ವಿಚಾರಕ್ಕೆ ಗಮನ ಕೊಡಬೇಕಾದ ಅವಧಿಯಲ್ಲಿ ಬಿಜೆಪಿ ಸಚಿವರು ಏನು ಮಾಡುತ್ತಿದ್ದರು ಮತ್ತು ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದರು ಎಂಬುದನ್ನು ಸ್ವತಃ ಸದಾನಂದಗೌಡರೆ ಇತ್ತೀಚೆಗೆ ಹೇಳಿದ್ದಾರೆ.

ಪತ್ರ ಚಳುವಳಿ-ಕತ್ತಿ ವರಸೆ

ಮು.ಮಂ.ಸದಾನಂದಗೌಡರು ಮತ್ತು ಬಿಜೆಪಿ ರಾಜ್ಯ ಅಧ್ಯಕ್ಷರಾದ ಕೆ.ಎಸ್. ಈಶ್ವರಪ್ಪ ಸೇರಿ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಅವರಿಗೆ ಮೂರು ತಿಂಗಳ ಹಿಂದೆ ಬರೆದ ಪತ್ರವೊಂದು ಇದೀಗ ಬಯಲಾಗಿದೆ.

ಈ ಪತ್ರದಲ್ಲಿ ಬಿಜೆಪಿ ಸಚಿವ ಬಸವರಾಜ ಬೊಮ್ಮಾಯಿ, ಸಚಿವೆ ಶೋಭಾ ಕರಂದ್ಲಾಜೆ ಅವರುಗಳು ಕಾಂಗ್ರೆಸ್ ಪಕ್ಷದೊಂದಿಗೆ ಕೈಜೋಡಿಸಿ ಬಿಜೆಪಿ ಸರ್ಕಾರವನ್ನು ಕೆಡವಲು ಕುತಂತ್ರ ನಡೆಸುತ್ತಿದ್ದು ಅವರ ವಿರುದ್ಧ ಶಿಸ್ತು ಕ್ರಮ ವಹಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಈಗ ತಿಳಿಯಿತಲ್ಲ ? ಬರ ಪರಿಹಾರದ ವಿಚಾರ ಬಿಟ್ಟು ಬಿಜೆಪಿ ಪಕ್ಷದ ಸಚಿವರು, ಮು.ಮ.ಗಳು ಏನು ಮಾಡುತ್ತಿದ್ದರೆಂದು. ಕೆಲವರು 'ಚಟುವಟಿಕೆ' ಮಾಡುತ್ತಿದ್ದರು. ಇನ್ನು ಕೆಲವರು ಅದರ ಬಗೆಗೆ ಪತ್ರ ಬರೆಯುತ್ತಿದ್ದರು. ಚೆನ್ನಾಗಿದೆ. ಇದಲ್ಲವೇ ಸಂಘ ಪರಿವಾರದ ಗರಡಿಯಲ್ಲಿ ರೆಡಿಯಾಗಿ ಬಂದ ಮುಖಂಡರ ಜನಪರ ಕಾಳಜಿ, ಬರಪರ ಕಾಳಜಿ.

ಈಗ ಪತ್ರದ ವಿಚಾರ ಬಹಿರಂಗಗೊಂಡ ಮೇಲೆ ಯಡಿಯೂರಪ್ಪನವರು ಕಿಡಿಕಿಡಿಯಾಗಿ ಹೂಂಕರಿಸುತ್ತಿದ್ದಾರಂತೆ. ಅಂದರೆ ಇನ್ನು ಮುಂದೆಯೂ ಅಷ್ಟೆ. ಜನರಿಗೆ ಬರ ಪರಿಹಾರ ಕಾಮಗಾರಿ, ಪರಿಹಾರ ನೀಡಿಕೆಗಳ ಬದಲಿಗೆ ಬಿಜೆಪಿ ಮುಖಂಡರ ಕುರ್ಚಿ ಎಳೆದಾಟ, ಬೀದಿ ಕಾದಾಟಗಳನ್ನು ನೋಡುವ ಭಾಗ್ಯ.



ಜನಪದ ದರ್ಬಾರ್

ಆರ್.ರಾಮಕೃಷ್ಣ

ಗೊಬ್ಬರ ಕೇಳಿದರೆ ಗುಂಡು ಬಿತ್ತನೆ ಬೀಜ ಕೇಳಿದರೆ....ಲಾಠಿ ಏಟು

ರಾಜ್ಯದಲ್ಲಿ ಅಲ್ಲಲ್ಲಿ ಮುಂಗಾರು ಪೂರ್ವ ಮಳೆಯಾಗಿದೆ. ರೈತರು ಕಳೆದ ವರ್ಷದ ಬರವನ್ನು ಮರೆತು ಬೇಸಾಯಕ್ಕೆ ಸಿದ್ಧವಾಗುತ್ತಿದ್ದಾರೆ. ಹೊಲವನ್ನು ಉತ್ತು ಬಿತ್ತನೆಗೆ ಮುಂದಾಗುತ್ತಿದ್ದಾರೆ. ಉತ್ತದ್ದೇನೋ ಆಯಿತು. ಬಿತ್ತುವುದೇನು ಎಂಬುದೇ ಪ್ರಶ್ನೆ. ಏಕೆಂದರೆ ರಾಜ್ಯದ ನಾನಾ ಭಾಗಗಳಲ್ಲಿ ರೈತರಿಗೆ ಸರಿಯಾಗಿ ಉತ್ತಮ ಬಿತ್ತನೆ ಬೀಜ ಸಿಗುತ್ತಿಲ್ಲ. ಬಿತ್ತನೆ ಬೀಜದ ಅಭಾವ ಉಂಟಾಗಿದೆ.

ಹಾವೇರಿಯಲ್ಲಿ 'ಕನಕ' ಹತ್ತಿ ಬೀಜಕ್ಕಾಗಿ ಕಾದಿದ್ದ ರೈತರ ಮೇಲೆ ಲಾಠಿ ಪ್ರಹಾರ ಮಾಡಲಾಗಿದೆ. ರಸಗೊಬ್ಬರ ಬೇಡಿಕೆ-ಅಗತ್ಯವನ್ನು ಸಮರ್ಪಕವಾಗಿ ಅಂದಾಜು ಮಾಡಿ ವರದಿ ನೀಡಿ, ಬಂದ ರಸಗೊಬ್ಬರವನ್ನು ಸರಿಯಾಗಿ ಹಂಚಿಕೆ ಮಾಡಲಾರದೆ ರಸಗೊಬ್ಬರ ಕಾಳಸಂತೆಕೋರರ ರಕ್ಷಣೆಗಾಗಿ ರೈತರ ಮೇಲೆ ಗೋಲಿಬಾರ್ ನಡೆಸಿ ಇಬ್ಬರು ರೈತರನ್ನು ಕೊಂದ ಯಡಿಯೂರಪ್ಪನವರ ಸರ್ಕಾರದ ಹಾದಿಯಲ್ಲೇ ಹತ್ತಿ ಬೀಜ ಕೇಳಿದ ರೈತರಿಗೆ ಲಾಠಿ ಏಟಿನ ಕೊಡುಗೆ ಕೊಟ್ಟಿದೆ ಸದಾನಂದಗೌಡರ ಸರ್ಕಾರ.

ಹತ್ತಿ ಬೆಳೆದ ರೈತರ ಕಣ್ಣೀರು

ತೊಗರಿ, ಕಬ್ಬು, ಜೋಳ ಇತ್ಯಾದಿ ಬೆಳೆಗಳನ್ನು ಬೆಳೆದ ರೈತರ ಕಣ್ಣೀರಿನ ಕತೆಯ ನಂತರ ಇದೀಗ ಹತ್ತಿ ಬೆಳೆದ ರೈತರ ಕತೆ ಅನಾವರಣಗೊಳ್ಳುತ್ತಿದೆ. ನೀರಿನ ಅಭಾವ, ರಸಗೊಬ್ಬರದ ಕೊರತೆ ಇನ್ನು ಏನೇನೋ ಸಮಸ್ಯೆಗಳನ್ನು ಎದುರಿಸಿ ರೈತರು ಅಷ್ಟಿಷ್ಟು ಬೆಳೆ ಬೆಳೆದರೆ ಈಗ ಮಾರುಕಟ್ಟೆಯಲ್ಲಿ ಬೆಳೆದ ಬೆಳೆಗೆ ಬೆಲೆ ಇಲ್ಲ. ಬೆಂಬಲ ಬೆಲೆ ಘೋಷಿಸಿ ರೈತರ ರಕ್ಷಣೆಗೆ ಮುಂದಾಗಬೇಕಿದ್ದ ಸರ್ಕಾರದ ಮಂತ್ರಿ ಮಹೋದಯರು ಎಲ್ಲಿದ್ದಾರೆ ? ಸರ್ಕಾರಿ ಆಡಳಿತ ಯಂತ್ರ ಎಲ್ಲಿದೆ, ಏನು ಮಾಡುತ್ತಿದೆ ಎಂಬುದೇ ಜನರಿಗೆ ಅರ್ಥವಾಗುತ್ತಿಲ್ಲ. ಟನ್ ಹತ್ತಿಗೆ ಏಳೆಂಟು ಸಾವಿರ ಇದ್ದ ಬೆಲೆ ಈಗ ರೈತರು ಮಾರುಕಟ್ಟೆಗೆ ಹತ್ತಿ ತರುವ ಹೊತ್ತಿಗೆ ಅದರ ಕಾಲುಭಾಗಕ್ಕಿಂತ ಕಮ್ಮಿ ಪ್ರಮಾಣಕ್ಕೆ ಕುಸಿದಿದೆ. ಎಂದಿನಂತೆ ಬಿಜೆಪಿ ಸರ್ಕಾರ ಮುಗುಂ ನೆಮ್ಮದಿಯಾಗಿದೆ. ಕೇಂದ್ರ ಸರ್ಕಾರದ ಆಮದು-ರಫ್ತು ನೀತಿ ಬೆಲೆ ಕುಸಿತಕ್ಕೆ ಕಾರಣವಾದರೆ ಬಿಜೆಪಿ ಸರ್ಕಾರ ಸೂಕ್ತ ಬೆಂಬಲ ಬೆಲೆ ನೀಡಿ ಮಾರುಕಟ್ಟೆ ಪ್ರವೇಶಿಸದೇ ರೈತರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ.

“ನಾವು ಗೆದ್ದೇ ಗೆಲ್ಲುತ್ತೇವೆ.....”

–ಪುಟ 2 ರಿಂದ

ಇಂತಹ ಒಂದು ಪರ್ಯಾಯ ಮಾತ್ರವೇ, ಬಂಡವಾಳಶಾಹಿ ಭೂಮಾಲಕ ಆಳ್ವಿಕೆಗೆ ನಿಜವಾದ ಪರ್ಯಾಯವಾಗಲು ಸಾಧ್ಯ. ಅಂತಹ ಒಂದು ಪರ್ಯಾಯದೆಡೆಗೆ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸುವಾಗಲೇ, ಕಾಂಗ್ರೆಸ್ಸೇತರ ಮತ್ತು ಬಿಜೆಪಿಯೇತರ ಪಕ್ಷಗಳ ಜತೆ ಜನರ ಸಮಸ್ಯೆಗಳ ಆಧಾರದಲ್ಲಿ ಸಮನ್ವಯ ಸಾಧಿಸಬೇಕಾದ ಅವಶ್ಯಕತೆ ಬರಬಹುದು. ಈ ಸಮನ್ವಯತೆಯನ್ನೇ ಕಾರ್ಯಕ್ರಮ ಆಧಾರಿತ ಮೂರನೇ ಪರ್ಯಾಯದ ಮಟ್ಟಕ್ಕೆ ಕೊಂಡೊಯ್ಯಬಹುದು ಎಂಬ ಭ್ರಮೆಗೆ ಯಾರೂ ಒಳಗಾಗಬಾರದು ಎಂದು ಕಾರಟ್ ಸ್ಪಷ್ಟಪಡಿಸಿದರು. ನವ ಉದಾರೀಕರಣ ನೀತಿಗಳ ವಿರುದ್ಧದ ಹೋರಾಟವನ್ನು ಬಲಪಡಿಸುವ ಹಾಗೂ ತೀವ್ರಗೊಳಿಸುವ ಮೂಲಕ ಮಾತ್ರವೇ ನಿಜವಾದ ಪರ್ಯಾಯವನ್ನು ರಚಿಸಲು ಸಾಧ್ಯ ಎಂದರು.

ಅಂತಿಮವಾಗಿ, ಸಾಮ್ರಾಜ್ಯಶಾಹಿಗಳ ಮತ್ತು ನವ ಉದಾರೀಕರಣ ನೀತಿಗಳ ವಿರುದ್ಧದ ನಮ್ಮ ರಾಜಿಯಿಲ್ಲದ ನಿರಂತರ ಹೋರಾಟದಿಂದಾಗಿಯೇ ಪಕ್ಷವು ಭಾರಿ ನಷ್ಟವನ್ನು ಅನುಭವಿಸಬೇಕಾಯಿತು ಮತ್ತು ಪ್ರತಿಗಾಮಿ ಶಕ್ತಿಗಳ ದಾಳಿಗಳಿಂದ ಅಮೂಲ್ಯವಾದ ಸಂಗಾತಿಗಳನ್ನು ಕಳೆದುಕೊಳ್ಳಬೇಕಾಯಿತು. ಆದರೆ, ಪಕ್ಷ ಪರಿಸ್ಥಿತಿಯನ್ನು ಎಷ್ಟು ಸದೃಢವಾಗಿ ಎದುರಿಸಿತು ಎನ್ನುವುದನ್ನು ಕಳೆದ ಆರು ತಿಂಗಳುಗಳಲ್ಲಿ ಶಾಖಾ ಮಟ್ಟದಿಂದಲೂ ನಡೆದ ಪಕ್ಷದ ಸಮ್ಮೇಳನಗಳು ತೋರಿಸಿಕೊಟ್ಟವು. ಎಪ್ಪತ್ತರ ದಶಕದಲ್ಲಿ ಅಸಂಖ್ಯಾತ ದಾಳಿಗಳು ಮತ್ತು ಅರೆ ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಎದುರಿಸಿ ನಿಂತ ಬಂಗಾಳ ಘಟಕವು, ಇವತ್ತಿನ ಸನ್ನಿವೇಶವನ್ನು ಎದುರಿಸಲು ಉಕ್ಕಿನಂಥಾ ಶಕ್ತಿಯನ್ನು ಹೊಂದಿದೆ. ರಾಜ್ಯ ಸಮ್ಮೇಳನ ಮತ್ತು ಆ ಸಂದರ್ಭದಲ್ಲಿ ಬ್ರಿಗೇಡ್ ಮೈದಾನದ ಬಹಿರಂಗ ಸಭೆಯಲ್ಲಿ ನೆರೆದ ಜನಸ್ತೋಮವೇ ಇದಕ್ಕೆ ದೃಷ್ಟಾಂತ, ಕೇರಳದಲ್ಲಿ, ಪಕ್ಷದ ಮಹಾಧಿವೇಶನದ ಮುಂಚಿನ ಚಟುವಟಿಕೆಗಳಲ್ಲಿ ಲಕ್ಷಾಂತರ ಜನರು ಪಾಲ್ಗೊಂಡಿದ್ದರು. ತ್ರಿಪುರಾದಲ್ಲಿ ರಾಜ್ಯ ಸರ್ಕಾರದ ಸಾಧನೆಗಳು ನಮಗೆ ಅನುಕೂಲಕರವಾಗಿವೆ. “ನಾವು ಗೆದ್ದೇ ಗೆಲ್ಲುತ್ತೇವೆ ಮತ್ತು ಬಲಿಷ್ಠರಾಗಿ ಎದ್ದು ಬರುತ್ತೇವೆ” ಎಂಬ ಆತ್ಮವಿಶ್ವಾಸ ಪಕ್ಷದಲ್ಲಿ ತುಂಬಿ ತುಳುಕಾಡುತ್ತಿದೆ’ ಎಂದು 20ನೇ ಮಹಾಧಿವೇಶನದ ಮುಂದೆ ಕಾರಟ್ ನಿರ್ಣಯವನ್ನು ಮಂಡಿಸಿದರು.

ಚರ್ಚೆ ಮತ್ತು ಉತ್ತರ

ಚರ್ಚೆ ಪ್ರಾರಂಭವಾಗುವ ಮುಂಚೆಯೇ, ಕರಡು ರಾಜಕೀಯ ನಿರ್ಣಯಕ್ಕೆ ಮಹಾಧಿವೇಶನದ ಮುಂಚೆಯೇ ಬಂದಿದ್ದ ತಿದ್ದುಪಡಿಗಳ ವರದಿಯನ್ನು ಪ್ರಕಾಶ್ ಕಾರಟ್ ಮಂಡಿಸಿದರು. ಒಟ್ಟು 3,713 ತಿದ್ದುಪಡಿಗಳು ಹಾಗೂ 487 ಸಲಹೆಗಳು ಬಂದಿದ್ದವು. ರಾಜಕೀಯ ತಂತ್ರಗಾರಿಕೆ ಕುರಿತ ಧೋರಣೆ ರೂಪಿಸುವಲ್ಲಿ ಪಕ್ಷದ ಎಲ್ಲ ಹಂತದ ಘಟಕಗಳು ಮತ್ತು ಸದಸ್ಯರುಗಳ ಸಕ್ರಿಯ ಭಾಗವಹಿಸುವಿಕೆಯನ್ನು ಇದು ತೋರಿಸುತ್ತದೆ. ಎಂದಿನಂತೆಯೆ ಅತ್ಯಂತ ಹೆಚ್ಚಿನ ಸಂಖ್ಯೆಯ ತಿದ್ದುಪಡಿಗಳು ಪಶ್ಚಿಮ ಬಂಗಾಳದಿಂದ ಬಂದಿದ್ದವು, ಆನಂತರದ ಸ್ಥಾನವನ್ನು ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕೇರಳ ಪಡೆದಿದ್ದವು. ಹಿಂದೆಂದಿಗಿಂತಲೂ ಹೆಚ್ಚಿನ ತಿದ್ದುಪಡಿಗಳು ಮತ್ತು ಸಲಹೆಗಳು ಪಕ್ಷದ ಬೆಂಬಲಿಗರು ಹಾಗೂ ಹಿತೈಷಿಗಳಿಂದ ಬಂದಿದ್ದವು. ಇವುಗಳಲ್ಲಿ 163 ತಿದ್ದಪಡಿಗಳು ಅಂಗೀಕೃತವಾದವು. ಅವುಗಳಲ್ಲಿ 77 ತಾಂತ್ರಿಕ ಸ್ವರೂಪದ್ದಾಗಿದ್ದವು.

ಏಪ್ರಿಲ್ 5 ರ ಬೆಳಿಗ್ಗೆ ಚರ್ಚೆ ಪ್ರಾರಂಭವಾಯಿತು. 47 ಪ್ರತಿನಿಧಿಗಳು ಭಾಗವಹಿಸಿದ್ದ ಚರ್ಚೆಯು 6 ಗಂಟೆ 10 ನಿಮಿಷಗಳ ಕಾಲ ನಡೆಯಿತು. ಮಾತನಾಡಿದ ಎಲ್ಲಾ ಪ್ರತಿನಿಧಿಗಳು ಹೆಚ್ಚೂ ಕಡಿಮೆ ವರದಿಯಲ್ಲಿ ಮಂಡಿಸಲಾಗಿದ್ದ ರಾಜಕೀಯ ತಂತ್ರಗಾರಿಕೆ ನಿಲುವನ್ನು ಬೆಂಬಲಿಸಿದರು ಮತ್ತು ತಮ್ಮ ಸಲಹೆ ಸೂಚನೆಗಳ ಮೂಲಕ ವರದಿಯನ್ನು ಶ್ರೀಮಂತಗೊಳಿಸಿದರು. ಪ್ರತಿಯೊಬ್ಬರೂ ಹೋರಾಟ ನಿರತ ಬಂಗಾಳದ ಸಂಗಾತಿಗಳ ಜತೆ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದರು ಮತ್ತು ಖಂಡಿತವಾಗಿಯೂ ಕಷ್ಟದ ಪರಿಸ್ಥಿತಿಯಿಂದ ಹೊರ ಬಂದೇ ಬರುತ್ತೇವೆ ಎಂದು ಹೇಳಿದರು.

ಪಕ್ಷವನ್ನು ಬಲಪಡಿಸುವ ಸಲುವಾಗಿ ಮತ್ತು ವಿಸ್ತರಿಸುವ ನಿಟ್ಟಿನಲ್ಲಿ ಪ್ರಾದೇಶಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ನಿರಂತರ ನಿರ್ಣಾಯಕ ಹೋರಾಟ ಮಾಡಬೇಕಾದ ಅಗತ್ಯತೆಯ ಬಗ್ಗೆ ಅನೇಕರು ಒತ್ತು ಕೊಟ್ಟು ಮಾತನಾಡಿದರು. ಪಕ್ಷವು ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಳ್ಳಬೇಕಾದ ಅವಶ್ಯಕತೆ ಕುರಿತು ಬೆಳಕು ಚೆಲ್ಲಿದರು. ಆ ಜನ ವಿಭಾಗಗಳ ನಡುವೆ ಬೆಳೆಯುತ್ತಿರುವ ಅಸ್ತಿತ್ವ ರಾಜಕೀಯ (ಐಡೆಂಟಿಟಿ ಪಲಿಟಿಕ್ಸ್)ದ ಪ್ರಭಾವವನ್ನು ಹಿಮ್ಮೆಟ್ಟಿಸಲು ಇದು ಸಹಾಯಕವಾಗುತ್ತದೆ ಎಂದರು. ದೇಶವನ್ನು ಕಾಡುತ್ತಿರುವ ಗಂಭೀರ ಕೃಷಿ ಬಿಕ್ಕಟಿನ ಬಗ್ಗೆ ಅಖಿಲ ಭಾರತ ಮಟ್ಟದ ನಿರಂತರ ಹೋರಾಟವನ್ನು ಮಾಡದಿರುವುದಕ್ಕೆ ಕೆಲವರು ತಮ್ಮ ಅಸಮಾಧಾನ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಾದರೂ ಇದನ್ನು ಸರಿಪಡಿಸಬೇಕೆಂದು ಆಶಿಸಿದರು. ನಮ್ಮ ಪಾರಂಪರಿಕ ವಲಯದ ಹೊರಗಡೆಯವರ ಸಮಸ್ಯೆಗಳನ್ನು ಗುರುತಿಸಿ ಹೋರಾಟವನ್ನು ಹಮ್ಮಿಕೊಳ್ಳುವುದರ ಮೂಲಕ ದೊಡ್ಡ ಸಂಖ್ಯೆಯಲ್ಲಿ ನಮ್ಮ ಚಳುವಳಿಯಲ್ಲಿ ಜನರನ್ನು ಒಳಗೊಳ್ಳಲು ನಮಗೆ ಸಾಧ್ಯವಾಗಬೇಕು. ಭ್ರಷ್ಟಾಚಾರದ ಸಮಸ್ಯೆ ಜನರ, ಅದರಲ್ಲೂ ಉತ್ತರ ಭಾರತದ ಜನರ ಗಮನ ಸೆಳೆದಿದೆ ಮತ್ತು ಇದರ ಬಗ್ಗೆ ಪಕ್ಷವು ಕ್ರಿಯಾಶೀಲ ಪಾತ್ರವಹಿಸಬೇಕು ಎಂದು ಹಲವರು ಒತ್ತಾಯಿಸಿದರು. ಪ್ರಾದೇಶಿಕ ಪಕ್ಷಗಳ ಜತೆ ಕೆಲಸ ಮಾಡಿದ ರಾಜ್ಯ ಘಟಕಗಳ ಅನುಭವವನ್ನು ಹೇಳಿದ ಕೆಲವು ಪ್ರತಿನಿಧಿಗಳು, ಎಡ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯ ಕಟ್ಟುವ ದಿಸೆಯಲ್ಲಿ ಎಡ ಐಕ್ಯತೆಯನ್ನು ಬಲಪಡಿಸಬೇಕಾದ ಅಗತ್ಯತೆಯ ಬಗ್ಗೆ ಮಾತನಾಡಿದರು. ಸಂಸದೀಯೇತರ ಚಳುವಳಿಗಳನ್ನು ನಡೆಸುವತ್ತ ಹೆಚ್ಚು ಒತ್ತು ನೀಡಬೇಕು ಎಂದು ಕೂಡ ಕೆಲವು ಪ್ರತಿನಿಧಿಗಳು ಮಾತನಾಡಿದರು.

ಏಪ್ರಿಲ್ 6 ರ ಬೆಳಿಗ್ಗೆ ಚರ್ಚೆಗೆ ಉತ್ತರ ನೀಡಿದ ಪ್ರಕಾಶ್ ಕಾರಟ್ ಪ್ರತಿನಿಧಿಗಳು ಎತ್ತಿದ ಕೆಲವು ವಿಷಯಗಳಿಗೆ ಸಮ್ಮತಿ ಸೂಚಿಸಿದರೆ, ಕೆಲವಕ್ಕೆ ಸ್ಪಷ್ಟನೆ ನೀಡಿದರು ಹಾಗೂ ಇನ್ನು ಕೆಲವನ್ನು ಅಲ್ಲಗಳೆದರು. ಮುಂದಿನ ದಿನಗಳಲ್ಲಿ ಪಕ್ಷದ ಶಕ್ತಿಯನ್ನು ಮತ್ತು ಪಾತ್ರವನ್ನು ಹೆಚ್ಚಿಸುವುದೇ ನಮ್ಮ ಈ ಕ್ಷಣದ ಪ್ರಮುಖ ಕರ್ತವ್ಯ ಎಂದರು. ಮೂರು ರಾಜ್ಯಗಳ ಶಕ್ತಿಯ ಮೇಲೇ ನಾವು ಅವಲಂಬಿತರಾಗದೇ ಒಂದು ಬಲಿಷ್ಠ ಪಕ್ಷವನ್ನು ಕಟ್ಟಲು ಎಲ್ಲರೂ ಮುಂದಾಗಬೇಕು ಎಂದರು. ಪಕ್ಷವನ್ನು ಹೋರಾಟಗಳತ್ತ ಕೊಂಡೊಯ್ಯುವ ಗುರಿ ನಮ್ಮದಾಗಬೇಕು. ನಾವು ಮುಂದೆ ಹೋಗಲು ಬಂಗಾಳವನ್ನು ಮತ್ತೆ ಪಡೆಯುವುದು ಮುಖ್ಯವಾಗುತ್ತದೆ. ಈ ಮಹಾಧಿವೇಶನದಲ್ಲಿ ರಾಜಕೀಯ ನಿರ್ಣಯವನ್ನು ಅಂಗೀಕರಿಸುವುದರಿಂದ ಅವಶ್ಯವಿರುವ ಕಣ್ಣೋಟ ಹಾಗೂ ನಮ್ಮ ಸವಾಲನ್ನು ಎದುರಿಸಲು ಅಗತ್ಯವಿರುವ ಶಕ್ತಿಯೂ ದೊರೆಯುತ್ತದೆ ಎಂದು ಕಾರಟ್ ಹೇಳಿದರು.

ಮಹಾಧಿವೇಶನದ ಪ್ರತಿನಿಧಿಗಳು ಮತ್ತು ವೀಕ್ಷಕರಿಂದ ಬಂದ ತಿದ್ದುಪಡಿಗಳ ವರದಿಯನ್ನು ಪ್ರಕಾಶ್ ಕಾರಟ್ ಮಂಡಿಸಿದ ಮೇಲೆ ಅಂಗೀಕಾರಕ್ಕಾಗಿ ರಾಜಕೀಯ ನಿರ್ಣಯ ಹಾಗೂ ರಾಜಕೀಯ ವಿಮರ್ಶಾ ವರದಿಗಳ ಕರಡುಗಳನ್ನು ಅಧ್ಯಕ್ಷೀಯ ಮಂಡಳಿ ಮತಕ್ಕೆ ಹಾಕಿತು. ಎರಡು ವಿರೋಧ ಹಾಗೂ ಎರಡು ಗೈರುಹಾಜರಿಯ ಹೊರತಾಗಿ ಎರಡೂ ವರದಿಗಳು ಬಹುಮತದಿಂದ ಅಂಗೀಕರಿಸಲ್ಪಟ್ಟವು. ಮುಂದಿನ ಮೂರು ವರ್ಷಗಳಿಗೆ ಪಕ್ಷದ ರಾಜಕೀಯ ತಂತ್ರಗಾರಿಕೆಯನ್ನು ರೂಪಿಸುವ ದೀರ್ಘಕಾಲದ, ಸಾಮೂಹಿಕ, ಪ್ರಜಾಸತ್ತಾತ್ಮಕ ಪ್ರಕ್ರಿಯೆ ಹೀಗೆ ಮುಕ್ತಾಯಗೊಂಡಿತು.

..........ಕದನದ ಕಹಳೆ

ಪುಟ 3 ರಿಂದ

ಲೆಕ್ಕಾಚಾರ ಚಾಲ್ತಿಯಲ್ಲಿದೆ. ಬಿಜೆಪಿಯ ಹೈಕಮಾಂಡ್ ನಲ್ಲಿ ಆದ್ವಾನಿಯಂಥವರು ಸದಾನಂದಗೌಡರಿಗೆ ಈಗ ಪ್ರೋತ್ಸಾಹ ನೀಡುತ್ತಿರುವುದು/ಅನಂತ್ ಕುಮಾರ್ ಡಾ.ವೈ ವಿರುದ್ಧ ಕಾರ್ಯಾಚರಣೆಗೆ ಇಳಿದಿರುವುದು ಬಹಿರಂಗವೇ. ಸುಪ್ರಿಂ ತೀರ್ಪು ಡಾ. ವೈ. ಪರ ಬಂದರೂ ಸಿ.ಎಂ.ಬದಲಿಸುವ ಪ್ರಶ್ನೆಯೇ ಇಲ್ಲವೆಂದು ಹೈಕಮಾಂಡ್ ಹೇಳುತ್ತಿರುವುದು, ಶಾಸಕಾಂಗ ಸಭೆ ಸೇರಿಸಲು ನಿರಾಕರಿಸಿರುವುದು ವೈ ಬಣಕ್ಕೆ ಇನ್ನಷ್ಟು ಆತಂಕ ತಂದಿದೆ. ಹೀಗಾಗಿಯೇ ಅನುಸರಿಸಬೇಕಾದ ಪ್ರತಿತಂತ್ರದತ್ತ ಅವರೀಗ ಮುಖ ಮಾಡಿದ್ದಾರೆ. ಆಪ್ತರ ಗುಪ್ತ ಸಮಾಲೋಚನೆ ಆರಂಭಗೊಂಡಿದೆ. ಅಂದರೆ ಮತ್ತೊಂದು ಸುತ್ತಿನ ಬಹಿರಂಗ ಬಡಿದಾಟ!

ಸಂಪುಟ ವಿಸ್ತರಣೆಯಿಂದ ಭಾರ ಇಳಿದೀತೆ? ಒಳ್ಳೇ ಆಡಳಿತ ಸಿಕ್ಕೀತೇ?

ಈ ಸುತ್ತಿನ ಸಂಪುಟ ವಿಸ್ತರಣೆಯಲ್ಲಿ ಆಕಾಂಕ್ಷಿಗಳಿಗೆಲ್ಲಾ ತೃಪ್ತಿಪಡಿಸಲಾದೀತೆ ಎಂಬ ಪ್ರಶ್ನೆಗೆ ಬಿಜೆಪಿಯಲ್ಲಿ ಉತ್ತರ ಇಲ್ಲ. ಯಾಕೆಂದರೆ ನಾಲ್ಕನೆಯ ಬಣ ಜನಾರ್ದನರೆಡ್ಡಿ ಬಣ ತಮ್ಮನ್ನು ಸಚಿವರನ್ನಾಗಿಸದೇ ಹೋದರೆ ಹೊರ ನಡೆಯುವುದಾಗಿ ಬೆದರಿಕೆ ಒಡ್ಡುತ್ತಿದೆ. ಶ್ರೀರಾಮುಲುರ ಜೊತೆ ಪಾದಯಾತ್ರೆ ಇತ್ಯಾದಿಗಳಲ್ಲಿ ಗುರುತಿಸಿಕೊಂಡಿರುವ ಕೆಲವು ಶಾಸಕರಿಗೆ ನೋಟೀಸ್ ನೀಡುವ ಮಾತನಾಡಿದ್ದ ಪಕ್ಷಾಧ್ಯಕ್ಷ ಈಶ್ವರಪ್ಪನವರಿಗೆ ಆ ಗುಂಪು ಮರು ಸವಾಲು ಹಾಕಿದೆ. ಈಗಲೂ ಬಿಜೆಪಿಯಲ್ಲಿರುವ ಸೋಮಶೇಖರ ರೆಡ್ಡಿ ಮುಂ. ಬಹಿರಂಗವಾಗಿ ಟೀಕಿಸಿ ಮಾತನ್ನಾಡುತ್ತಿರುವುದು ಬಿಜೆಪಿಯ ಅಧಿಕಾರಕ್ಕೆ ಬೆದರಿಕೆಯಾಗಿದೆ. ಹೀಗೆ ಸಂಪುಟ ವಿಸ್ತರಣೆಯಾಗುವವವರೆಗೂ, ನಂತರವೂ ನಿತ್ಯ ಕದನ, ಅಸ್ಥಿರತೆ ತಪ್ಪಿದ್ದಲ್ಲ..ಅಂದರೆ ಅಂತಿಮವಾಗಿ ಉಳಿವ ಪ್ರಶ್ನೆ ಮಂತ್ರಿಮಂಡಲದ ವಿಸರಣೆಯಾಗಿ ಸಿ.ಎಂ. ರ ಹೆಗಲ ಮೇಲಿರುವ 20 ಖಾತೆಗಳ ಭಾರ ಇಳಿದು ರಾಜ್ಯದ ಜನರಿಗೆ ದಕ್ಷ ಆಡಳಿತ ಸಿಕ್ಕಬಹುದೇ ? ಹೌದು ಎಂದು ಹೇಳುವ ಧೈರ್ಯ ಯಾರಿಗಿದೆ. ಸ್ವತಃ ಮುಖ್ಯಮಂತ್ರಿ ಸದಾನಂದಗೌಡರಿಗಾದರೂ ಇದೆಯೋ, ಖಂಡಿತ ಇಲ್ಲ! ಅದರರ್ಥ ಖಾತೆಗಳ ಹಂಚಿಕೆ, ಹೊಸ ಸಚಿವರ ನೇಮಕ ಆಗಬಾರದೆಂದಲ್ಲ. ಅದು ಆಗ ಬೇಕು ನಿಜ, ಆದರೆ ಈಗಿನ ವರಸೆಗಳು ಆ ನಿರೀಕ್ಷೆಗಳನ್ನು ಈಡೇರಿಸುವಂತಿಲ್ಲ.

ಬಾಲಂಗೋಚಿ:

ಗುರುವಂದನೆಗೆಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಸಿದ್ಧಗಂಗಾ ಮಠಕ್ಕೆ ಬಂದು ಹೋದರು. ಬಿಜೆಪಿ ಸರಕಾರದಲ್ಲಿನ ಸಚಿವರಾದ ಶೋಭಾ ಕರಂದ್ಲಾಜೆ, ಬಸವರಾಜ ಬೊಮ್ಮಾಯಿಯವರು ಕಾಂಗ್ರೆಸ್‌ನೊಂದಿಗೆ ಸೇರಿ ಸರಕಾರ ಉರುಳಿಸಲು ಪ್ರಯತ್ನಿಸುತ್ತಿದ್ದಾರೆಂದು ಸದಾನಂದಗೌಡರು ಹೈಕಮಾಂಡ್‌ಗೆ ಬರೆದ ಪತ್ರದಲ್ಲಿ ಹೇಳಿರುವರು.

ಈ ಗುರುವಾರ ಬೆಳಿಗ್ಗೆ ರಾಜಕೀಯದಿಂದ ಬಹುದೂರವಿರುವುದಾಗಿ ಹೇಳುತ್ತಲೇ ಇರುವ ಸರಕಾರದ ಸರ್ವ ಫಲಾನುಭವಿ ಆರ್.ಎಸ್.ಎಸ್.ನ ಮುಖ್ಯಸ್ಥ ಮೈ.ಚ. ಜಯದೇವ ಸಿದ್ಧಗಂಗಾ ಮಠದಲ್ಲಿ ಗುರುವಂದನೆ ಸಲ್ಲಿಸಿ ಹೊರ ಬಂದರು. ಇಲ್ಲೆಲ್ಲಾದರೂ ಯಡಿಯೂರಪ್ಪನವರನ್ನು ಕಂಡಿರಾ, ಬಲ್ಲಿರಾ ! ತೂಗಿ ನೋಡಿ, ತಾಳೆ ಹಾಕಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಿಎಎಆರ್ ಮುಂದೂಡಿಕೆ : ಹಣಕಾಸು ಬಂಡವಾಳಿಗರಿಗೆ ಶರಣಾದ ಯುಪಿಎ-2 ಸರಕಾರ



ವೇದರಾಜ ಎನ್.ಕೆ.

ಯುಪಿಎ-2 ಹಣಕಾಸು ಮಂತ್ರಿಗಳು ಜಿಎಎಆರ್ ಅಂದರೆ ಸಾಮಾನ್ಯ ತಪ್ಪಿಸುವಿಕೆ-ವಿರೋಧಿ ನಿಯಮಗಳ ಜಾರಿಯನ್ನು ಒಂದು ವರ್ಷ ಮುಂದೂಡಿರುವುದಾಗಿ ಪ್ರಕಟಿಸಿದ್ದಾರೆ. ಜಿಎಎಆರ್ ಎಂಬುದು ವಿದೇಶಿ ಹೂಡಿಕೆದಾರರು ಭಾರತದಲ್ಲಿ ತಮ್ಮ ಹೂಡಿಕೆಗಳಿಂದ ಮಾಡುವ ಬಂಡವಾಳ ಗಳಿಕೆಯ ಮೇಲೆ ತೆರಿಗೆ ಕೊಡದೆ ತಪ್ಪಿಸಿಕೊಳ್ಳುವದನ್ನು ತಡೆಯಲು ಭಾರತದ ತೆರಿಗೆ ಕಾನೂನುಗಳನ್ನು ಬಲಪಡಿಸಲಿಕ್ಕಾಗಿ ರೂಪಿಸಿರುವ ನಿಯಮಾವಳಿ. ಕಪ್ಪು ಹಣದ ವಿರುದ್ಧ ಸಾರ್ವಜನಿಕ ಆಕ್ರೋಶ ಹೆಚ್ಚಿರುವ ಹಿನ್ನೆಲೆಯಲ್ಲಿ ಯುಪಿಎ ಹಣಕಾಸು ಮಂತ್ರಿಗಳು ಇದನ್ನು ಜಾರಿ ಮಾಡುವುದಾಗಿ ಹೇಳಿದ್ದರು.

ಆದರೆ ಹಾಗೆ ಹೇಳಿದಂದಿನಿಂದಲೇ ಅದರ ವಿರುದ್ಧ ಅವರ ಮೇಲೆ ಅಂತರಾಷ್ಟ್ರೀಯ ಬಂಡವಾಳ, ಬಹುರಾಷ್ಟ್ರೀಯ ಕಂಪನಿಗಳು ಮತ್ತು ಅವುಗಳ ಪರವಾಗಿ ಅಮೆರಿಕಾದ ಆಡಳಿತ ಬಹಳಷ್ಟು ಒತ್ತಡಗಳನ್ನು ಹೇರಲಾರಂಭಿಸಿದ್ದವು. ಎಷ್ಟೆಂದರೆ, ಅಮೆರಿಕಾದ ಖಜಾನೆ ಕಾರ್ಯದರ್ಶಿ ಎಪ್ರಿಲ್ 2012 ಕ್ಕೆ ಭಾರತಕ್ಕೆ ಅದಕ್ಕಾಗಿಯೇ ಭೇಟಿಯನ್ನೂ ನೀಡಿದರು. ಕೊನೆಗೂ ಯುಪಿಎ-2 ಸರಕಾರ ಈ ಒತ್ತಡಗಳಿಗೆ ಶರಣಾಗಿದೆ. ವಿದೇಶಿ ಹೂಡಿಕೆದಾರರು ಮಾರಿಶಸ್‌ನಂತಹ ತೆರಿಗೆ ಮುಕ್ತಧಾಮಗಳ ಮೂಲಕ ಭಾರತದಲ್ಲಿ ಅಪಾರ ಹೂಡಿಕೆಗಳನ್ನು ಮಾಡಿ, ಅವುಗಳ ಮೇಲೆ ಲಾಭ ಸೂರೆಮಾಡಿದರೂ, 'ದುಪ್ಪಟ್ಟು ತೆರಿಗೆ ತಪ್ಪಿಸುವ ಒಪ್ಪಂದ'(ಡಿಟಿಎಎ)ಗಳನ್ನು ಬಳಸಿಕೊಂಡು, ಇಂತಹ ಗಳಿಕೆಗಳ ಮೇಲೆ ತೆರಬೇಕಾದ ತೆರಿಗೆಗಳನ್ನು ತಪ್ಪಿಸುತ್ತಾ ಬಂದಿದ್ದಾರೆ. ನವ-ಉದಾರೀಕರಣ ವ್ಯವಸ್ಥೆಯಲ್ಲಿ ಭಾರತಕ್ಕೆ ಬರುವ ವಿದೇಶಿ ಹೂಡಿಕೆಗಳಲ್ಲಿ 40ಶೇ. ಇಂತವೇ ಎಂದು ಹೇಳಲಾಗುತ್ತದೆ. ಅಂದರೆ ದೇಶದ ಖಜಾನೆಗೆ ಲಕ್ಷಾಂತರ ಕೋಟಿ ರೂ.ಗಳ ತೆರಿಗೆ ವಂಚನೆಯಾಗುತ್ತಿದೆ. ಇದನ್ನು ತಡೆಯಲು ಜಿಎಎಆರ್ ಜಾರಿಯಾಗಬೇಕಿತ್ತು.

ಇಷ್ಟೇ ಅಲ್ಲ, ಹಣಕಾಸು ಮಂತ್ರಿಗಳು ಈಗಾಗಲೇ ಶ್ರೀಮಂತ ವರ್ಗಗಳಿಗೆ ತಮ್ಮ ಬಜೆಟಿನಲ್ಲಿ ಒದಗಿಸಿದ ರಿಯಾಯಿತಿಗಳು ಸಾಲದೆಂಬಂತೆ ಇನ್ನಷ್ಟು ರಿಯಾಯಿತಿಗಳನ್ನು ಪ್ರಕಟಿಸಿದ್ದಾರೆ- ಖಾಸಗಿ ಇಕ್ವಿಟಿಯ ಮೇಲೆ ಬಂಡವಾಳಗಳಿಗೆ ತೆರಿಗೆಯಲ್ಲಿ ಕಡಿತ, ಆಸ್ತಿ ವ್ಯವಹಾರಗಳ ಮೇಲಿನ ತೆರಿಗೆಗಳನ್ನು ಮತ್ತು ವಿದೇಶಿ ಸಾಲಗಳ ಮೇಲಿನ ತೆರಿಗೆಗಳನ್ನು ಹಿಂತೆಗೆದುಕೊಳ್ಳುವುದಾಗಿಯೂ ಪ್ರಕಟಿಸಿದ್ದಾರೆ.

ದೇಶದ ಕೋಟ್ಯಂತರ ಬಡಜನಗಳು ಬದುಕುಳಿಯಲು ಬೇಕಾದ ಸಬ್ಸಿಡಿಗಳಿಗೆ ಸಂಪನ್ಮೂಲಗಳಿಲ್ಲ ಎನ್ನುತ್ತಾ ಅದನ್ನು ಕಡಿತ ಮಾಡಬೇಕಾಗಿದೆ ಎನ್ನಲೂ ಹೇಸದ ಸರಕಾರ ಅಮೆರಿಕಾದ ಆಳರಸರನ್ನು ಮತ್ತು ದೇಶೀ ಶ್ರೀಮಂತರನ್ನು ಮೆಚ್ಚಿಸಲಿಕ್ಕಾಗಿ ಲಕ್ಷಾಂತರ ಕೋಟಿ ರೂ.ಗಳ ನ್ಯಾಯಬದ್ಧ ಸಂಪನ್ಮೂಲಗಳನ್ನು ಬಿಟ್ಟು ಕೊಡಲು ಈಗ ಸಿದ್ಧವಾಗಿದೆ. ಇದನ್ನು ಬಲವಾಗಿ ವಿರೋಧಿಸಬೇಕೆಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಇರಾನೀ ತೈಲ ಆಮದು ಕಡಿತಕ್ಕೆ ನಿಲ್ಲದ ಒತ್ತಡ

ಜಿಎಎಆರ್ ತಪ್ಪಿಸಲು ಅಮೆರಿಕಾದ ಖಜಾನೆ ಸಚಿವರು ಬಂದರೆ, ಇರಾನಿನಿಂದ ತೈಲ ಆಮದು ಕಡಿತ ಮಾಡಿಸಲು ಸ್ವತಃ ಅಲ್ಲಿಯ ವಿದೇಶಾಂಗ ಸಚಿವರೇ ಬಂದು ಹೋದರು. ತೋರಿಕೆಗೆ ಇದು ನಮ್ಮ ರಾಷ್ಟ್ರೀಯ ಹಿತಾಸಕ್ತಿಯ ಪ್ರಶ್ನೆ ಎಂದು ಯುಪಿಎ-2 ವಕ್ತಾರರು ಹೇಳಿದರೂ ತೈಲ ಆಮದು ಕಡಿತ ಸಾಕಷ್ಟು ಮಾಡಿದ್ದೀರಾ ಎಂದು ಯುಪಿಎ-2 ಸರಕಾರಕ್ಕೆ ಅಮೆರಿಕಾದ ವಿದೇಶಾಂಗ ಸಚಿವೆ ಸರ್ಟಿಫಿಕೇಟ್ ನೀಡಲು ಮುಂದೆ ಬಂದರೂ ಆ ವಕ್ತಾರರು ತುಟಿಪಿಟಕ್ಕೆಂದಿಲ್ಲ. ಇನ್ನಷ್ಟು ಕಡಿತ ಮಾಡಬೇಕಾಗಿದೆ, ಇದರಲ್ಲಿ ಸಹಾಯ ಮಾಡಲು ತಮ್ಮ ಇಂಧನ ಸಂಯೋಜಕರನ್ನು ಕಳಿಸುವ ಹಿಲರಿ ಕ್ಲಿಂಟನ್ ಭರವಸೆಯ ಬಗ್ಗೆಯೂ ಏನೂ ಪ್ರತಿಕ್ರಿಯೆಯಿಲ್ಲ ! ವಿಶ್ವ ಸಂಸ್ಥೆ ಇರಾನ್ ಮೇಲೆ ಹಾಕಿರುವ ನಿರ್ಬಂಧವನ್ನು ಪಾಲಿಸುತ್ತಿದ್ದೇವೆ, ಕಚ್ಚಾತೈಲದ ಆಮದಿನ ಮೇಲೆ ಇಂತಹ ನಿರ್ಬಂಧ ಇಲ್ಲವಲ್ಲಾ ಎಂದು ಹೇಳುವ ಧೈರ್ಯವನ್ನು ನಮ್ಮ ಆಳರಸರು ಪ್ರದರ್ಶಿಸುತ್ತಾರೆ ಎಂದು ಭಾರತದ ಜನತೆಯಂತೂ ನಿರೀಕ್ಷಿಸುತ್ತಾರೆ. ಆದರೆ ಅದು ಈಡೇರುವ ನಿರೀಕ್ಷೆ ಅಲ್ಲ ಎಂಬುದೂ ಗೊತ್ತಿರುವ ಸಂಗತಿಯೇ.



ಇಸ್ರೇಲ್ ಕೂಡ ಪರಮಾಣು ಶಸ್ತ್ರಾಸ್ತ್ರ ಹೊಂದಿರುವಾಗ, ಅದನ್ನು ಬೆಂಬಲಿಸಿರುವ ಅಮೆರಿಕಾ ಇರಾನ್ ಅವನ್ನು ಹೊಂದಬಾರದು ಎಂದು ಹೇಳುವದು ಎಷ್ಟು ಸಾಧು ಎಂಬ ಅಮೆರಿಕನ್ ಆಳರಸರ ಗೋಸುಂಬೆತನವನ್ನು ಬಯಲಿಗೆಳೆದ ಪ್ರಶ್ನೆಗೆ ಹಿಲರಿ ಕ್ಲಿಂಟನ್ ಅದು ಸ್ವಯಂರಕ್ಷಣೆಗೆ ಎಂದರಂತೆ; ಹಾಗಿದ್ದರೆ ಇರಾನಿಗೆ ಸ್ವಯಂರಕ್ಷಣೆಯ ಹಕ್ಕಿಲ್ಲವೇ ಎಂದು ಯುಪಿಎ-2 ಸರಕಾರ ಕೇಳುತ್ತದೆಂಬ ನಿರೀಕ್ಷೆ ಕೂಡ ಅಸಂಭವ.

ಅತ್ತ ಅಮೆರಿಕನ್ ವಿದೇಶಾಂಗ ಸಚಿವೆ ತೀಸ್ತಾ ನದಿ ನೀರಿನ ಪ್ರಶ್ನೆಯ ಬಗ್ಗೆ ಪಶ್ಚಿಮ ಬಂಗಾಲದ ಮುಖ್ಯಮಂತ್ರಿಯೊಡನೆ ಮಾತುಕತೆ ನಡೆಸಿದ್ದಾರಂತೆ. ಇದು ಭಾರತ ಮತ್ತು ಬಾಂಗ್ಲಾದೇಶಗಳ ನಡುವಿನ ದ್ವಿಪಕ್ಷೀಯ ಪ್ರಶ್ನೆ, ಇದಕ್ಕೆ ಮೂರನೇ ದೇಶವಾದ ಅಮೆರಿಕಾ ಏಕೆ ಮೂಗು ತೂರಿಸಬೇಕು, ಅದೂ ಒಂದು ರಾಜ್ಯದ ಮುಖ್ಯಮಂತ್ರಿಯೊಂದಿಗೆ ಚರ್ಚಿಸುವ ಮೂಲಕ-ಎಂದು ಕೇಳುವ ಧೈರ್ಯವನ್ನು ಈ ಯುಪಿಎ-2 ಸರಕಾರ ತೋರಿಲ್ಲ.

ಅಮೆರಿಕನ್ ವಿದೇಶಾಂಗ ಸಚಿವೆಯ ಭೇಟಿಯ ಮತ್ತೊಂದು ಅಜೆಂಡಾ ಚಿಲ್ಲರೆ ವ್ಯಾಪಾರದಲ್ಲಿ ಅಮೆರಿಕನ್ ಮತ್ತು ಇತರ ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ಕೊಡುವಂತೆ ಒತ್ತಾಯವನ್ನು ಹೆಚ್ಚಿಸುವುದು, ಇದಕ್ಕೆ ಪಶ್ಚಿಮ ಬಂಗಾಳದ ಟಿಎಂಸಿ-ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿಗಳ 'ಮನವೊಲಿಸು'ವುದು !

ಇಲ್ಲಿ ಒತ್ತಡ, ಅಲ್ಲಿ ಧಿಮಾಕು!

ಅಮೆರಿಕಾದ ಸಚಿವವರ್ಯರುಗಳು ವಿವಿಧ ವಿಷಯಗಳ ಮೇಲೆ ಒತ್ತಡ ಹೇರಲು ಭಾರತಕ್ಕೆ ಆಗಮಿಸುತ್ತಿದ್ದರೆ, ಅತ್ತ ಭಾರತ ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ) ನಿಯಮಾವಳಿಗಳನ್ನು ಉಲ್ಲಂಘಿಸುತ್ತಿದೆ, ಸೂಕ್ತ ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂದು ಅಮೆರಿಕನ್ ಆಡಳಿತ, ಉದ್ಯಮಿಗಳು ಅಲ್ಲಿಂದಲೇ ಬೆದರಿಸುತ್ತಿದ್ದಾರೆ.

ಅಮೆರಿಕಾದ ಜಾಗತಿಕ ಆಧಿಪತ್ಯದ ಕನಸಿನ ಕೂಸಾದ 'ಸ್ಪೆಶಲ್ ಸೂಪರ್ 301' ಕಾನೂನಿನ ಪ್ರಕಾರ ಭಾರತವನ್ನು ಮತ್ತೊಮ್ಮೆ 'ಆದ್ಯತೆಯ ಪಹರೆ ಪಟ್ಟಿ'ಯಲ್ಲಿ ಸೇರಿಸಲಾಗಿದೆ. ಹಿಂದೊಮ್ಮೆ ಹೀಗೆ ಸೇರಿಸಿದಾಗ ದೇಶಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಈ ಬಾರಿ ಮತ್ತೆ ಅಂತಹ ಕ್ರಮಕ್ಕೆ ಅಮೆರಿಕನ್ ಆಡಳಿತ ಮುಂದಾಗಲು ಕಾರಣ, ಇತ್ತೀಚೆಗೆ ಜರ್ಮನಿಯ ಔಷಧಿ ಕಂಪನಿ ಬಾಯೆರ್ ಪೇಟೆಂಟ್ ಮಾಡಿರುವ ಕ್ಯಾನ್ಸರ್-ವಿರೋಧಿ ಔಷಧಿ 'ನೆಕ್ಸವರ್'ನ ಕಡಿಮೆ ಬೆಲೆಯ ಆವೃತ್ತಿಯನ್ನು ಉತ್ಪಾದಿಸಲು ದೇಶೀ ಕಂಪನಿ ನಾಟ್ಕೊಗೆ ಭಾರತ ಸರಕಾರ 'ಕಡ್ಡಾಯ ಪರವಾನಿಗೆ' ಕೊಟ್ಟಿರುವುದು, ಎನ್ನಲಾಗಿದೆ. ಬೌದ್ಧಿಕ ಆಸ್ತಿ ಹಕ್ಕು ಅಂದರೆ ಪೇಟೆಂಟ್‌ಗಳಿಗೆ ಸಂಬಂಧಪಟ್ಟಂತೆ ಡಬ್ಲ್ಯುಟಿಒದ 'ಟ್ರಿಪ್ಸ್' ಒಪ್ಪಂದದ ಅಡಿಯಲ್ಲಿ ಜಗತ್ತಿನ ಎಲ್ಲೇ ಆದರೂ ಪೇಟೆಂಟ್ ಆದ ಔಷಧಿಗಳನ್ನು ಬೇರೆ ಕಂಪನಿಗಳು ಉತ್ಪಾದಿಸುವಂತಿಲ್ಲ. ಡಬ್ಲ್ಯುಟಿಒಗೆ ಸಹಿ ಹಾಕುವ ಮೊದಲು ಭಾರತದ ಪೇಟೆಂಟ್ ಕಾನೂನು 'ಉತ್ಪನ್ನಗಳ ಪೇಟೆಂಟ್'ನ್ನು ಮಾನ್ಯ ಮಾಡುತ್ತಿರಲಿಲ್ಲ, 'ಪ್ರಕ್ರಿಯೆ ಪೇಟೆಂಟ'ನ್ನು ಮಾತ್ರ ಮಾನ್ಯ ಮಾಡುತ್ತಿತ್ತು. ಅಂದರೆ ಒಂದು ಉತ್ಪನ್ನವನ್ನು ತಯಾರಿಸುವ ಪ್ರಕ್ರಿಯೆಯನ್ನು ಪೇಟೆಂಟ್ ಮಾಡಿಕೊಳ್ಳಬಹುದಿತ್ತು, ಆಗ ಬೇರೆ ಯಾರೂ ಆ ಪ್ರಕ್ರಿಯೆಯಿಂದ ಅದನ್ನು ತಯಾರಿಸುವಂತಿಲ್ಲ, ಆದರೆ ಬೇರೊಂದು ಪ್ರಕ್ರಿಯೆಯಿಂದ ಅಂತಹ ಉತ್ಪನ್ನವನ್ನು ಯಾರಾದರೂ ತಯಾರಿಸಬಹುದಿತ್ತು. ಡಬ್ಲ್ಯುಟಿಒಗೆ ಸಹಿ ಮಾಡಿದ ನಂತರ ಸಾರ್ವತ್ರಿಕ ಪ್ರತಿಭಟನೆಯ ನಡುವೆಯೇ ದೇಶದ ಪೇಟೆಂಟ್ ಕಾನೂನನ್ನು 'ಟ್ರಿಪ್ಸ್'ಗೆ ಅನುಗುಣವಾಗಿ ಬದಲಿಸಲಾಯಿತು. ಆಗ ರಾಷ್ಟ್ರೀಯ ಅಗತ್ಯ ಬಂದಾಗ ಜೀವ ರಕ್ಷಕ ಔಷಧಿಗಳಿಗೆ ಇದನ್ನು ಅನ್ವಯಿಸದಿರಲು 'ಟ್ರಿಪ್ಸ್'ನಲ್ಲಿ ಅವಕಾಶವಿದೆ ಎಂದು ಸಮಜಾಯಿಷಿ ಕೊಡಲಾಯಿತು. ಆದರೆ ಈಗ ಅಮೆರಿಕನ್ ಆಡಳಿತ ಅದನ್ನು ಒಪ್ಪುತ್ತಿಲ್ಲ. ಭಾರತದಲ್ಲಿ ಡಬ್ಲ್ಯುಟಿಒಗೆ ಸಹಿ ಹಾಕುವುದನ್ನು ವಿರೋಧಿಸಿದವರು ನೀಡಿದ ಎಚ್ಚರಿಕೆ ಈಗ ಮತ್ತೊಮ್ಮೆ ನಿಜವಾಗಿದೆ.

ಯುಪಿಎ-2 ಸರಕಾರದ ವಾಣಿಜ್ಯ ಮಂತ್ರಿಗಳಿಗೆ ಇದರಿಂದ 'ಆಘಾತ'ವಾಗಿದೆಯಂತೆ. ಅವರು ಅಮೆರಿಕನ್ ವ್ಯಾಪಾರ ಪ್ರತಿನಿಧಿಗೆ, ಅಮೆರಿಕಾದ ಈ ಕ್ರಮ ದುರದೃಷ್ಟಕರ ಮತ್ತು ಅನ್ಯಾಯಪೂರ್ಣ ಎಂದು ವರ್ಣಿಸಿ ಪತ್ರ ಬರೆದಿದ್ದಾರಂತೆ. ಅಮೆರಿಕಾದ ಆಳರಸರ ನ್ಯಾಯ-ಅನ್ಯಾಯ, ಪ್ರಜಾಪ್ರಭುತ್ವ ಇತ್ಯಾದಿಗಳಿಗೆ ಅವರು ಕೊಡುವ ನಿರೂಪಣೆಗಳೇ ಬೇರೆ ಎಂದು ಯುಪಿಎ-2 ಸರಕಾರದ ಮಂತ್ರಿಗಳ ಅರಿವಿಗೆ ಇನ್ನೂ ಬಂದಿರಲಿಕ್ಕಿಲ್ಲವೇ?

ಸೌರಶಕ್ತಿ ಉದ್ದಿಮೆಯ ಒತ್ತಡ


ಅಮೆರಿಕನ್ ಸೌರ ಶಕ್ತಿ ಉದ್ದಿಮೆದಾರರು ಕೂಡ ಭಾರತವನ್ನು ಡಬ್ಲ್ಯುಟಿಒಗೆ ಎಳೆಯುವಂತೆ ಅಮೆರಿಕನ್ ಸರಕಾರದ ಮೇಲೆ ಒತ್ತಡ ಹಾಕುತ್ತಿದ್ದಾರೆ ಎಂದು ವರದಿಯಾಗಿದೆ. ಭಾರತದ ರಾಷ್ಟ್ರೀಯ ಸೌರಶಕ್ತಿ ಮಿಶನ್ ಸ್ಫಟಿಕೀಯ ಕೋಶಗಳನ್ನು ದೇಶದಲ್ಲೇ ತಯಾರಿಸಬೇಕೆಂದು ವಿಧಿಸಿದೆ. ಇದು ಇಂತಹ ಕೋಶಗಳ ಅಮೆರಿಕನ್ ಉತ್ಪಾದಕರು ಭಾರತದ ಮಾರುಕಟ್ಟೆ ಪ್ರವೇಶಿಸದಂತೆ ಅಡ್ಡಿ ಪಡಿಸುವ ಅಂಶ, ಅದ್ದರಿಂದ ಈ ಅಂಶವನ್ನು ಭಾರತ ಸರಕಾರ ಕೈಬಿಡುವಂತೆ ಮಾಡಬೇಕು ಎಂಬುದು ಆ ಅಮೆರಿಕನ್ ಉತ್ಪಾದಕರ ಒತ್ತಡ. ನವ-ಉದಾರವಾದಿ ವ್ಯವಸ್ಥೆಯಲ್ಲಿ ಬಂಡವಾಳಗಾರರ ಒತ್ತಡದಿಂದ ಸ್ವಾವಲಂಬನೆಯ ನೀತಿಯನ್ನು ಕೈಬಿಟ್ಟಿರುವುದರ ದುಷ್ಫಲ ಇದು. ನಮ್ಮ ದೇಶದಲ್ಲಿ ನಮಗೆ ಬೇಕಾದುದನ್ನು ತಯಾರಿಸಲು ಅಮೆರಿಕನ್ನರ ಅಪ್ಪಣೆ ಪಡೆಯಬೇಕು! ಯುಪಿಎ-2 ವಾಣಿಜ್ಯ ಮಂತ್ರಿಗಳು ಈ ಬಗ್ಗೆ ಏನೂ ಪ್ರತಿಕ್ರಿಯೆ ನೀಡಿದಂತಿಲ್ಲ.

ಜಗದಗಲ

ಶರತ್‌ಚಂದ್ರ

ಯುರೋ ಚುನಾವಣೆಗಳು: 'ಮಿತವ್ಯಯ' ನೀತಿಗೆ ಚಾಟಿಯೇಟು

ಯುರೋಪಿನ ನಾಲ್ಕು ದೇಶಗಳಲ್ಲಿ ನಡೆದ ಪ್ರಮುಖ ಚುನಾವಣೆಗಳಲ್ಲಿ, ಯುರೋ ಬ್ಯಾಂಕುಗಳು ಮತ್ತು ಬಲಪಂಥೀಯ ಸರ್ಕಾರಗಳು 'ಮಿತವ್ಯಯ'ದ ಹೆಸರಿನಲ್ಲಿ ಸಾರ್ವಜನಿಕ ವೆಚ್ಚ ಮತ್ತು ಜನರ.ಆದಾಯದಲ್ಲಿ ಹೇರಿರುವ ಭೀಕರ ಕಡಿತಗಳ ವಿರುದ್ಧ ಜನ ತಮ್ಮ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. 'ಮಿತವ್ಯಯ'ದ ನೀತಿಗಳನ್ನು ಬೆಂಬಲಿಸಿದ, ಜಾರಿ



ಮಾಡಿದ ಪಕ್ಷಗಳು, ವ್ಯಕ್ತಿಗಳು ಮತ್ತು ಸರ್ಕಾರಗಳಿಗೆ ಬುದ್ಧಿ ಕಲಿಸಿದರು. ಇದನ್ನು ಯುರೋಪಿನ ಮೇಲೆ ಯಜಮಾನಿಕೆ ಸ್ಥಾಪಿಸಿದ್ದ 'ಮೆರ್ಕೋಜಿ' (ಜರ್ಮನಿಯ ಛಾನ್ಸಲರ್ ಮೆರ್ಕೆಲ್ ಮತ್ತು ಫ್ರಾನ್ಸಿನ ಸಾರ್ಕೋಜಿ) ಬಲಪಂಥೀಯ ಕೂಟದ ಪತನ ಸಹ ಎಂದೂ ಹೇಳಲಾಗಿದೆ. ಫ್ರಾನ್ಸ್‌ನ ಅಧ್ಯಕ್ಷೀಯ, ಗ್ರೀಕ್ ಪಾರ್ಲಿಮೆಂಟು, ಇಟಲಿಯ ಸ್ಥಳೀಯ ಸಂಸ್ಥೆಗಳ ಮತ್ತು ಮತ್ತು ಜರ್ಮನಿಯ ಪ್ರಾದೇಶಿಕ ಚುನಾವಣೆಗಳ ಅವಕಾಶಗಳನ್ನು ಜನ ಇದಕ್ಕಾಗಿ ಪೂರ್ಣವಾಗಿ ಬಳಸಿಕೊಂಡರು. ಈ ರಾಜಕೀಯ ಸುನಾಮಿಯ ಹೊಡೆತದಿಂದ, ಯುರೋ ಮತ್ತು ಜಗತಿನಾದ್ಯಂತ ಶೇರು ಮಾರ್ಕೆಟು ಕುಸಿಯಿತು. 'ಮಿತವ್ಯಯ'ದ ಹೆಸರಿನಲ್ಲಿ ಹೇರಲಾಗಿರುವ ಭೀಕರ ಕಡಿತದ ನೀತಿಗಳು, ಯುರೋ ನಾಣ್ಯದ ಮತ್ತು ಕೊನೆಗೆ ಯುರೋಪಿನ್ ಒಕ್ಕೂಟ ಭವಿಷ್ಯದ ಬಗೆಗೇ ಗಂಭೀರ ಪ್ರಶ್ನೆ ಚಿಹ್ನೆ ಮೂಡಿದೆ.

> *"ಫ್ರೆಂಚರು ಮತ್ತು ಗ್ರೀಕರು ದಂಗೆ ಎದ್ದಿದ್ದಾರೆ. ಯುರೋಪಿನ ಮತದಾರರು ತಾವು ಅಮೆರಿಕದ ಮತದಾರರಿಗಿಂತ ಬುದ್ಧಿವಂತರು ಎಂದು ತೋರಿಸಿಕೊಟ್ಟಿದ್ದಾರೆ. ಯುರೋಪಿನ ಆರ್ಥಿಕ ನೀತಿಯ ಬಗ್ಗೆ ಜನಮತ ಸಂಗ್ರಹದಂತೆ ಇದ್ದ ಈ ಚುನಾವಣೆಗಳಲ್ಲಿ 'ಮಿತವ್ಯಯ'ದ ನೀತಿಗಳನ್ನು ಜನ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಮಿತವ್ಯಯದ ನೀತಿಯ ಅಂತ್ಯ ಕಾಲ ದೂರವಿಲ್ಲ."*
>
> – ಪಾಲ್ ಕ್ರುಗ್ಮನ್ (ನೊಬೆಲ್ ವಿಜೇತ ಅರ್ಥಶಾಸ್ತ್ರಜ್ಞ)

ಫ್ರಾನ್ಸಿನಲ್ಲಿ 22 ವರ್ಷಗಳ ನಂತರ ಸೋಶಲಿಸ್ಟ್ ವಿಜಯ

ಫ್ರಾನ್ಸ್‌ನಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಎರಡನೇ ಸುತ್ತಿನ ಚುನಾವಣೆಯಲ್ಲಿ ಸೋಶಲಿಸ್ಟ್ ಅಭ್ಯರ್ಥಿ ಫ್ರಾಂಕೋ ಹಾಲಂಡ್ ಪ್ರಸ್ತುತ ಅಧ್ಯಕ್ಷ ನಿಕೊಲಸ್ ಸಾರ್ಕೋಜಿ ಅವರನ್ನು ಸೋಲಿಸಿದ್ದಾರೆ. ಹಾಲಂಡ್ ಶೇ.51.7 ಮತ ಗಳಿಸಿದರೆ, ಸಾರ್ಕೋಜಿ ಶೇ. 48.3 ಮತ ಗಳಿಸಿದ್ದಾರೆ. ಇದರಿಂದ 17 ವರ್ಷಗಳ ಕಾಲ ಫ್ರಾನ್ಸನ್ನು ಆಳಿದ ಬಲಪಂಥೀಯ ರಾಜಕೀಯದ ಯಜಮಾನಿಕೆಯ ಯುಗ ಕೊನೆಗೊಂಡಂತಾಗಿದೆ. ಎರಡನೇ ಮಹಾಯುದ್ಧದ ನಂತರ ಎರಡನೇ ಬಾರಿ ಚುನಾಯಿತನಾಗದ ಕೇವಲ ಎರಡನೇ ಅಧ್ಯಕ್ಷ ಎಂಬ ಅಪಕೀರ್ತಿಯನ್ನೂ ಸಾರ್ಕೋಜಿ ಪಡೆದಿದ್ದಾರೆ. ಮೊದಲ ಸುತ್ತಿನಲ್ಲಿ ಸೋಶಲಿಸ್ಟ್ ಹಾಲಂಡಿಗೆ ಶೇ. 28.6, ಮಾಜಿ ಅಧ್ಯಕ್ಷ ಸಾರ್ಕೋಜಿಗೆ ಶೇ.27.2, ಮುಸ್ಲಿಂ ಮತ್ತು ವಲಸಿಗರ ವಿರೋಧಿ ಅರೆ-ಫ್ಯಾಸಿಸ್ಟ್ ನೇಶನಲ್ ಫ್ರಂಟಿನ ಮರಿನ್ ಲೆ ಪೆನ್ ಗೆ ಶೇ.17.9, ಎಡರಂಗ ಅಭ್ಯರ್ಥಿಗೆ, ಡೆಮೊಕ್ರಾಟಿಕ್ ಚಳುವಳಿಯ ಅಭ್ಯರ್ಥಿಗಳು ಶೇ. 9.1 ಮತ ಗಳಿಸಿದರು. ಇತರ ಶೇ.6.5 ರಷ್ಟು ಮತಗಳನ್ನು 5 ಅಭ್ಯರ್ಥಿಗಳು ಹಂಚಿಕೊಂಡರು.

'ಮಿತವ್ಯಯ'ದ ನೀತಿಯನ್ನು ಮೊದಲಿಂದಲೂ ವಿರೋಧಿಸುತ್ತಾ ಬಂದಿದ್ದ ಹಾಲಂಡ್ ಗೆದ್ದಿರುವುದು ಒಟ್ಟಾರೆಯಾಗಿ ಸಕಾರಾತ್ಮಕ ಬೆಳವಣಿಗೆ. ಆದರೆ ಎರಡನೇ ಸುತ್ತಿನಲ್ಲಿ ವಿಜಯದ ಅಂತರ ಅಷ್ಟು (ಶೇ. 3.4) ನಿರ್ಣಾಯಕವಾಗಿರಲಿಲ್ಲ. ಮೊದಲ ಸುತ್ತಿನಲ್ಲಿ ಮೂರನೇ ಸ್ಥಾನವನ್ನು ವ್ಯಾಪಕ ಮಿತವ್ಯಯ-ವಿರೋಧಿ ಆಕ್ರೋಶ ಇದ್ದಾಗ್ಯೂ ಎಡರಂಗದ ಬದಲು, ಅರೆ-ಫ್ಯಾಸಿಸ್ಟ್ ನೇಶನಲ್ ಫ್ರಂಟ್ ಪಡೆದದ್ದು ಆಶಾದಾಯಕವೇನಲ್ಲ. ಅಂದರೆ ಈಗಲೂ ದೊಡ್ಡ ಜನವಿಭಾಗಗಳನ್ನು, ಈ ಎಲ್ಲಾ ಆರ್ಥಿಕ ಸಮಸ್ಯೆಗಳಿಗೆ ಮುಸ್ಲಿಮರು ಮತ್ತು ಇತರ ವಲಸಿಗರು ಕಾರಣ ಎಂದು ನಂಬಿಸಲು ಇನ್ನೂ ಸಾಧ್ಯ ಎಂಬುದನ್ನು ಇದು ತೋರಿಸುತ್ತದೆ. ಸಾರ್ಕೋಜಿ ಪಕ್ಷ ಹೆಚ್ಚೆಚ್ಚು ತೀವ್ರ ಬಲಪಂಥೀಯ ವಲಸಿಗ-ಮುಸ್ಲಿರಿ ವಿರೋಧಿ ನಿಲುವು ತೆಗೆದುಕೊಳ್ಳುತ್ತಾ, ಇನ್ನು ಮುಂದೆ ನಡೆಯಲಿರುವ ಪಾರ್ಲಿಮೆಂಟು ಚುನಾವಣೆಗಳಲ್ಲಿ ಅರೆ-ಫ್ಯಾಸಿಸ್ಟ್ ನೇಶನಲ್ ಫ್ರಂಟ್ ಜತೆ ಮೈತ್ರಿಕೂಟ ರಚಿಸುವ ಅಪಾಯ ಸಹ ಇದೆ.

ಹಾಲಂಡ್ 10 ಲಕ್ಷ ಯುರೋ ಗಿಂತ ಹೆಚ್ಚು ಆದಾಯ ಇರುವವರಿಗೆ ಶೇ.75 ತೆರಿಗೆ, ಈ ಆದಾಯದಿಂದ ನಿರುದ್ಯೋಗ ನಿವಾರಣೆ ಮತ್ತು ಶಿಕ್ಷಣ ಉತ್ತಮಪಡಿಸುವ, ಹಣ ಕನಿಷ್ಟ ವೇತನ ಹೆಚ್ಚಿಸುವ, ವಿದ್ಯುತ್ ಮತ್ತು ನೀರು, 60 ಸಾವಿರ ಶಿಕ್ಷಕರನ್ನು ನೇಮಿಸುವ, ಜರ್ಮನಿ ಜತೆ ಹಣಕಾಸು ಶಿಸ್ತು ಒಪ್ಪಂದ ನಿರಾಕರಿಸುವ, ಫ್ರಾನ್ಸ್‌ಗೆ ಹಣ ಹೂಡಿಕೆ ಬ್ಯಾಂಕು ರಚಿಸುವ,



ಜನತೆ ಮೇಲಿನ ಕಡಿತಗಳನ್ನು ವಾಪಸು ಪಡೆದು ಉದ್ಯೋಗ ಹೆಚ್ಚಿಸಿ ಬೆಳವಣಿಗೆ ತರುವ ನೀತಿಗಳನ್ನು ಜನತೆಯ ಮುಂದಿಟ್ಟಿದ್ದರು. ಫ್ರಾನ್ಸ್‌ನ ಸರ್ಕಾರ ಹೊಂದಿರುವ ಸಾಲ, ಯುರೋಪ್ ಕೇಂದ್ರ ಬ್ಯಾಂಕಿನ ನೀತಿಗಳನ್ನು ಬದಲಾಯಿಸುವುದು, ಯುರೋ ಪ್ರದೇಶದ ಮೇಲೆ ಹಿಂದೆ ಫ್ರಾನ್ಸ್-ಜರ್ಮನ್ (ಅಥವಾ ಇನ್ನೂ ಹೆಚ್ಚು ಸ್ಪಷ್ಟವಾಗಿ ಹೇಳಬೇಕೆಂದರೆ ಮೆರ್ಕೆಲ್-ಸಾರ್ಕೋಜಿ) ಕೂಟ ಹೊರಿಸಿದ ಆರ್ಥಿಕ ನೀತಿಗಳಿಂದ ಹಿಂತೆಗೆಯುವುದು, ಯುರೋ ಬ್ಯಾಂಕುಗಳ ಶೇರು ಮಾರುಕಟ್ಟೆಯ ಪ್ರತಿರೋಧ ಅಸಹಕಾರ – ಹಾಲಂಡ್ ಎದುರಿಸಲಿರುವ ತೀವ್ರ ಸವಾಲುಗಳು. ಆದರೆ ಅವರ ನೀತಿಗಳಿಗೆ ಸ್ಪಷ್ಟ ಜನಾದೇಶ ಮತ್ತು ಬೆಂಬಲ ಇದೆ. ಫ್ರಾನ್ಸ್‌ನ 22 ಪ್ರದೇಶಗಳಲ್ಲಿ 21 ರಲ್ಲಿ, ಈಚೆಗೆ ನಡೆದ ಸ್ಥಳೀಯ ಚುನಾವಣೆಗಳು ತೋರಿಸಿರುವಂತೆ ಎಡ ರಂಗ ಅಥವಾ ಎಡ-ಗ್ರೀನ್ ರಂಗಕ್ಕೆ ಬಹುಮತ ಇದೆ. ಹಾಲಂಡ್ ಯಾವ ರೀತಿ ಈ ಜನಾದೇಶ ಮತ್ತು ಬೆಂಬಲ ಬಳಸಿ ಸವಾಲುಗಳನ್ನು ಎದುರಿಸುತ್ತಾರೆ, ಎಂಬುದರ ಮೇಲೆ ಫ್ರಾನ್ಸ್, ಯುರೋಪು ಮಾತ್ರವಲ್ಲ ಜಗತ್ತಿನಲ್ಲೇ ಹಣಕಾಸು ಬಂಡವಾಳ ನಡೆಸುತ್ತಿರುವ ಯಜಮಾನಿಕೆ ಹಿಮ್ಮೆಟ್ಟಿಸುವ ಪ್ರಕ್ರಿಯೆ ಆರಂಭವಾಗುತ್ತದೆಯೆ ಎಂಬುದು ಅವಲಂಬಿಸಿರುತ್ತದೆ.

ಇಟಲಿಯಲ್ಲೂ 'ಮಿತವ್ಯಯ'ದ ಪಕ್ಷಗಳಿಗೆ ಮುಖಭಂಗ

ಇಟಲಿಯಲ್ಲೂ ಸುಮಾರು 900 ಸ್ಥಳೀಯ ಸಂಸ್ಥೆಗಳ ಮೇಯರ್ ಮುಂತಾದ ಮುಖ್ಯಸ್ಥ ಸ್ಥಾನಗಳಿಗೆ ನಡೆದ (ಐವರಲ್ಲಿ ಒಬ್ಬ ಮತದಾರ ಭಾಗವಹಿಸಿದ) 'ಮಿನಿ ಸಾರ್ವತ್ರಿಕ' ಚುನಾವಣೆಯಲ್ಲಿ, 'ಮಿತವ್ಯಯ' ಮತ್ತು ಭೀಕರ ಕಡಿತಗಳನ್ನು ಬೆಂಬಲಿಸಿದ ಮಾಜಿ ಪ್ರಧಾನಿ ಬೆರ್ಲೋಸ್ಕೊನಿಯವರ ಪಕ್ಷ ಮತ್ತು ನಾರ್ತರ್ನ ಲೀಗ್ ಎಂಬ ಎರಡು ಪ್ರಮುಖ ಪಕ್ಷಗಳು ಮುಖಭಂಗ ಎನ್ನಬಹುದಾದ ಸೋಲು ಅನುಭವಿಸಿವೆ. ಈ ಎರಡು ಪಕ್ಷಗಳು ಹಿಂದೆ ಅಧಿಕಾರದಲ್ಲಿದ್ದು ಇದೇ ವಿಷಯದ ಮೇಲೆ ಪಾರ್ಲಿಮೆಂಟು ಓಟಲ್ಲಿ ಸೋತಿದ್ದವು. ಗ್ರೀಸಿನಂತೆ ಇಲ್ಲೂ ಒಬ್ಬ ಯುರೋ ಬ್ಯಾಂಕ್ ಅಧಿಕಾರಿ ಮರಿಯೊ ಮೊಂಟಿ ಪ್ರಧಾನಿಯಾಗಿದ್ದ ಹಂಗಾಮಿ 'ರಾಷ್ಟ್ರೀಯ ಸರ್ಕಾರ' ರಚಿಸಿದ್ದವು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ನಡೆದ ಮೊದಲ ಪ್ರಮುಖ ಚುನಾವಣೆ ಇದಾಗಿತ್ತು.

ಈ ಎರಡೂ ಪಕ್ಷಗಳು ತಮ್ಮ ಪ್ರಬಲ ಬೆಂಬಲದ ಹೆಚ್ಚಿನ ಸ್ಥಳೀಯ ಸಂಸ್ಥೆಗಳಲ್ಲಿ ಎರಡನೇ ಸ್ಥಾನ ಸಹ ಗಳಿಸದೆ, ಮೊದಲ ಸುತ್ತಿನಲ್ಲೇ ಹೊರಕ್ಕೆ ಹಾಕಲ್ಪಟ್ಟಿವೆ. ಎರಡನೇ ಸುತ್ತಿಗೆ ಬಂದ ಸ್ಥಳಗಳಲ್ಲೂ ಇತರ ಎಲ್ಲಾ ಪಕ್ಷಗಳ ಕೂಟ ಅವನ್ನು ಸೋಲಿಸುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಇಟಲಿಯ ಕಮ್ಯುನಿಸ್ಟ್ ಪಕ್ಷದ ವಾರಸುದಾರ ಡೆಮೊಕ್ರಾಟಿಕ್ ಪಕ್ಷ, ಕಾಮೆಡಿಯನ್ ಗ್ರಿಲ್ಲೊ ಅವರ ಹೊಸ ಪಕ್ಷ, ಈ ಪಕ್ಷಗಳ ನಷ್ಟದಿಂದ ಲಾಭ ಪಡೆದು ಜನಬೆಂಬಲ ಗಳಿಸಿವೆ. ಇದರಿಂದ ಪ್ರಧಾನಿ ಮೊಂಟಿ ಮಿತವ್ಯಯ ಜಾರಿಯಲ್ಲಿ ಇನ್ನಷ್ಟು ಒಂಟಿಯಾಗುವ ಸಾಧ್ಯತೆ ಹೆಚ್ಚಿದೆ.

ಮತದಾನದ ಪ್ರಮಾಣ ಶೇ.74 ರಿಂದ ಶೇ.67ಕ್ಕೆ ಕುಸಿದಿದ್ದು ಜನತೆ ಈಗಿನ ರಾಜಕೀಯ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಳ್ಳುವ ಸೂಚನೆ ಕಂಡು ಬಂದಿದೆ. ಮಾಜಿ ಪ್ರಧಾನಿ ಬೆರ್ಲೋಸ್ಕೊನಿಯವರ ಪಕ್ಷ ಮತ್ತು ನಾರ್ತರ್ನ ಲೀಗ್ ತೀವ್ರ ಭ್ರಷ್ಟಾಚಾರದ ಆಪಾದನೆ ಎದುರಿಸುತ್ತಿವೆ. ಬೆರ್ಲೋಸ್ಕೊನಿಯವರು ಹಲವು ಸೆಕ್ಸ್ ಹಗರಣಗಳ ಆಪಾದನೆ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಆದರೆ 'ಮಿತವ್ಯಯ' ಮತ್ತು ಭೀಕರ ಕಡಿತ ಪ್ರಮುಖ ವಿಷಯವಾಗಿರುವುದು ಸ್ಪಷ್ಟ. ಸದ್ಯದಲ್ಲೇ ಪಾರ್ಲಿಮೆಂಟರಿ ಚುನಾವಣೆಗಳು ನಡೆಯಲಿದ್ದು, ಬಲಪಂಥೀಯ ಪಕ್ಷಗಳು ಪುನಃ ಆರಿಸಿ ಬರುವ ಸಾಧ್ಯತೆ ತುಂಬಾ ಕಡಿಮೆ. ಭೀಕರ ಕಡಿತಗಳನ್ನು ಹಿಂತೆಗೆದುಕೊಳ್ಳುವುದಲ್ಲದೆ, ಯುರೋ ನಾಣ್ಯ ಮತ್ತು ಯುರೋಪಿಯನ್ ಒಕ್ಕೂಟದಲ್ಲಿ ಮುಂದುವರೆಯಬೇಕೆ ಎಂಬುದು ಈ ಚುನಾವಣೆಯಲ್ಲಿ ಮುಖ್ಯ ವಿಷಯವಾಲಿದೆ.

ಸದ್ಯದಲ್ಲೇ ಜರ್ಮನಿಯಲ್ಲಿ ನಡೆದ ಒಂದು ಪ್ರಾಂತೀಯ ಚುನಾವಣೆಗಳಲ್ಲಿ ಸಹ ಮೆರ್ಕೆಲ್ ಅವರ ಆಳುವ ಪಕ್ಷಗಳ ಕೂಟ ಸೋತಿದೆ. ಕಳೆದ ಒಂದು ವರ್ಷದಲ್ಲಿ ನಡೆದ ಹಲವು ಪ್ರಾಂತೀಯ ಚುನಾವಣೆಗಳಲ್ಲಿ ಸಹ ಮೆರ್ಕೆಲ್ ಅವರ ಆಳುವ ಕೂಟದ ಪಕ್ಷಗಳು ಸೋತಿವೆ ಎಂಬುದು ಇದು ಇಡೀ ಯುರೋಪು ವ್ಯಾಪ್ತಿಯ ಪ್ರಕ್ರಿಯೆ ಎಂದು ಸೂಚಿಸುತ್ತಿದೆ. ಒಟ್ಟಾರೆಯಾಗಿ ಹೇಳುವುದಾದರೆ ಇದು ಅತ್ಯಂತ ಸಕಾರಾತ್ಮಕ ಬೆಳವಣಿಗೆ.

→

ಜನಶಕ್ತಿ
ಕನ್ನಡ ವಾರಪತ್ರಿಕೆ

ಹೀಗೊಂದು ಆಡಂಬರವಿಲ್ಲದ ಸರಳ ಸುಂದರ ಮದುವೆ

ಡಿವೈಎಫ್ಐ ಮುಖಂಡರಾದ ಸಂಗಾತಿ ಲಿಂಗರಾಜು ಮತ್ತು ರೇಖಾ ನಾಯಕ್‌ರವರ ಮದುವೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು. ಕಂದಾಚಾರ, ಆಡಂಬರವಿಲ್ಲದ ಈ ಸರಳ ವಿವಾಹ ಸಮಾರಂಭದ ವರದಿ.

ಮೇ 6, 2012 ಭಾನುವಾರ. ಬೆಂಗಳೂರಿನ ಶಾಂತಿ ನಗರ ಬಡಾವಣೆಯ ಸಂತ ಜೋಸೆಫರ ಕಾಲೇಜು ಆವರಣದಲ್ಲಿ ಒಂದು ವಿಶಿಷ್ಟ ಸಂಭ್ರಮದ ವಾತಾವರಣ.

"ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು ? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು ?" ಎಂದು ಘೋಷಿಸುವ ಸುಂದರ ಬ್ಯಾನರ್. ವೇದಿಕೆಯ ಹಿನ್ನೆಲೆಯ ಪರದೆಯಲ್ಲಿ ಬಣ್ಣದ ಬಣ್ಣದ ಹೂವುಗಳು ತುಂಬಿದ ಹೂಗುಚ್ಚಗಳು. ತೇಲಿ ಬರುತ್ತಿರುವ 'ಒಲವೆ ಜೀವನ ಸಾಕ್ಷಾತ್ಕಾರ' ಎಂಬ ಮಧುರ ಗೀತೆ. 'ಓ ನನ್ನ ಚೇತನ ಆಗು ಅನಿಕೇತನ' ಎನ್ನುವ ಭಾವಗೀತೆಗಳು.

ಸಮಾರಂಭದ ಸಂಭ್ರಮವನ್ನು ಕಣ್ತುಂಬಿಕೊಳ್ಳಲು ನೆರೆದವರು ನೂರಾರು ಮಂದಿ. ಹೌದು. ಅದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ)ನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ, ರಾಜ್ಯ ಪದಾಧಿಕಾರಿ ಲಿಂಗರಾಜು ಹಾಗೂ ರೇಖಾ ನಾಯಕ್‌ರವರ ಮದುವೆಯ ಸಂಭ್ರಮದ ಸಮಾರಂಭ.

ಹೆಚ್ಚಿನ ಶಾಸ್ತ್ರಗಳಿಲ್ಲದ, ಸರಳ ವಿವಾಹದ ಈ ಸಂದರ್ಭಕ್ಕೆ ಸಾಕ್ಷಿಯಾದ ಗಣ್ಯರು ಹಲವರು. ವೇದಿಕೆಯಲ್ಲಿ ಗಂಡು-ಹೆಣ್ಣು, ಗಂಡಿನ ತಂದೆ ತಾಯಿಗಳು. ಹೆಣ್ಣಿನ ತಂದೆ ತಾಯಿಗಳು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ. ಜನಶಕ್ತಿ ಕನ್ನಡ ವಾರಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್. ಸಿಐಟಿಯು ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ಗೌರಮ್ಮ. ಖ್ಯಾತ ಸಂಗೀತ ನಿರ್ದೇಶಕ ವಿ. ಮನೋಹರ್, ಮುಂತಾದವರ ಉಪಸ್ಥಿತಿ.

ಬಯ್ಯಾರೆಡ್ಡಿಯವರು ಕೊಟ್ಟ ಹೂವಿನ ಹಾರವನ್ನು ಪರಸ್ಪರ ಕೊರಳಿಗೆ ಹಾಕುವ ಸಾಂಕೇತಿಕ ಕ್ರಿಯೆಯ ಮೂಲಕ ಲಿಂಗರಾಜು-ರೇಖಾ ನಾಯಕ್ ಅವರು ದಾಂಪತ್ಯ ಜೀವನಕ್ಕೆ ಪ್ರವೇಶಿಸಿದರು. ಹಾರ ವಿನಿಮಯ ಹಾಗೂ ತಾಳಿ ಕಟ್ಟುವ ಕೆಲವೇ ಕ್ಷಣಗಳ ಸರಳ ಆಚರಣೆಗಳ ಮೂಲಕ ಶುಭ ವಿವಾಹವೊಂದು ನಡೆದೇ ಹೋಯಿತು. ನಂತರದ್ದು ಶುಭ ಹಾರೈಕೆಗಳ ಘಳಿಗೆ.

ಸರಳ ಸುಂದರ

"ಸರಳ ಸುಂದರ ಮದುವೆ ಇದು. ಜಾತಿ, ಕುಲ, ಸಂಪ್ರದಾಯ, ಪೌರೋಹಿತ್ಯ ಹಂಗಿಲ್ಲದೆ ಎರಡು ಮನಸ್ಸುಗಳು ಒಂದಾಗಿ ಆಗಿರುವ ಅಪರೂಪದ ಮದುವೆಗೆ ನಾವೆಲ್ಲರೂ ಸಾಕ್ಷಿ." ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದವರು ಕನ್ನಡ ಚಿತ್ರ ರಂಗದ ಖ್ಯಾತ ಸಂಗೀತ ನಿರ್ದೇಶಕ ವಿ. ಮನೋಹರ್.

"ಮದುವೆ ಎಂದರೆ ಆಸ್ತಿ, ಬಂಗಾರ, ಹಣದ ಅಸಹ್ಯಕರ ಪ್ರದರ್ಶನದ ಪೈಪೋಟಿಯಂತಾಗಿದೆ. ಕೇವಲ ತಾಳಿ ಇಬ್ಬರು ವ್ಯಕ್ತಿಗಳನ್ನು ಒಂದು ಮಾಡುವುದು ಸಾಧ್ಯವಿಲ್ಲ. ಪರಸ್ಪರ ಗೌರವ, ಪ್ರೀತಿ ಮುಖ್ಯ. ಸಂಪ್ರದಾಯಗಳಿಂದ ಮನುಷ್ಯ ಸಂಬಂಧಗಳನ್ನು ಶಾಶ್ವತವಾಗಿ ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಮದುವೆಗಳಿಗೆ ಕಾನೂನಿನ ಮಾನ್ಯತೆಯೂ ಬೇಕು. ಮದುವೆ ಮಾತ್ರ ಆದರ್ಶವಾಗಬಾರದು. ಜೀವನವೂ ಆದರ್ಶವಾಗಬೇಕು ಎಂದ ಜಿ.ವಿ. ಶ್ರೀರಾಮರೆಡ್ಡಿ ನವ ದಂಪತಿಗಳಿಗೆ ಶುಭ ಹಾರೈಸಿದರು.



"ಇದು ಹೆಣ್ಣು -ಗಂಡಿನ ತಂದೆ ತಾಯಿಗಳಿಗೆ ಸಮಸ್ಯೆಯಾಗದ ಸರಳ ವಿವಾಹ. ಎಷ್ಟೋ ತಂದೆ ತಾಯಿಗಳಲ್ಲಿ ಈ ರೀತಿಯ ಮದುವೆ ಮಾಡಬೇಕೆಂಬ ಆಸೆ ಮನಸ್ಸಿನಲ್ಲಿ ಇರುತ್ತದೆ. ಆದರೆ ಅಕ್ಕ ಪಕ್ಕದವರು ಏನನ್ನುತ್ತಾರೋ ಎಂದುಕೊಂಡು ಹಿಂಜರಿಯುತ್ತಾರೆ. ಜಾತಿ ಕಂದಾಚಾರಗಳ ಹಂಗಿಲ್ಲದ ಇಂತಹ ಸರಳ ವಿವಾಹಗಳ ಒಂದು ಆಂದೋಲನವೇ ನಡೆಯಬೇಕಾಗಿದೆ ಎಂದ ಜಿ.ಸಿ. ಬಯ್ಯಾರೆಡ್ಡಿಯವರು ಸಮುದ್ರ ತೀರದ ರೇಖಾನಾಯಕ್, ಕಾವೇರಿ ನದಿ ತೀರದ ಲಿಂಗರಾಜು ಪರಸ್ಪರ ಪ್ರೀತಿಯಿಂದ ಈ ಸರಳ ವಿವಾಹದ ಮೂಲಕ ಹೊಸ ಜೀವನಕ್ಕೆ ಅಡಿ ಇಟ್ಟಿರುವುದು ಸಂತೋಷದ ವಿಷಯ ಎಂದು ಹೇಳಿ ಶುಭ ಹಾರೈಸಿದರು.

"ಭಾರತದ ಆರ್ಥಿಕತೆ ಎಂದರೆ ಮದುವೆ ಆರ್ಥಿಕತೆ..... ಮದುವೆ ಮಾಡುವುದಕ್ಕಾಗಿ ದುಡಿಯುವುದು. ಮದುವೆ ಮಾಡುವುದಕ್ಕಾಗಿ ಸಾಲ ಮಾಡಿಕೊಳ್ಳುವುದು, ಮತ್ತು ಸಾಲ ತೀರಿಸಲು ದುಡಿಯುವುದು...." ಎನ್ನುವ ಪ್ರಸಿದ್ಧ ಹೇಳಿಕೆಯನ್ನು ನೆನಪಿಸಿ ಮಾತನಾಡಿದ ಪ್ರಸನ್ನ ಕುಮಾರ್ ರವರು ಗಂಡ ಎಂದರೆ ದೇವರಲ್ಲ, ಬದುಕಿನುದ್ದಕ್ಕೂ ಸಹ ಜೀವನ ನಡೆಸುವ ಸ್ನೇಹಿತ ಎಂಬ ಧೋರಣೆ ಇರಬೇಕೆಂದರು.

"ಶಾಸ್ತ್ರ, ಸಂಪ್ರದಾಯ, ಘಳಿಗೆ ನೋಡದೇ ಮದುವೆಯಾದ ಹಲವು ಜೋಡಿಗಳು ನಾವು ಇಲ್ಲೇ ಇದ್ದೇವೆ. ನಾವೆಲ್ಲಾ ಚೆನ್ನಾಗೇ ಇದ್ದೇವೆ. ಏನು ಅನಾಹುತ ಆಗಿಲ್ಲ" ಎಂದ ಗುರುಶಾಂತ್ ಪರಸ್ಪರ ಒಬ್ಬರ ಬಗ್ಗೆ ಒಬ್ಬರಿಗೆ ಗೌರವಿದ್ದರೆ, ಒಬ್ಬರ ಕೆಲಸದ ಬಗ್ಗೆ ಒಬ್ಬರಿಗೆ ಗೌರವ ಇದ್ದರೆ ಸಮಸ್ಯೆಗಳು ಬರಲಾರವು ಎಂದರು. ದುಬಾರಿ ಮದುವೆಗಳ ನಿರರ್ಥಕತೆ ಬಗೆಗೆ ಮಾತನಾಡಿದ ಗೌರಮ್ಮ ನವ ದಂಪತಿಗಳನ್ನು ಅಭಿನಂದಿಸಿದರು. ಡಿವೈಎಫ್ಐನ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಡಿವೈಎಫ್ಐನ ಕರ್ನಾಟಕ ರಾಜ್ಯ ಸಮಿತಿ, ಬೆಂಗಳೂರು ಜಿಲ್ಲಾ ಸಮಿತಿಗಳು ಕಾರ್ಯಕ್ರಮ ಸಂಘಟಿಸಿದ್ದವು.

ಗ್ರೀಸಿನ ಬೇಲೌಟ್ ಶರತ್ತುಗಳ ವಿರುದ್ಧ ಆಕ್ರೋಶದ ಸುನಾಮಿ

ಗ್ರೀಕ್ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ 'ಮಿತವ್ಯಯ' ನೀತಿಗಳನ್ನು ಮತ್ತು ಯುರೋಬ್ಯಾಂಕಿನ ಬೇಲೌಟ್ ಶರತ್ತುಗಳನ್ನು ಬೆಂಬಲಿಸಿದ ಎರಡು ಪ್ರಮುಖ (ನ್ಯೂ ಡೆಮೊಕ್ರಾಟ್ ಮತ್ತು ಪಾಸೊಕ್) ಪಕ್ಷಗಳನ್ನು ಕಿತ್ತು ಹಾಕಿದ್ದಾರೆ. ಕಳೆದ ಚುನಾವಣೆಯಲ್ಲಿ ಈ ಎರಡು ಪಕ್ಷಗಳು ಪಡೆದಿದ್ದ ಶೆ.77 ಮತಗಳು, ಶೇ.32ಕ್ಕೆ ಕುಸಿದಿದೆ. ಶೇ.44 ಮತ ಪಡೆದಿದ್ದ ಪಾಸೊಕ್, ಈ ಬಾರಿ ಶೇ.13 ಮತ ಗಳಿಸಿದೆ. 300 ಸೀಟುಗಳ ಗ್ರೀಕ್ ಪಾರ್ಲಿಮೆಂಟಿನಲ್ಲಿ ಹಿಂದೆ 160 ಸೀಟು ಗಳಿಸಿದ್ದ ಪಾಸೊಕ್, ಈ ಬಾರಿ 41 ಸೀಟು ಮಾತ್ರ ಗಳಿಸಿದೆ. ಶೇ.33 ಮತ ಪಡೆದಿದ್ದ ನ್ಯೂ ಡೆಮೊಕ್ರಾಟ್, ಈ ಬಾರಿ ಶೇ.19 ಮತ ಮಾತ್ರ ಗಳಿಸಿದೆ.

ಇವುಗಳ ಭಾರೀ ನಷ್ಟದ ಪ್ರಮುಖ ಲಾಭ, ಹಲವು ಎಡ ಪಕ್ಷಗಳು ಮತ್ತು ಚಳುವಳಿಗಳ ಕೂಟವಾದ ಸಿರಿಝಾಗೆ ಹೋಗಿದೆ. ಸಿರಿಝಾ 52 ಸೀಟು ಮತ್ತು ಶೇ. 17 ಮತ ಗಳಿಸಿ ಎರಡನೇ ಸ್ಥಾನ ಪಡೆದು ಎಲ್ಲರ ಹುಬ್ಬೇರಿಸಿದೆ. ಕಳೆದ ಚುನಾವಣೆಯಲ್ಲಿ ಶೇ.4.6 ಮತ ಮತ್ತು 13 ಸೀಟುಗಳನ್ನು ಗಳಿಸಿದ ಸಿರಿಝಾ ತನ್ನ ಬೆಂಬಲ ಮೂರು ಪಟ್ಟು ಹೆಚ್ಚಿಸಿಕೊಂಡಿದೆ. ಕಮ್ಯುನಿಸ್ಟ್ ಪಕ್ಷ 26 ಸೀಟು (ಶೇ. 8.5 ಮತ) ಗಳನ್ನು ಮತ್ತು ಇನ್ನೊಂದು ಡೆಮೊಕ್ರಾಟಿಕ್ ಲೆಫ್ಟ್ ಎಂಬ ಹೊಸ ಎಡ ಪಕ್ಷ 21 ಸೀಟು (ಶೇ.6 ಮತ) ಗಳನ್ನು ಪಡೆದಿದೆ. ಗೋಲ್ಡನ್ ಡಾನ್ ಎಂಬ ವಲಸಿಗ-ವಿರೋಧಿ ಪಕ್ಷ 21 ಸೀಟು (ಶೇ.7 ಮತ) ಮತ್ತು 33 ಸೀಟು (ಶೆ.11 ಮತ) ಪಡೆದ ಸ್ವತಂತ್ರ ಗ್ರೀಕ್ ಎಂಬ ಹೊಸ ರಾಷ್ಟ್ರೀಯವಾದಿ ಪಕ್ಷ ಪಾರ್ಲಿಮೆಂಟಿನಲ್ಲಿ ಇರುವ ಇತರ ಪಕ್ಷಗಳು. ಈ ಎರಡು ಪಕ್ಷಗಳು ಸಹ ಬೇಲೌಟ್ ಶರತ್ತುಗಳು ಮತ್ತು ಜರ್ಮನಿಯ ನಿಯಂತ್ರಣದಲ್ಲಿರುವ ಯುರೋ ನಾಣ್ಯ ಮುಂದುವರೆಸುವುದನ್ನು ವಿರೋಧಿಸುತ್ತವೆ.

2008 ರಲ್ಲಿ ಪಾಸೊಕ್ ಸರ್ಕಾರ ರಚಿಸಿದ್ದು ಅದು ಮಿತವ್ಯಯ ಮತ್ತು ಬೇಲೌಟ್ ಶರತ್ತುಗಳು ವಿಷಯದ ಮೇಲೆ ಜನತೆಯ ಆಕ್ರೋಶ ತಾಳಲಾರದೆ ರಾಜೀನಾಮೆ ನೀಡಿತು. ಅದರ ನಂತರ ನ್ಯೂ ಡೆಮೊಕ್ರಾಟ್ ಮತ್ತು ಪಾಸೊಕ್, ಒಬ್ಬ ಯುರೋ ಬ್ಯಾಂಕ್ ಅಧಿಕಾರಿ ಪ್ರಧಾನಿಯಾಗಿದ್ದ ಹಂಗಾಮಿ 'ರಾಷ್ಟ್ರೀಯ ಸರ್ಕಾರ' ರಚಿಸಿದವು. ಈ ಸರ್ಕಾರ ಬೇಲೌಟ್ ಶರತ್ತುಗಳನ್ನು ಒಪ್ಪಿ ಕಡಿತಗಳ ಜಾರಿಗೆ ಮುಂದಾಯಿತು. ಈಗ ಜನಾದೇಶ ಸ್ಪಷ್ಟವಾಗಿ ಅದರ ವಿರುದ್ಧ ಇದೆ. ಅತಿ ದೊಡ್ಡ ಪಕ್ಷವಾದ ನ್ಯೂ ಡೆಮೊಕ್ರಾಟ್ ಪಾಸೊಕ್, ಗೋಲ್ಡನ್ ಡಾನ್ ಮುಂತಾದ ಇತರ ಪಕ್ಷಗಳ ಬೆಂಬಲದಿಂದ ಸರ್ಕಾರ ರಚಿಸಲು ಪ್ರಯತ್ನ ಮಾಡಿ ಸಾಧ್ಯವಾಗದೆ ಕೈಚೆಲ್ಲಿ ಕೂತಿದೆ.

ಈಗ ಎರಡನೇ ದೊಡ್ಡ ಪಕ್ಷವಾದ ಸಿರಿಝಾ ಸರ್ಕಾರ ರಚಿಸಲು ಪ್ರಯತ್ನ ನಡೆಸಿದೆ. ಕಮ್ಯುನಿಸ್ಟ್, ಪಾಸೊಕ್, ಡೆಮೊಕ್ರಾಟಿಕ್ ಲೆಫ್ಟ್ ಮತ್ತು ಇತರ ಪಕ್ಷಗಳ ಬೆಂಬಲ ಪಡೆಯಲು ಮುಂದಾಗಿದೆ. ಸಾರ್ಕೋಜಿ ಸೋಲಿನ ನಂತರ ಜರ್ಮನಿಯ ಛಾನ್ಸಲರ್ ಮರ್ಕೆಲ್ ಈಗ ಒಂಟಿಯಾಗಿದ್ದರೂ, ಹಿಂದಿನ ಸರ್ಕಾರ ಒಪ್ಪಿರುವ ಮಿತವ್ಯಯ ಮತ್ತು ಬೇಲೌಟ್ ಶರತ್ತುಗಳ ಜಾರಿ ಮುಂದುವರೆಸದಿದ್ದರೆ, ಗ್ರೀಸಿಗೆ ಕೊಡಲಾಗಿರುವ ಸಾಲ ತಡೆಹಿಡಿಯಲಾಗುವುದು ಎಂದು ಎಚ್ಚರಿಸಿದ್ದಾರೆ. ಇದೇ ರೀತಿಯ ಎಚ್ಚರಿಕೆಯನ್ನು ಯುರೋ ಬ್ಯಾಂಕ್ ಮತ್ತು ಐಎಂಎಫ್ ಸಹ ನೀಡಿದೆ. ಹಣಕಾಸು ಬಂಡವಾಳ ಮತ್ತು ದುಡಿಯುವ ಜನತೆಯ ನಡುವಿನ ಈ ಹಣಾಹಣಿಯ ಫಲಿತಾಂಶವನ್ನು ಇಡೀ ಜಗತ್ತು ಗಮನಿಸುತ್ತಿದೆ.

ಆದಿವಾಸಿ ವಿದ್ಯಾರ್ಥಿ ವಿಠ್ಠಲ ಮಲೆಕುಡಿಯ ಬಿಡುಗಡೆಗೆ ಆಗ್ರಹಿಸಿ ರಕ್ಷಣಾ ಸಮಿತಿ ರಚನೆ

ನಕ್ಸಲೀಯರೊಂದಿಗೆ ನಂಟಿದೆ ಎಂಬ ಆರೋಪ ಹೊರಿಸಿ ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರು ಗ್ರಾಮದ ಸ್ನಾತಕೋತ್ತರ ವಿದ್ಯಾರ್ಥಿ ವಿಠ್ಠಲ ಮಲೆಕುಡಿಯ ಹಾಗೂ ಅವರ ತಂದೆಯನ್ನು ನಕ್ಸಲ್ ವಿರೋಧಿ ದಳವು ಮಾರ್ಚ್ 3 ರಂದು ಬಂಧಿಸಿ ಜೈಲಿಗೆ ತಳ್ಳಿರುವುದನ್ನು ಖಂಡಿಸಿ, ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿ ಹೋರಾಟವನ್ನು ವಿಸ್ತೃತವಾಗಿ ನಡೆಸಲು ಸಮಾಲೋಚಿಸುವ ಸಭೆಯೊಂದು ಇದೇ ಮೇ 9 ರಂದು ಬೆಂಗಳೂರಿನಲ್ಲಿ ಸೇರಿತ್ತು. ಈ ಸಭೆಯಲ್ಲಿ ವಿವಿಧ ರಂಗಗಳ ಪ್ರಮುಖರು ಭಾಗವಹಿಸಿದ್ದರು.

ನಕ್ಸಲ್‌ರು ಆದಿವಾಸಿ ಜನರನ್ನು ರಕ್ಷಿಸುವ ಬದಲು ಅವರನ್ನು ಗುರಾಣಿಗಳನ್ನಾಗಿ ಮಾಡಿಕೊಂಡು ತಮ್ಮ ಹೋರಾಟಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಒಂದೆಡೆ ಪ್ರಭುತ್ವ ಹಾಗೂ ಮತ್ತೊಂದೆಡೆ ನಕ್ಸಲರ ಹಿಂಸೆಯಿಂದ ಆದಿವಾಸಿಗಳ ಬದುಕು ಬರ್ಬರವಾಗಿದೆ, ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮ ರೆಡ್ಡಿಯವರು ಈ ಸಂದರ್ಭದಲ್ಲಿ ಮಾತನಾಡಿ ಅಭಿಪ್ರಾಯಪಟ್ಟರು.

ನಕ್ಸಲ್ ನಿಗ್ರಹದ ಹೆಸರಿನಲ್ಲಿ ಅಮಾಯಕರ ಬಂಧನ ಕುರಿತು ಕರ್ನಾಟಕ ಆದಿವಾಸಿಗಳ ಹಕ್ಕುಗಳ ಸಮನ್ವಯ ಸಮಿತಿ, ಭಾರತ ವಿದ್ಯಾರ್ಥಿ ಫೆಡರೇಷನ್ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ಗಳು ಬೆಂಗಳೂರು ನಗರದ ಎಸ್.ಸಿ.ಎಂ. ಹೌಸ್‌ನಲ್ಲಿ ಈ ಸಮಾಲೋಚನಾ ಸಭೆಯನ್ನು ಆಯೋಜಿಸಿದ್ದವು. ವಿವಿಧ ಸಂಘಟನೆಗಳ ಐಕ್ಯ ವೇದಿಕೆಯಾದ ರಕ್ಷಣಾ ಸಮಿತಿ ಸಭೆಯಲ್ಲಿ ಜಿ.ವಿ.ಶ್ರೀರಾಮರೆಡ್ಡಿಯವರು ಮುಂದುವರೆದು ಮಾತನಾಡಿ, 'ನಕ್ಸಲ್ ಸಮಸ್ಯೆಯನ್ನು ಸರ್ಕಾರ ಸಾಮಾಜಿಕ ಸಮಸ್ಯೆಯಾಗಿ ಪರಿಗಣಿಸದೆ ಕಾನೂನು ಸಮಸ್ಯೆಯಾಗಿ ಅರ್ಥೈಸಿದೆ. ಪ್ರಭುತ್ವವೇ ನಕ್ಸಲ್ ಹಾಗೂ ಉಗ್ರವಾದಿಗಳ ಸೃಷ್ಟಿಗೆ ಕಾರಣವಾಗಿದೆ' ಎಂದು ಟೀಕಿಸಿದರು.


ಕರ್ನಾಟಕ ಆದಿವಾಸಿಗಳ ಹಕ್ಕುಗಳ ಸಮನ್ವಯ ಸಮಿತಿಯ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ, 'ರಸ್ತೆ, ಕುಡಿಯುವ ನೀರು, ಮನೆಗಳಿಗೆ ಹಕ್ಕುಪತ್ರ ಹಾಗೂ ಜಮೀನುಗಳಿಗೆ ಸಾಗುವಳಿ ಚೀಟಿಗಳಿಲ್ಲದೆ ಆದಿವಾಸಿ ಜನರು ಪ್ರಾಣಿಗಳಿಗಿಂತ ಕೀಳಾಗಿ ಬದುಕುತ್ತಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದ ಸಮೂಹ ಸಂವಹನ ಹಾಗೂ ಪ್ರತಿಕೋದ್ಯಮ ವಿದ್ಯಾರ್ಥಿ ವಿಠಲ ಮಲೆಕುಡಿಯ, ಆತನ ತಂದೆ ನಿಂಗಣ್ಣ ಮಲೆಕುಡಿಯ ಅವರ ಮೇಲೆ ಸುಳ್ಳು ಆರೋಪ ಹೊರಿಸಿ ಬಂಧಿಸಲಾಗಿದೆ. ವಿಠಲನನ್ನು ಬೇಡಿ ಸಮೇತ ಪರೀಕ್ಷಾ ಕೊಠಡಿಗೆ ಹಾಜರುಪಡಿಸಿದ್ದಾರೆ. ಪೊಲೀಸರು ನಿಂಗಣ್ಣನ ಕಾಲು ಮುರಿದಿದ್ದಾರೆ. ಇದು ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ. ಇದರ ವಿರುದ್ಧ ಹೋರಾಟ ಅಗತ್ಯ' ಎಂದರು.

ಹಿರಿಯ ಸಾಹಿತಿ ಪ್ರೊ.ಕೆ. ಮರುಳಸಿದ್ದಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಆದಿವಾಸಿಗಳ ಪರವಾಗಿ ಇತರ ಎಲ್ಲ ಪ್ರಗತಿಪರ ಸಂಘಟನೆಗಳು ಹೋರಾಟ ಮಾಡುವವರೆಗೆ ಆದಿವಾಸಿಗಳ ಮೇಲಿನ ನಕ್ಸಲ್ ಹಿಡಿತ ತಪ್ಪುವುದಿಲ್ಲ. ಆದಿವಾಸಿಗಳ ಸಮಸ್ಯೆ ವಿರುದ್ಧ ದಲಿತರು, ಅಲ್ಪಸಂಖ್ಯಾತರು, ಪ್ರಗತಿಪರರು ಒಟ್ಟಾಗಿ ಹೋರಾಟ ಮಾಡಬೇಕು' ಎಂದರು.

ವಿಠಲ ಮಲೆಕುಡಿಯ ಹಾಗೂ ನಿಂಗಣ್ಣ ಮಲೆಕುಡಿಯ ಬಿಡುಗಡೆಗೆ ಆಗ್ರಹಿಸಿ ವಿಚಾರವಾದಿ ಪ್ರೊ.ಜಿ.ಕೆ ಗೋವಿಂದ ರಾವ್ ನೇತೃತ್ವದಲ್ಲಿ ರಕ್ಷಣಾ ಸಮಿತಿ ರಚಿಸಲಾಯಿತು.



ಹಿರಿಯ ಸಾಹಿತಿ ಪ್ರೊ. ಕೆ. ಮರುಳಸಿದ್ದಪ್ಪ, ಹೋರಾಟಗಾರ್ತಿ ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಜಿ.ವಿ. ಶ್ರೀರಾಮ ರೆಡ್ಡಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಟಿಪ್ಪು ಸುಲ್ತಾನ್ ಸಂಯುಕ್ತ ರಂಗದ ಅಧ್ಯಕ್ಷ ಸರ್ದಾರ್ ಅಹ್ಮದ್ ಖುರೇಷಿ, ರವಿಕೃಷ್ಣರೆಡ್ಡಿ, ವಕೀಲ ಶಂಕರಪ್ಪ ಮುಂತಾದವರನ್ನೊಳಗೊಂಡ ಸಮಿತಿಗೆ ಕಾರ್ಯದರ್ಶಿಗಳಾಗಿ ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ್ ಮೂರ್ತಿ ಆಯ್ಕೆಯಾಗಿದ್ದಾರೆ.



ಸಿಪಿಐ(ಎಂ) ಪಕ್ಷದ ಸಂಸದ ರಾಜೇಶ್‌ರವರು ಈಗಾಗಲೇ ಈ ವಿಷಯವನ್ನು ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸಿದ್ದು ವಿವಿಧ ಪಕ್ಷಗಳಿಂದ ಈ ವಿಚಾರಕ್ಕೆ ಬೆಂಬಲ ವ್ಯಕ್ತವಾಗಿದೆ.

ಸಿಪಿಐ(ಎಂ) ಪೋಲಿಟ್ ಬ್ಯೂರೋ ಸದಸ್ಯರಾದ ಬೃಂದಾ ಕಾರಟ್‌ರವರ ನೇತೃತ್ವದಲ್ಲಿ ಸಿಪಿಐ(ಎಂ) ಸಂಸದರ ನಿಯೋಗವು ರಾಜ್ಯಕ್ಕೆ ಭೇಟಿ ನೀಡಲಿದ್ದು ಮೇ.28 2012 ರಂದು ಬೃಹತ್ ಪ್ರತಿಭಟನಾ ಚಳುವಳಿ ಸೇರಿದಂತೆ ವಿವಿಧ ಹೋರಾಟಗಳ ಕುರಿತು ತೀರ್ಮಾನಿಸಲಾಗಿದ್ದು ಆಳುವ ಸರ್ಕಾರದ ದೌರ್ಜನ್ಯಕಾರಿ ನೀತಿಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಲು ನಿರ್ಧರಿಸಲಾಯಿತು.

ಕವನ

ಅಯ್ಯೋ ರಾಮಾ! ರಾಮಾ!

ಕೇಸರಿ ಕಮಲಕ್ಕೆ ಕಾಮ ಸನ್ನಿ
ನೀಲಿ ಬಣ್ಣವಾಯಿತು ಕೇಸರಿ
ಅಯ್ಯೋ ರಾಮಾ! ಸೀತೆ ಭಕ್ತರು
ನಡೆಸಿದರು ದಿನಕ್ಕೊಂದು
ಕಾಮದಾಟವ,
ಬಯಲಾಯಿತು ಬಣ್ಣ ಕರ್ನಾಟಕದಲಿ.

ರಾಮಾ! ರಾಮಾ! ನಿನ್ನ ಹೆಸರಲಿ,
ಕೇಸರಿ ಸೈತಾನರು ಹೊಡೆದರು ಕೊಳ್ಳೆ
ಕರ್ನಾಟಕ ಜನತೆಯ ಸಂಪತ್ತನು,
ಸೊರಗಿದರು ಜನ, ದಿಕ್ಕೆಟ್ಟರು
ಕಮಲನಂಬಿ
ಕೇಸರಿ ಪುಂಡಾಟಿಕೆಗೆ ಕೊನೆಯಿಲ್ಲವೇ?
ಅಯ್ಯೋ ರಾಮ! ರಾಮಾ!

ನಿನ್ನಿಂದಾಗದು ಬಿಟ್ಟು ಬಿಡು ರಾಮಾ,
ಗುಡಿಯಲ್ಲಿ ಬಂಧಿಸಿರುವರು ನಿನ್ನನು
ಕೇಸರಿ ಭಕ್ತರು, ಜನರೇ ಬಿಡುವರು
ಕಾಮಬಾಣವ ಲೂಟಿ ಹೊಡೆದ
ಕೇಸರಿ ರಾಕ್ಷಸರಿಗೆ, ಸ್ವದೇಶಿ ಬ್ರಿಟೀಶರಿಗೆ.

– ಜೆ.ಎ. ಹಿರೇಮಠ,
ವಕೀಲರು ಹಾವೇರಿ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE. No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH